ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬, ಹೊಸಪೇಟೆ ತಾಲ್ಲೂಕು ಬಳ್ಳಾರಿ ಜಿಲ್ಲೆ.

ಎಂ.ಫಿಲ್. ನಿಬಂಧ

ವಿಷಯ:- ಕನ್ನಡ ಸಾಹಿತ್ಯದಲ್ಲಿ ಪ್ರವಾಸ ಕಥನಗಳ ಆಶಯ ಮತ್ತು ವಿನ್ಯಾಸ

ನೊಂದಣಿ ಸಂಖ್ಯೆ-BMSBKS-00520

2011-12

ಸಂಶೋಧನಕೇಂದ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ.

ಬಿ.ಎಂ.ಶ್ರೀ ಕಲಾಭವನ,

ನರಸಿಂಹರಾಜು ಕಾಲೋನಿ,

ಬೆಂಗಳೂರು-೫೬೦೦೧೯

ಪರಿವಿಡಿ

ಅಧ್ಯಾಯ – 1 ಪ್ರವೇಶ, ಸ್ವರೂಪ ಮತ್ತು ವ್ಯಾಪ್ತಿ.

ಪ್ರವೇಶ : ಪ್ರಾಚೀನ ಕಾಲದಿಂದಲೂ ಪ್ರವಾಸಕ್ಕೂ ಮನುಷ್ಯನಿಗೂ ಬೆಸೆದುಕೊಂಡಿರುವ ನಂಟು ಗಾಢವಾಗಿದೆ. ಇದಲ್ಲದೆ ನಾಗರಿಕತೆಯ ಆರಂಭದಿಂದಲೂ ಫಲವತ್ತಾದ ನದಿ ತೀರಗಳನ್ನು ಶೋಧಿಸ ಹೋದ ಮಾನವನಿಗೆ ಪ್ರವಾಸ ಎನ್ನುವುದು ಅನಿವಾರ್ಯದ ಬದುಕು ಕಂಡುಕೊಳ್ಳುವ ದಾರಿದೀಪವೇ ಆಗಿದ್ದಿತು. ಹೊಸ-ಹೊಸ ಪ್ರದೇಶಗಳು ಮತ್ತು ಭೂ ಖಂಡಗಳ ಅನ್ವೇಷಣೆಯ ಪ್ರವಾಸ ಸವಾಲಾಗಿ ಬಿಟ್ಟಿತು. ಭೂ ಖಂಡಗಳ ಶೋಧನೆಯ ಯಾತ್ರೆಯಲ್ಲಿ ಯಶಸ್ಸು ಪಡೆದ ಕೊಲಂಬಸ್, ವಾಸ್ಕೋಡಗಾಮ, ಅಮೆರಿಕೊ ವೆಸ್ಪೂಚಿ. ಮುಂತಾದ ವಾಣಿಜ್ಯೋದ್ಯಮಿಗಳು, ವಿದೇಶಿ ಯಾತ್ರಿಕರು, ಚರಿತ್ರಾರ್ಹ ಪ್ರವಾಸಿಗಳಾದ ಹ್ಯೂಯನ ತ್ಸಾಂಗ್, ಫಾಹಿಯಾನ್, ಮಾರ್ಕೊಪೋಲೊ, ಅಬ್ದುಲ್ ರಜಾಕ್, ರಾಬರ್ಟ್ ಸೀವೆಲ್ ಇವರು ದಾಖಲಿಸಿದ ಪ್ರವಾಸ ಅನುಭವಗಳ ಕೋಶಗಳೇ ಇತಿಹಾಸದ ಸೃಷ್ಟಿಗೆ ಹಾಗೂ ವಸಾಹತುಶಾಹಿ ಆಡಳಿತಕ್ಕೆ ಬುನಾದಿಯಾದವು.

“ದೇಶ ಸುತ್ತು ಕೋಶ ಓದು” ಎಂಬುದು ಕನ್ನಡದ ಪ್ರಸಿದ್ಧವಾದ ಗಾದೆ. ಪ್ರವಾಸಕ್ಕೆ ಮೊದಲ ಆದ್ಯತೆಯನ್ನು ನೀಡಿ, ಗ್ರಂಥಗಳ ಅಭ್ಯಾಸಕ್ಕೆ ನಂತರದ ಪ್ರಾಶಸ್ತ್ಯವನ್ನು ನೀಡಿದೆ. ಇದರಿಂದ ಪ್ರವಾಸ ಎನ್ನುವುದು ಮನುಷ್ಯನ ಬದುಕಿನಲ್ಲಿ ಎಷ್ಟು ಮಹತ್ತರವಾದ ಜ್ಞಾನದ ಚಿಲುಮೆ ಎಂಬುದು ಮನವರಿಕೆ ಮಾಡಿಕೊಂಡಿದ್ದರು. ದೇಶ ಸುತ್ತಿದ ಮೇಲೆ ಅದೊಂದು ಪೂರ್ಣಅನುಭವದ ಸ್ವರೂಪ ಪಡೆದುಕೊಳ್ಳುತ್ತದೆ. ಎಂದು ನಂಬಿದ್ದರು. ಪ್ರವಾಸವು ಸಂತೋಷಕ್ಕಾಗಿ, ಮನರಂಜನೆಗಾಗಿ ಮತ್ತು ದಿನ ನಿತ್ಯದ ಬದುಕಿನ ಜಂಜಾಟದಿಂದ ಮುಕ್ತಿ ಪಡೆಯಲು ಮನುಷ್ಯನಿಗೆ ಪೂರಕವಾಗಿ ನಿಂತಿದೆ. ಹಾಗೆಯೇ ಇನ್ನೂ ಮುಂದುವರೆದು ಶೋಧನೆಯ ದಾರಿಯಾಗಿ ಕೂಡ ನಿರ್ಮಾಣಗೊಂಡಿದೆ.

ಪ್ರವಾಸವೆಂದಾಗ ಪ್ರಯಾಸವು ಸಹ ಇರುತ್ತದೆ. ಇದು ಹಿಂದಿನಿಂದ ಈಗಿನ ಆಧುನಿಕ ಯುಗದವರೆಗೂ ಬದಲಾಗಿಲ್ಲ ಪ್ರವಾಸದ ಸಂದರ್ಭದಲ್ಲಿ ಅನುಭವಿಸಿದ ಅಡ್ಡಿ ಆತಂಕಗಳು, ಅಪಾಯಗಳು, ಸವಾಲುಗಳು ಮುಂದಿನ ದಾರಿಗೆ ಪೀಠಿಕೆಯಾಗಿ, ಮಾರ್ಗದರ್ಶಕಗಳಾಗಿ ರೂಪುಗೊಂಡವು.

" ಪ್ರಯಾಣವೆಂದರೆ ನನಗೆ ಪ್ರೀತಿಯ ವಿಷಯ. ನಾನು ಪಯಣಿಸಿದಂತೆ ನನ್ನ ಕನಸುಗಳೂ ವೃದ್ಧಿಗಂತವಾಗುತ್ತವೆ. ದೈನಂದಿನ ಜೀವನದಲ್ಲಿ ಕಳೆದುಕೊಂಡ ಸ್ವಾತಂತ್ರ್ಯ ಅಲ್ಲಿ ತಾನೇ ತಾನಾಗಿ ಮೇರೆಯುತ್ತದೆ." (1)

ಪ್ರವಾಸ ಎನ್ನುವುದು ಮನುಷ್ಯನ ಕ್ರಿಯಾಶೀಲ ಜೀವನಕ್ಕೆ ಬಹಳ ಮುಖ್ಯವಾದ ಸಾಧನವಾಗಿದೆ. ತನ್ನ ದೈನಂದಿನ ಚಟುವಟಿಕೆಗಳಿಂದ ಮುಕ್ತಿಯನ್ನು ಪಡೆದುಕೊಳ್ಳಲು, ಆಯಾಸವನ್ನು ನಿವಾರಿಸಿಕೊಳ್ಳಲು ಪ್ರವಾಸ ಉಪಯುಕ್ತ ಆಗಿದೆ. ಮೇಲಿನ ವಿ.ಕೃ.ಗೋಕಾಕ್ ರವರ ಹೇಳಿಕೆಯಂತೆ ಮನುಷ್ಯ ಕ್ರಿಯಾತ್ಮಕ ಜೀವನ ನಡೆಸಲು ಹಾಗೂ ದಿನನಿತ್ಯದ ಜೀವನದಲ್ಲಿ ಕಳೆದುಕೊಂಡ ಸ್ವಾತಂತ್ರ್ಯ ದೇಹಕ್ಕೆ ಮತ್ತು ಮನಸ್ಸಿಗೆ ಬೇಕಾದ ತೃಪ್ತಿ, ಶಾಂತಿ ಅಲ್ಲಿ ತಾನೇ ತಾನಾಗಿ ಲಭಿಸುತ್ತದೆ. ಪಾಶ್ಚಾತ್ಯರಲ್ಲಿ ವಾರದ ಕೊನೆಯ ದಿನಗಳಲ್ಲಿ ಪ್ರವಾಸ ಜೀವನದ ಒಂದು ಭಾಗವಾಗಿ ಆಗಿದೆ. ವಾರದ ಐದು ದಿನಗಳ ಆಯಾಸವನ್ನು, ಕೊನೆಯ ದಿನಗಳಲ್ಲಿ ಕಳೆಯುತ್ತಾರೆ. ಭಾರತೀಯರಲ್ಲಿ ಪ್ರವಾಸ ಎನ್ನುವುದು ಜೀವನದ ಕೊನೆಯಲ್ಲಿ ಅಥವಾ ವೃದ್ಧಾಪ್ಯದಲ್ಲಿ ತೀರ್ಥಯಾತ್ರೆಯ ರೂಪದಲ್ಲಿ ಕಾಣಿಸಿಕೊಳ್ಳುತ್ತಿತ್ತು. ಅದು ಪುಣ್ಯವನ್ನು ಸಂಪಾದಿಸಿಕೊಳ್ಳುವ ಜೀವನದ ಉದ್ದೇಶವಾಗಿರುತ್ತಿತ್ತು. ಇತ್ತೀಚೆಗೆ ಭಾರತೀಯರಲ್ಲೂ ಕೆಲವು ಮಂದಿ ಪಾಶ್ಚಾತ್ಯರ ರೀತಿಯಲ್ಲಿ ವಾರದ ಕೊನೆಯ ದಿನ ಮತ್ತು ರಜಾ ದಿನಗಳಲ್ಲಿ ಪ್ರವಾಸವನ್ನು ಜೀವನದ ಭಾಗವಾಗಿ ಮಾಡಿಕೊಂಡಿದ್ದಾರೆ. ಒಂದೇ ಕಡೆ ಇದ್ದು, ಒಂದೆ ಪರಿಸರ ವಾತಾವರಣದಲ್ಲಿ ಜೀವನ ಪೂರ್ತಿ ಬದುಕು ಸಾಗಿಸುವುದು ಜೀವನದಲ್ಲಿ ಉತ್ಸಾಹ ತರುವುದಿಲ್ಲ, ಜೀವನವನ್ನು ನೀರಸ ಮಾಡಿಬಿಡುತ್ತದೆ. ಬದುಕು ಉತ್ಸಾಹದಿಂದ ಸವಿಯಬೇಕಾದರೆ ಹೊಸ–ಹೊಸ ಪ್ರದೇಶಗಳನ್ನು, ಪರಿಸರವನ್ನು ನೋಡಬೇಕು. ಅದಕ್ಕಾಗಿ ಪ್ರವಾಸ ಎನ್ನುವುದು ಜೀವನದಲ್ಲಿ ನವ ಚೈತ್ರವಾಗಿ, ಚೈತನ್ಯ ಭರಿತವಾಗಿ ನವೀನತೆಯನ್ನು ನೀಡುತ್ತದೆ. ಇದರಿಂದ ಮನುಷ್ಯನ ಮನಸ್ಸು ಯೌವ್ವನಭರಿತ ಆಹ್ಲಾದಕರವಾಗಿ ಮಾರ್ಪಡುತ್ತದೆ.

ಪ್ರವಾಸದಲ್ಲಿ ಅನೇಕ ವಿಧಗಳಿವೆ. ಕಾಲ್ನಡಿಗೆ, ಚಾರಣ, ಭೂಮಾರ್ಗ, ಜಲಯಾನ, ವಿಮಾನಯಾನದಿಂದ ಆರಂಭಿಸಿ ಇಂದು ಅಂತರಿಕ್ಷ ಯಾನದವರೆಗೆ ಪ್ರವಾಸವನ್ನು ಕೈಗೊಳ್ಳಲಾಗುತ್ತಿದೆ.

ಮನುಷ್ಯ ಪ್ರಾರಂಭದಿಂದಲೂ ಭೂಖಂಡಗಳ ಶೋಧನೆ ನಡೆಸಿದ್ದು ವ್ಯಾಪಾರದ ಆಕರ್ಷಣೆಯಿಂದ. ವ್ಯಾಪಾರದ ಉದ್ದೇಶದಿಂದ ನಡೆದ ಶೋಧನೆಗಳು ಪ್ರವಾಸದ ರೂಪದಲ್ಲಿ ಬದಲಾವಣೆಯಾದವು. ಇತಿಹಾಸವನ್ನು ಅವಲೋಕಿಸಿದಾಗ ಕೂಡ ವ್ಯಾಪಾರದ ಆಕರ್ಷಣೆ ಮನುಷ್ಯನ ಅನೇಕ ಸಾಹಸಗಳಿಗೆ ಬುನಾದಿಯಾಗಿದೆ. ಇಂದಿಗೂ ಕೂಡ ವ್ಯಾಪಾರದ ಸಲುವಾಗಿ ಕೇವಲ ಪ್ರಾದೇಶಿಕ

ವಲಯಕ್ಕೆ ಸೀಮಿತವಾಗದೇ ದೇಶ-ವಿದೇಶಗಳಿಗೆ ಪ್ರವಾಸಗಳನ್ನು ಕೈಗೊಳ್ಳುತ್ತಿದ್ದಾರೆ. ಹಲವಾರು ವ್ಯಾಪಾರದ ಮನೋಧರ್ಮದ ಪ್ರವಾಸಿಗರಲ್ಲಿ ಕೆಲವು ಮಂದಿ ಪ್ರವಾಸವನ್ನು ಶೋಧನೆಗಾಗಿ, ಹೊಸತನ್ನು ಸಮಾಜಕ್ಕೆ ನೀಡುವುದಕ್ಕಾಗಿ, ನಿಸರ್ಗದಲ್ಲಿರುವ ಕುತೂಹಲದ ಸಂಗತಿಗಳನ್ನು ತಿಳಿದುಕೊಳ್ಳುವುದಕ್ಕಾಗಿ, ಸಸ್ಯಗಳ ಅಧ್ಯಯನಕ್ಕಾಗಿ, ಜೀವ ಸಂಕುಲಗಳ ಬದುಕನ್ನು ಕಂಡುಕೊಳ್ಳುವುದಕ್ಕಾಗಿ, ಬುಡಕಟ್ಟು, ಆದಿವಾಸಿ ಜನಾಂಗದ ಸಂಸ್ಕೃತಿ, ಜೀವನ, ಆಹಾರ ಇವುಗಳ ಅಧ್ಯಯನಕ್ಕಾಗಿ ಹೀಗೆ ಇನ್ನೂ ಅನೇಕ ರೀತಯಲ್ಲಿ ಯಾವುದೇ ಲಾಭ-ನಷ್ಟದ ಲೆಕ್ಕಾಚಾರ ಇಲ್ಲದೆ ತಮ್ಮ ಸಂತೋಷಕ್ಕಾಗಿ ಪ್ರವಾಸ ಕೈಗೊಳ್ಳುವವರನ್ನು ಕೂಡ ಕಾಣಬಹುದು.

ಸ್ವರೂಪ :

ಪ್ರವಾಸ ಕಥನ ಎಂಬ ಪ್ರಕಾರ ಜಗತ್ತಿನ ಎಲ್ಲಾ ಭಾಷೆಗಳಲ್ಲೂ ಪ್ರಖ್ಯಾತ ಸಾಹಿತ್ಯ ಪ್ರಕಾರವಾಗಿ ರೂಪುಗೊಂಡಿದೆ. ಇದನ್ನು ಇಂಗ್ಲೀಷ್‌ನಲ್ಲಿ "ಟ್ರಾವೆಲೋಗ್ (TRAVELOGUE) ಟ್ರಾವೆಲ್ ಲಿಟರೇಚರ್ (TRAVEL LITERATURE) ಎಂದು ಕರೆಯಲಾಗಿದೆ."(2)

ಪ್ರವಾಸ ಕಥನ ಪ್ರಕಾರ ಪ್ರಖ್ಯಾತ ಪ್ರಕಾರವಾಗಿ ಬೆಳೆಯಲು ಕಾರಣ ವಿಭಿನ್ನವಾದ ದೃಷ್ಟಿಕೋನಗಳನ್ನು ಒಳಗೊಂಡ ವಿಚಾರಗಳು ಲೇಖಕರ ಸೂಕ್ಷ್ಮ ಗ್ರಹಿಕೆ ಹಾಗೂ ನಿರೂಪಣೆಯ ಶೈಲಿ ಪ್ರಮುಖವಾಗಿದೆ. ಕನ್ನಡ ಸಾಹಿತ್ಯದಲ್ಲಿ ಕೂಡ ಪ್ರವಾಸ ಕಥನಗಳು ವಿಶೇಷ ಸ್ಥಾನವನ್ನು ಪಡೆದುಕೊಂಡಿವೆ. ಪ್ರವಾಸ ಕಥನಗಳಲ್ಲಿ ಆರಂಭಿಕ ಪ್ರವಾಸ ಕಥನಗಳು ಬಹುವಾಗಿ ಕ್ಷೇತ್ರ ಪರಿಚಯ, ತೀರ್ಥಯಾತ್ರೆ ಕುರಿತು ಪ್ರಕಟಗೊಂಡಿವೆ. 1925ರಲ್ಲಿ ಪ್ರಕಟವಾದ ವಿ.ಸೀ. ಅವರ ಪಂಪಾಯಾತ್ರೆ ಪ್ರವಾಸ ಸಾಹಿತ್ಯಕ್ಕೇ ಮೈಲಿಗಲ್ಲಾಗಿದೆ. ಶಿವರಾಮ ಕಾರಂತರ 'ಅರಸಿಕರಲ್ಲ', 'ಅಪೂರ್ವ-ಪಶ್ಚಿಮ', ಗೊರೂರು ಅವರ 'ಅಮೆರಿಕಾದಲ್ಲಿ ಗೊರೂರು', ಎ.ಎನ್. ಮೂರ್ತಿರಾಯರ 'ಅಪರವಯಸ್ಕನ ಅಮೆರಿಕಾ ಯಾತ್ರೆ', ಕೃಷ್ಣಾನಂದ ಕಾಮತರ 'ವಂಗದರ್ಶನ', ಎಚ್.ಎಸ್. ರಾಘವೇಂದ್ರರಾಯರ 'ಜನ ಗಣ ಮನ', ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ 'ಅಲೆಮಾರಿಯ ಅಂಡಮಾನ್', ಜಿ.ಎನ್.ಮೋಹನ್ ಅವರ 'ನನ್ನೊಳಗಿನ ಹಾಡು', ನೇಮಿಚಂದ್ರ ಅವರ 'ಪೆರುವಿನ ಪವಿತ್ರ ಕಣಿವೆಯಲ್ಲಿ', ರಹಮತ ತರೀಕೆರೆ ಅವರ 'ಅಂಡಮಾನ್

ಕನಸು' ಮತ್ತು 'ಕದಳಿ ಹೊಕ್ಕು ಬಂದೆ' ಇನ್ನೂ ಮುಂತಾದ ಪ್ರವಾಸ ಕಥನಗಳು ಕನ್ನಡ ಸಾಹಿತ್ಯದಲ್ಲಿ ವಿಶೇಷವಾಗಿ ಗುರುತಿಸಿಕೊಂಡಿವೆ.

ಮನುಷ್ಯನು ತಾನು ನೋಡಿದ, ತಿಳಿದುಕೊಂಡ ವಿಷಯಗಳನ್ನು ಬೇರೊಬ್ಬರಿಗೆ ಹೇಳುವುದರಲ್ಲಿ ಹೆಚ್ಚಿನ ಆಸಕ್ತಿ ಉಳ್ಳವನಾಗಿದ್ದು, ಅದನ್ನೇ ಸಾಹಿತ್ಯ ರಚನೆಯ ಕಡೆಗೆ ಎಳೆದೊಯ್ದಿದ್ದಾನೆ. ಪ್ರವಾಸ ಕಥನ ನಿರ್ದಿಷ್ಟ ಪ್ರಕಾರದಲ್ಲಿಯೇ ಇರಬೇಕೆಂಬ ನಿರ್ಬಂಧ ಇಲ್ಲ. ಗದ್ಯದಲ್ಲಿ ಇರಬಹುದು, ಪದ್ಯದಲ್ಲಿ ಇರಬಹುದು, ದಿನಚರಿ, ವಿಡಂಬನೆ, ಹಾಸ್ಯ, ಅಣುಕು, ಕವನಗಳ ರೂಪಗಳಲ್ಲಿಯೂ ಪ್ರಬಂಧ ಕಾಣಿಸಿಕೊಳ್ಳಬಹುದು.

ಕನ್ನಡದಲ್ಲಿ ಪ್ರಕಟವಾಗಿರುವ ಇತ್ತೀಚಿನ ಪ್ರವಾಸ ಕಥನಗಳಲ್ಲಿ ಅನ್ಯ ದೇಶಗಳ ಸಂಸ್ಕೃತಿ, ಜೀವನ, ಭಾಷೆ, ಭೌಗೋಳಿಕ ಪರಿಸರವನ್ನು ಸ್ವಲ್ಪ ಮಟ್ಟಿಗಾದರೂ ತಿಳಿಯುವ (ಅರಿಯುವ) ಪ್ರಯತ್ನವನ್ನು ಪ್ರವಾಸ ಹೊರಟವರು ಮಾಡಿರುತ್ತಾರೆ. ವ್ಯವಸ್ಥಿತ ಪ್ರವಾಸ (Conducted tour) ಗಳ ಅನುಕೂಲ ಮತ್ತು ಅನಾನುಕೂಲಗಳಿಗಿಂತ ವಿಭಿನ್ನ ರೀತಿಯ ಅನುಭವ ಅಲೆಮಾರಿತನದ ಪ್ರವಾಸದ್ದು, ಪ್ರವಾಗಳ ಕನಸು, ಅನುಭವ ಮತ್ತು ನೆನಪುಗಳು ಹೊಸ–ಹೊಸದಾಗಿ ಇದ್ದಷ್ಟು ಓದುಗರ ಕುತೂಹಲದ ರೆಕ್ಕೆ ಗರಿಗೆದರುತ್ತದೆ. ಪ್ರವಾಸ ಕಥನವನ್ನು ಓದುಗ ಸವಿಯುವಾಗ ಅವರ ಅನುಭವ ಮತ್ತು ಚಿಂತನೆಗಳನ್ನು ತಾನು ಸವಿಯುತ್ತಾನೆ.

ಪ್ರವಾಸ ಕಥನಗಳ ವ್ಯಾಖ್ಯಾನಗಳ ವಿಶ್ಲೇಷಣೆ :

ಇಪ್ಪತ್ತು–ಇಪ್ಪತ್ತೊಂದನೆಯ ಶತಮಾನಗಳಲ್ಲಿ ಅನೇಕ ಪ್ರವಾಸ ಕಥನಗಳು ಪ್ರಕಟಗೊಂಡಿದ್ದು ಸೃಜನಶೀಲ ಸಾಹಿತ್ಯವಾಗಿ ರೂಪುಗೊಂಡಿವೆ. ಪ್ರವಾಸ ಕಥನಗಳ ಪ್ರಾರಂಭಿಕ ನಿಲುವುಗಳು, ಗ್ರಹಿಕೆ, ಆಲೋಚನೆಯ ಕ್ರಮಗಳಲ್ಲಿ ಬದಲಾವಣೆಯನ್ನು ಹೊಂದಿದೆ. ಕಥನಾತ್ಮಕವಾದ ಶೈಲಿ, ನಿರೂಪಣೆ ಕ್ರಮ ಓದುಗನ ದಿನಚರಿಯ ಟಿಪ್ಪಣಿಗಳಾಗಿ ಉಳಿದಿಲ್ಲ. ಸಮಕಾಲೀನ ಸಂದರ್ಭವನ್ನು ಅವಲೋಕಿಸುವ, ತರ್ಕಿಸುವ, ಭೂತ ಮತ್ತು ಭವಿಷ್ಯತ್ತಿನೊಡನೆ ತುಲನೆ ಮಾಡುವ ಹಾಗೂ ವಿಡಂಬಿಸುವ ಸೂಕ್ಷ್ಮವಾದ ಕಾರ್ಯವನ್ನು ಪ್ರವಾಸ ಸಾಹಿತ್ಯವು ನಿರ್ವಹಿಸುತ್ತಿದೆ. ಇಂತಹ ಸನ್ನಿವೇಶದಲ್ಲಿ ಹಲವಾರು ಲೇಖಕರು, ಚಿಂತಕರು ಪ್ರವಾಸ ಕಥನಗಳನ್ನು ಕುರಿತು ತಮ್ಮ ವ್ಯಾಖ್ಯಾನಗಳನ್ನು ನೀಡಿದ್ದಾರೆ.

1) ವಿ.ಸೀತರಾಮಯ್ಯ :

"ಈ ಸಣ್ಣ ಪ್ರಬಂಧದಲ್ಲಿ ಒಂದು ದಿನದ ಅನುಭವಗಳ ವಿವರಣೆ ಇದೆ". (3)

2) ಎ.ಎನ್. ಮೂರ್ತಿರಾವ್ :

"ಇದು ದಿನಚರಿಯೂ ಅಲ್ಲ, ಸಾಮಾನ್ಯ ಕಥನವೂ ಅಲ್ಲ: ಅವೆರಡರ ಬೆರಕೆ, ಆ ಬಗೆಯ ತಲೆ ಚೀಟಿ ಹಚ್ಚದೆ 'ಅನುಭವ ನಿರೂಪಣೆ' ಎಂದು ಕರೆದು ಸುಮ್ಮನಾಗುತ್ತೇನೆ." (4)

3) ಡಾ. ಎಸ್. ವಿದ್ಯಾಶಂಕರ್ :

"ಪ್ರವಾಸ ಕಥನವೆನ್ನುವುದು ವ್ಯಕ್ತಿನಿಷ್ಠ ಸಾಹಿತ್ಯ ಅದು ಭಾವಗೀತೆಯಂತೆ, ಲಲಿತ ಪ್ರಬಂಧದಂತೆ ವೈಯಕ್ತಿಕ ಎಲ್ಲ ಸಾಹಿತ್ಯ ಪ್ರಕಾರಗಳ ಮೂಲ ಸರಕು ಅನುಭವವಾಗಿರುವಂತೆ ಪ್ರವಾಸ ಸಾಹಿತ್ಯಕ್ಕೂ ಅದೇ ಆಗಿದೆ".(5)

4) ಡಾ. ಸಿ.ಪಿ.ಕೃಷ್ಣಕುಮಾರ್ :

"ಶ್ರೇಷ್ಠವಾದ ಪ್ರವಾಸ ಸಾಹಿತ್ಯ ಒಂದೆಡೆ ಮಾಹಿತಿಗಳನ್ನು ಒಳಗೊಂಡಿರಬೇಕು. ವಸ್ತು ನಿಷ್ಠವಾಗಿಯೂ ಇರಬೇಕು. ಇನ್ನೊಂದೆಡೆ ಉತ್ತಮ ಕಲೆಯೂ ಆಗಿರಬೇಕು, ಎಂದರೆ ವ್ಯಕ್ತಿನಿಷ್ಠವಾಗಿಯೂ ಇರಬೇಕು".(6)

5) ಡಾ. ಎನ್.ಎಸ್.ತಾರಾನಾಥ್ :

"ಒಬ್ಬ ವ್ಯಕ್ತಿ ತನ್ನದಾದಂತಹ ಇನ್ನೊಂದು ಊರು/ಜಾಗವನ್ನು ಬಿಟ್ಟು ತನ್ನದಲ್ಲದಂತಹ ಇನ್ನೊಂದು ಊರು/ಜಾಗಕ್ಕೆ ಹೋಗಿ ಆ ಪ್ರದೇಶವನ್ನು ಸುತ್ತಿ ಬಂದು, ಆ ಹೊಸ ಜಾಗದಲ್ಲಿ ಆದಂತಹ ಅನುಭವಗಳನ್ನು ಬಣ್ಣಿಸಿದ ಅಲ್ಲಿ ನೋಡಿದಂತಹ ಪ್ರೇಕ್ಷಣೀಯ ಸ್ಥಳಗಳನ್ನು ವರ್ಣಿಸಿದ, ಅಲ್ಲಿನ ಜನರ ರೀತಿ–ನೀತಿ ಜೀವನ ವಿಧಾನಗಳನ್ನು ವಿವರಿಸಿದ ಸಾಹಿತ್ಯವನ್ನು ಸ್ಥೂಲವಾಗಿ ಪ್ರವಾಸ ಸಾಹಿತ್ಯವೆಂದು ಕರೆಯಬಹುದು".(7)

ವಿ.ಸೀ ರವರು ಪಂಪಾಯಾತ್ರೆಯ ಮುನ್ನುಡಿಯಲ್ಲಿ ಒಂದು ದಿನದ ಅನುಭವಗಳ ವಿವರಣೆಯ ...ಂಧ ಎನ್ನುತ್ತಾರೆ. ಪ್ರವಾಸ ಕಥನವು ವಿ.ಸೀ ಅವರ ಅಭಿಪ್ರಾಯದಲ್ಲಿ ಪ್ರವಾಸದ ಅನುಭವಗಳ

ವರಣೆಯಾಗಿದ್ದು ಪ್ರಬಂಧದ ರೂಪವಾಗಿ ರಚನೆಗೊಂಡಿದೆ. ಇದನ್ನೇ ಎ.ಎನ್.ಮೂರ್ತಿರಾಯರು ಸಹ ನುಭವ ನಿರೂಪಣೆ' ಎನ್ನುತ್ತಾರೆ. ಒಟ್ಟಿನಲ್ಲಿ ವಿ.ಸೀ ಅವರಿಂದ ಹಿಡಿದು ಡಾ.ವಿದ್ಯಾಶಂಕರ್, ಸಿ.ಪಿ.ಕೃಷ್ಣಕುಮರ್, ಡಾ.ಎಸ್.ತಾರಾನಾಥ್ ಸೇರಿದಂತೆ ಎಲ್ಲರ ಹೇಳಿಕೆಯು 'ಅನುಭವ' ವನ್ನು ಲ್ಲೇಖಿಸಿದ್ದಾರೆ. ಪ್ರವಾಸಿಗನಾದ ವ್ಯಕ್ತಿ ತನ್ನ ಪ್ರವಾಸದ 'ಅನುಭವ'ವನ್ನು ಲಿಖಿತ ರೂಪಕ್ಕೆ ಇಳಿಸಿದ್ದಾನೆ. ದು ಪ್ರಬಂಧರೂಪದಲ್ಲಿಯೂ ಇರಬಹುದು, ಭಾವಗೀತೆಯಂತೆಯೂ ಇರಬಹುದು. ಒಟ್ಟಾಗಿ ನುಭವ' ಮೂಲವಾಗಿರುವಂತಹದು.

ತಾರಾನಾಥರವರು ಅನುಭವಗಳನ್ನು ಬಣ್ಣಿಸಿದ, ಅಲ್ಲಿ ನೋಡಿದಂತಹ ಪ್ರೇಕ್ಷಣೀಯ ಸ್ಥಳಗಳನ್ನು ರ್ಣಿಸಿದ ಸಾಹಿತ್ಯ, ಪ್ರವಾಸ ಸಾಹಿತ್ಯ ಎನ್ನುತ್ತಾರೆ. ಪ್ರವಾಸದ ಸಂದರ್ಭದಲ್ಲಿ ನೋಡಿದ ಪ್ರೇಕ್ಷಣೀಯ ಳಗಳನ್ನು ಮಾತ್ರ ವರ್ಣಿಸುವುದಿಲ್ಲ, ಬದಲಾಗಿ ಸಮಕಾಲೀನ ಸಂದರ್ಭವನ್ನು ಗತ ಮತ್ತು ವಿಷ್ಯತ್ತಿನೊಡನೆ ತುಲನೆಯ ಕಾರ್ಯವು ಸಹ ಏರ್ಪಡುತ್ತದೆ.

ಒಟ್ಟಿನಲ್ಲಿ ಪ್ರವಾಸ ಕಥನ (ಸಾಹಿತ್ಯ) ಎಂದರೆ ಪ್ರವಾಸದ ಅನುಭವಗಳ ಜೊತೆಗೆ ಜೀವನದ ನುಭವಗಳ ಮಿಶ್ರ ಅಭಿವ್ಯಕ್ತಿಯಾಗಿ, ಗತವನ್ನು ಸಮಕಾಲೀನ ಸಂದರ್ಭಕ್ಕೆ ತುಲನೆ ಮಾಡುತ್ತ ವಿಷ್ಯವನ್ನು ನಿರ್ಮಿಸುವ ಕಲಾತ್ಮಕ ಸೃಜನಶೀಲತೆಯೇ ಪ್ರವಾಸ ಕಥನ (ಸಾಹಿತ್ಯ) ಎಂದು ಹೇಳಬಹುದು.

ತ್ಯಾಪ್ತಿ :

ಕನ್ನಡದಲ್ಲಿ ಸಾಹಿತ್ಯ ಕಥನಗಳು ಪ್ರಮುಖ ಪಾತ್ರ ವಹಿಸುತ್ತಿದ್ದು ಇತ್ತೀಚೆಗೆ ಅನೇಕ ಕೃತಿಗಳು ವಾಸವನ್ನು ಕುರಿತು ಪ್ರಕಾಶನಗೊಳ್ಳುತ್ತಿದೆ. ಪ್ರವಾಸ ಕಥನಗಳು ಅಧ್ಯಯನ ಯೋಗ್ಯವಾಗಿದ್ದು, ಹುಮುಖಿ ಆಯಾಮಗಳ ಕೃತಿಗಳಾಗಿವೆ. ಆದ್ದರಿಂದ ಎಂ.ಫಿಲ್. ನಿಬಂಧಕ್ಕೆ ಪ್ರವಾಸ ಕಥನಗಳನ್ನು ರಿತ ಅಧ್ಯಯನ ಕೈಗೊಂಡಿದ್ದೇನೆ. ಪ್ರವಾಸ ಕಥನಗಳ ವ್ಯಾಪ್ತಿ ತುಂಬ ವಿಶಾಲವಾಗಿದೆ. ಅಧ್ಯಯನ ಾಗೂ ಕಾಲಾವಧಿಯ ಮಿತಿಯೊಳಗೆ ನಾನು ವಿ.ಸೀ ಅವರ 'ಪಂಪಾಯಾತ್ರೆ', ಶಿವರಾಮ ಕಾರಂತರ ರಸಿಕರಲ್ಲ', ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಅಮೆರಿಕಾದಲ್ಲಿ ಗೊರೂರು', ನೇಮಿಚಂದ್ರ ವರ 'ಪೆರುವಿನ ಪವಿತ್ರ ಕಣಿವೆಯಲ್ಲಿ' ಮತ್ತು ಜಿ.ಎನ್.ಮೋಹನ್ ಅವರ 'ನನ್ನೊಳಗಿನ ಹಾಡು ಕ್ಯೂಬಾ' ವಾಸ ಕಥನಗಳು ಅಧ್ಯಯನಕ್ಕೆ ಆಯ್ದುಕೊಂಡಿದ್ದೇನೆ. ಅಧ್ಯಯನದ ಅನುಕೂಲಕ್ಕಾಗಿ ಮುಂದುವರೆದ

ೇಶಗಳ ಪ್ರವಾಸ ಕಥನಗಳು, ಹಿಂದುಳಿದ ದೇಶಗಳ ಪ್ರವಾಸ ಕಥನಗಳು ಹಾಗೂ ಸಾಂಸ್ಕೃತಿಕವಾಗಿ ುರುತಿಸಿಕೊಳ್ಳುವ ಪ್ರವಾಸ ಕಥನಗಳು ಎಂದು ಮೂರು ವಿಭಾಗಗಳನ್ನು ಮಾಡಿಕೊಂಡಿದ್ದೇನೆ.

ಪ್ಪಣಿಗಳು :

ಪ್ರ.ಸಂ. ಬಸವರಾಜ ಕಲ್ಗುಡಿ, ಬಹುಮುಖಿ 8 ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ ಂಗಳೂರು 2010. ಪುಟ 55

ಡಾ.ಎಸ್. ವಿದ್ಯಾಶಂಕರ, 'ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ', ಕನ್ನಡ ಪುಸ್ತಕ ್ರಾಧಿಕಾರ ಬೆಂಗಳೂರು 2006. ಪುಟ 134

ವಿ.ಸೀ. 'ಪಂಪಾಯಾತ್ರೆ' ಅಂಕಿತ ಪುಸ್ತಕ ಬೆಂಗಳೂರು ಆರನೇ ಮುದ್ರಣ 2004. ಮೊದಲ ಪುಟ

ಎ.ಎನ್.ಮೂರ್ತಿರಾವ್, 'ಅಪರವಯಸ್ಕನ ಅಮೆರಿಕಾಯಾತ್ರೆ', ಡಿ.ವಿ.ಕೆ.ಮೂರ್ತಿ ಪ್ರೆಸ್ ಮೈಸೂರು ೇ ಮುದ್ರಣ. ಅರಿಕೆ ಪುಟ

ಡಾ.ಎಸ್. ವಿದ್ಯಾಶಂಕರ, 'ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ', ಕನ್ನಡ ಪುಸ್ತಕ ್ರಾಧಿಕಾರ ಬೆಂಗಳೂರು 2006. ಪುಟ 141

ಸಂಪಾದಕರು, ಮಲ್ಲೇಪುರಂ ಜಿ.ವೆಂಕಟೇಶ್, ಪ್ರವಾಸ ಸಾಹಿತ್ಯ ಒಂದು ಅಧ್ಯಯನ, ಹೊನ್ನ ಪ್ರಕಾಶನ ಂಗಳೂರು 1992. ಪುಟ 122

ಸಂಪಾದಕರು, ಮಲ್ಲೇಪುರಂ ಜಿ.ವೆಂಕಟೇಶ್, ಪ್ರವಾಸ ಸಾಹಿತ್ಯ ಒಂದು ಅಧ್ಯಯನ, ಹೊನ್ನ ಪ್ರಕಾಶನ ಂಗಳೂರು 1992. ಪುಟ 26

ಅಧ್ಯಾಯ-2 ಪ್ರಗತಿಪರ ರಾಷ್ಟ್ರದ ಪ್ರವಾಸ ಕಥನ

ಅಮೆರಿಕ ದೇಶದ ಪ್ರವಾಸ ಕಥನವನ್ನು ಅಧ್ಯಯನದ ದೃಷ್ಟಿಕೋನದಿಂದ ಪ್ರಗತಿಪರ ರಾಷ್ಟ್ರದ ವಾಸ ಎಂದು ಗುರುತಿಸಿಕೊಂಡಿದ್ದೇನೆ. ಅಮೆರಿಕ ದೇಶದ ಪ್ರವಾಸ ಕಥನಗಳು ಕನ್ನಡ ಸಾಹಿತ್ಯದಲ್ಲಿ ಪುಲವಾಗಿ ಇರುವುದರಿಂದ, 'ಅಮೆರಿಕಾದಲ್ಲಿ ಗೊರೂರು' ನನ್ನ ಅಧ್ಯಯನ ವ್ಯಾಪ್ತಿಗೆ ಗುರುತಿಸಿದ್ದೇನೆ.

ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ಕನ್ನಡದ ಹಿರಿಯ ಲೇಖಕರು. ಗೊರೂರರ ರಹಗಳಲ್ಲಿ ಒಂದು ತಲೆಮಾರಿನ ಪ್ರೀತಿ ಸಾಹಿತ್ಯ ಸಿದ್ಧಿಯಾಗಿ ಅರಳಿರುವುದನ್ನು ಗಮನಿಸಬಹುದು. ವರ ಜೀವನ ಆಸಕ್ತಿ ಅಮೆರಿಕೆಯ ಪ್ರವಾಸ ಕಥನವಾದ 'ಅಮೆರಿಕಾದಲ್ಲಿ ಗೊರೂರು' ಎನ್ನುವ ಕೃತಿಯಲ್ಲಿ ಷ್ಟವಾಗಿ ಪ್ರತಿಬಿಂಬಿತವಾಗುತ್ತದೆ. ಅವರ ಕುತೂಹಲ, ಜೀವನ ಉತ್ಸಾಹದ ಕಾರಣದಿಂದ ಒಂದು ದೊಡ್ಡ ೀಶ, ಒಂದು ದೊಡ್ಡ ಜನಾಂಗವನ್ನು ಅರ್ಥಮಾಡಿಕೊಳ್ಳುವಂತಹ ಪ್ರಯತ್ನ ಈ ಕೃತಿಯಲ್ಲಿ ಸಾಧ್ಯವಾಗಿದೆ. ವರ ಅನುಭವಗಳು ಬಹಳ ರೋಚಕವಾಗಿ ಸ್ವಾರಸ್ಯಕರವಾಗಿದ್ದು, ವ್ಯಂಗ್ಯ ವಿನೋದಗಳೊಡನೆ ನಮಗೆ ಳಿಸಿಕೊಡುತ್ತಾರೆ. ಅವರ ಪ್ರವಾಸ ಪ್ರಿಯತೆ ಒಂದೊಂದು ಪ್ರಸಂಗದಲ್ಲೂ ದೃಗ್ಗೋಚರ. ಪೂರ್ವ ಶ್ಚಿಮದ ಬೆಸುಗೆಯಂತೆ ಅಮೆರಿಕಾದಲ್ಲಿ ಗೊರೂರು ಎಂಬ ಶೀರ್ಷಿಕೆ ಕಂಡುಬಂದಿದೆ. ಧರ್ಮ ಧಾನವಾದ ಭಾರತೀಯ ಸಂಸ್ಕೃತಿಗೆ ತದ್ವಿರುದ್ಧವಾದ ಸಂಸ್ಕೃತಿ ನೆಲೆಯಲ್ಲಿ ಅಮೆರಿಕ ಕಂಡುಬಂದರು ರ್ವರ ಸರ್ವ ಸುಖ ಬಯಸುವ ರಾಷ್ಟ್ರವಾಗಿ ಇಡೀ ಪ್ರಪಂಚದ ಮೆಚ್ಚುಗೆಗೆ ಪಾತ್ರವಾಗಿರುವ ಮೆರಿಕವಾಗಿ ಕಂಡ ಗೊರೂರು ಅವರು ತಮ್ಮ ಪ್ರವಾಸದ ಅನುಭವದ ಸಂಪತ್ತಿಯನ್ನು ಈ ಕೃತಿಯಲ್ಲಿ ಸ್ತರಿಸಿದ್ದಾರೆ.

ಒಂದು ದೇಶ (ರಾಷ್ಟ್ರ) ಪ್ರಗತಿಯನ್ನು ಹೊಂದಬೇಕಾದರೆ ಆ ರಾಷ್ಟ್ರದ ಜನಸಮುದಾಯ ಮತ್ತು ರ್ಕಾರದ ಹೊಣೆಗಳು ಪರಸ್ಪರ ಪೂರಕವಾಗಿ ಇರಬೇಕು. ಆಡಳಿತ ನಡೆಸುವವರು ಮತ್ತು ನಸಾಮಾನ್ಯರು ಇಬ್ಬರಿಗೆ ರಾಷ್ಟ್ರವನ್ನು ಮುನ್ನಡೆಸಲು ಜವಾಬ್ದಾರಿಯಿಂದ ವರ್ತಿಸಬೇಕಾಗುತ್ತದೆ. ಡಳಿತಗಾರರು ಮತ್ತು ಜನಸಾಮಾನ್ಯರ ಹಿತಾಸಕ್ತಿಗಳು ರಾಷ್ಟ್ರವನ್ನು ಉತ್ತುಂಗ ಮಟ್ಟಕ್ಕೆ ಮುಟ್ಟಿಸಬಲ್ಲದು. ಮೆರಿಕದ ನಗರಗಳನ್ನು ಗಮನಿಸಿದಾಗ ಎಲ್ಲಾ ನಗರಗಳಲ್ಲೂ ಕೂಡ ಯಂತ್ರಗಳು ಸಾಮಾನ್ಯವಾಗಿ ಣುತ್ತಿರುತ್ತವೆ. ಇದಕ್ಕೆ ಕಾರಣ ವೈಜ್ಞಾನಿಕ ಆಲೋಚನೆಯ ಆಸಕ್ತಿ, ವೈಜ್ಞಾನಿಕವಾಗಿ ಂದುವರೆಯಬೇಕೆಂಬ ಹಂಬಲದಿಂದ ಪ್ರಗತಿಯನ್ನು ಸಾಧಿಸುತ್ತ ಹೊರಟಿದೆ. ನ್ಯೂಯಾರ್ಕ್ ಗರದಲ್ಲಿನ ಯಾಂತ್ರಿಕ ಜೀವನ್ ಮಾನವನಿಗೆ ಎಷ್ಟು ಉಪಯುಕ್ತವಾಗಿದೆ ಎಂಬುದನ್ನು ಮನವರಿಕೆ

ಾಡಿಕೊಡುತ್ತದೆ. ಲಿಫ್ಟ್, ಎಲವೇಟರ್ ಯಂತ್ರಗಳು ಬಹುಮಹಡಿಗಳ ಕಟ್ಟಡಗಳಲ್ಲಿ ಉಪಯೋಗಿಸುವುದರಿಂದ ವಯಸ್ಸಾದವರಿಗೆ ಆಗುವಂತಹ ಪ್ರಯೋಜನಗಳು ಪ್ರಮುಖವಾದವು.

ನಾಲ್ಕು-ಐದು ದಶಕಗಳ ಹಿಂದೆಯ ಈ ರೀತಿಯ ಸೌಲಭ್ಯಗಳ ನಗರದ ಎಲ್ಲ ಕಡೆಗಳಲ್ಲಿಯೂ ಸಾಮಾನ್ಯವಾಗಿ ಕಂಡುಬರುತ್ತದೆ. ಇತ್ತೀಚಿನ ಬೆಳವಣಿಗೆಯಲ್ಲಿ ಭಾರತೀಯರಲ್ಲಿಯೂ ಸಹ ಯಾಂತ್ರಿಕತೆಯ ದುಕು ಕಾಣಲಾಗುತ್ತಿದೆ. ಯಂತ್ರಗಳ ಉಪಯೋಗ ಎಷ್ಟು, ಹೇಗೆ? ಅನ್ನುವುದಕ್ಕಿಂತ ಅದೊಂದು ವೃತ್ತಿಯಾಗಿ ಅಥವಾ ಚಾಳಿ ಹಳ್ಳಿವಾಸಿಗಳಿಂದ ಹಿಡಿದು ನಗರವಾಸಿಗಳವರೆಗೆ ಭಾರತೀಯ ಸಮಾಜದಲ್ಲಿ ಮನೆಮಾಡಿದೆ. ಬ್ರಿಟಿಷರು ಪರಿಚಯಿಸಿದ ಯಂತ್ರ ಇಂದು ಇಡೀ ಭಾರತೀಯ ಸಮಾಜವನ್ನೇ ಆವರಿಸಿಕೊಂಡಿದೆ. ಜನಸಂಖ್ಯೆಯ ಬೆಳವಣಿಗೆಯ ವೇಗಕ್ಕೆ ಅನುಗುಣವಾಗಿ ಯಾಂತ್ರಿಕ ಜೀವನಕ್ಕೆ ಅವಲಂಬಿತರಾಗಬೇಕಾಗಿದೆ. ಆದರೆ ಅತಿಯಾದ ಯಾಂತ್ರಿಕತೆ ಮಾನವನನ್ನು ಕುಬ್ಜನನ್ನಾಗಿಸಿದೆ. ಯಂತ್ರಗಳನ್ನು ತಿಳಿದು ಉಪಯೋಗ ಮಾಡುವಂತಹ ಬುದ್ಧಿಶಕ್ತಿ ಭಾರತೀಯರಲ್ಲಿ ಕಂಡುಬರುವುದಿಲ್ಲ. ಯಂತ್ರಗಳು, ಅಣುಶಕ್ತಿ, ವಿದ್ಯುತ್ ಇನ್ನಿತರ ತಂತ್ರಜ್ಞಾನದ ಸೌಲಭ್ಯಗಳನ್ನು ಸರಿಯಾದ ಪ್ರಮಾಣದಲ್ಲಿ ಹಾಗೂ ಪ್ರಮಾದಕರವಲ್ಲದ ರೀತಿಯಲ್ಲಿ ಉಪಯೋಗಿಸಕೊಳ್ಳಬೇಕಾದರೆ ಅವುಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು, ಬಳಸುವ ಕ್ರಮವನ್ನು ಅರಿತಿರಬೇಕು. ಇಲ್ಲದಿದ್ದರೆ ಮನುಷ್ಯನನ್ನು ನಾಶಮಾಡುವಂತಹ ಶಕ್ತಿಯನ್ನು ಅವು ಪಡೆದುಕೊಳ್ಳುತ್ತದೆ. ಅಮೆರಿಕಾದಲ್ಲಿ ಯಂತ್ರಗಳ ಬಳಕೆಯ ಬಗ್ಗೆ ಸಂಪೂರ್ಣ ಅರಿವು ಹೊಂದಿದ್ದಾರೆ. "ಯಂತ್ರೀಕರಣ, ವಿದ್ಯುಧೀಕರಣ, ಔದ್ಯೋಗಿಕರಣ, ಅಣುಶಕ್ತಿ ಸಹವಾಸ ಇವೆಲ್ಲ ಬ್ರಹ್ಮರಾಕ್ಷಸ ಸಹವಾಸದಂತೆ. ಅವುಗಳ ವಿಷಯವನ್ನು ಪೂರ್ಣವಾಗಿ ತಿಳಿದು ಅವನ್ನು ಸ್ವಾಧೀನದಲ್ಲಿಟ್ಟುಕೊಂಡರೆ ಮಾತ್ರ ಅವುಗಳಿಂದ ಉಪಯೋಗ ಇಲ್ಲವಾದರೆ ಅವು ನಮ್ಮನ್ನು ನಾಶ ಮಾಡುವುವು. ಪಾಶ್ಚಿಮಾತ್ಯದಲ್ಲಿ ಈ ಜ್ಞಾನವನ್ನು ತಕ್ಕಮಟ್ಟಿಗೆ ಮಕ್ಕಳಾದಿಯಾಗಿ ಎಲ್ಲರೂ ತಿಳಿದಿರುತ್ತಾರೆ".(1) ಅಮೆರಿಕ ದೇಶದ ಪ್ರಜೆಗಳು ಮತ್ತು ಭಾರತೀಯ ಹಾಗೂ ಇನ್ನಿತರ ದೇಶಗಳ ಪ್ರಜೆಗಳಿಗೆ ಅಥವಾ ಜನಸಾಮಾನ್ಯನಿಗೆ ಇರುವ ವ್ಯತ್ಯಾಸ ಇಲ್ಲಿ ಮನವರಿಕೆ ಆಗುತ್ತದೆ.

ಸ್ವಾತಂತ್ರೋತ್ತರ ಭಾರತೀಯ ಸಮಾಜದ ಸ್ಥಿತಿ ಶೋಚನಿಯವಾಗಿದ್ದು, ಮರುಕ ಉಂಟುಮಾಡುವಂತೆ ಆಗಿದೆ. ಸ್ವಾತಂತ್ರವನ್ನು ಪಡೆಯುವ ಮೊದಲು ಯಾವ-ಯಾವ ಕನಸುಗಳನ್ನು ಕಂಡಿದ್ದೆವು ಆ ಕನಸುಗಳು ನನಸಾಗಲಿಲ್ಲ. ಸ್ವಾತಂತ್ರ ಲಭಿಸಿದ ನಂತರ ಭಾರತದಲ್ಲಿ ಸಮೃದ್ಧತೆಯ ಸುಗ್ಗಿಯನ್ನು ಕಾಣುವಂತಹ ಹಂಬಲ ಎಲ್ಲರಲ್ಲೂ ಮನೆಮಾಡಿತ್ತು. ಆದರೆ ಯಾವುದು ಕೂಡ

ಫಲತೆಯನ್ನು ಕಂಡಿಲ್ಲ. ಕಾರಣ ಸರ್ಕಾರವನ್ನು ನಡೆಸುವ ಪ್ರಭುಗಳು ಮತ್ತು ಜನಸಾಮಾನ್ಯರ ಕ್ಷತೆಯಲ್ಲಿ ಲೋಪಗಳು ಅತಿಯಾಗಿರುವುದು. ಇಡೀ ದೇಶವೇ ಭ್ರಷ್ಟಾಚಾರದಲ್ಲಿ ಮುಳುಗಿದ್ದು ಂತ್ರಿಗಳಿಗೆ ಅಧಿಕಾರಿಗಳು, ಅಧಿಕಾರಿಗಳಿಗೆ ಜನಸಾಮಾನ್ಯರು ಭ್ರಷ್ಟಾಚಾರದಲ್ಲಿ ಪೂರಕವಾಗಿ ಾಡಗಿರುವುದು. ಮತ್ತೊಂದು ಕಾರಣ ಸೋಮಾರಿಗುಣವುಳ್ಳ ಅಧಿಕಾರಿಗಳು ಮತ್ತು ಕೆಲಸಗಾರರು. ಆದರೆ ಮೆರಿಕಾ ಪ್ರಗತಿಪರ ದೇಶವಾಗಿ ಇಡೀ ಪ್ರಪಂಚದಲ್ಲಿ ಗುರುತಿಸಕೊಳ್ಳಲು ಅಲ್ಲಿನ ಕೆಲಸಗಾರರು ಮತ್ತು ಡಳಿತ ನಡೆಸುವ ಸರ್ಕಾರ ಎರಡು ಕೂಡ ತಮ್ಮ-ತಮ್ಮ ಜವಾಬ್ದಾರಿಗಳನ್ನು ದಕ್ಷತೆ, ಪ್ರಮಾಣಿಕತೆಯಿಂದ ನಿರ್ವಹಿಸುತ್ತಿದೆ. ವಾರದಲ್ಲಿ ಐದು ದಿನ ಕೆಲಸ ಮಾಡಿ ಎರಡು ದಿನ ಶ್ರಾಂತಿಯನ್ನು ಪಡೆಯುತ್ತಾರೆ. "ಒಂದು ಸಲ ಜವಾಹರಲಾಲ್ ನೆಹರೂರವರೆ ಅಮೆರಿಕದ ಕೆಲಸಗಾರರು ಾರತೀಯರು ಮಾಡುವುದರ ನಾಲ್ಕರಷ್ಟು ಕೆಲಸ ಮಾಡುತ್ತಾರೆ ಎಂದಿದ್ದರು".(2) ಮೇಲಿನ ಮಾತಿನಲ್ಲಿ ಜಕ್ಕೂ ಸತ್ಯಾಂಶವಿದೆ. ಇಂದಿಗೂ ಕೂಡ ಭಾರತೀಯ ಕೆಲಸಗಾರರ ಮನಸ್ಥಿತಿ ಬದಲಾಗಿಲ್ಲ. ಪ್ರಗತಿಪರ ಾಷ್ಟ್ರಗಳು ಪ್ರಗತಿಯನ್ನು ಹೊಂದಲು ನೈಸರ್ಗಿಕ ಸಂಪನ್ಮೂಲಗಳು ಮಾತ್ರವಲ್ಲ ಅವುಗಳ ಜೊತೆಗೆ ಾನವ ಸಂಪನ್ಮೂಲ ಅದರಲ್ಲೂ ದಕ್ಷ ಕಾರ್ಯಬದ್ಧತೆಯ ಸಂಪನ್ಮೂಲದ ಅವಶ್ಯಕತೆ ಬಹಳ ುಖ್ಯವಾದದ್ದು.

ಮನೆಯ ವಾತಾವರಣವಾಗಲಿ, ಬೀದಿ, ಊರು, ಪಟ್ಟಣದಿಂದ ಹಿಡಿದು ನಗರ, ಮಹಾನಗರಗಳು ್ಛತೆಯನ್ನು ಕಾಪಾಡಿಕೊಂಡು ಹೋದಾಗ ಮಾತ್ರ ಆರೋಗ್ಯವಂತ ಸಮಾಜವನ್ನು ರಾಷ್ಟ್ರದಲ್ಲಿ ಕಾಣಲು ಧ್ಯ ಇಲ್ಲದಿದ್ದರೆ ಆರೋಗ್ಯದ ಸಮಸ್ಯೆಗಳಿಂದ ಕೇವಲ ಕುಟುಂಬಗಳಿಗೆ ಆರ್ಥಿಕವಾಗಿ ಾರೆಯಾಗುವುದಿಲ್ಲ. ಬದಲಾಗಿ ಇಡೀ ರಾಷ್ಟ್ರದ ಮೇಲೆ ಅದರ ಪರಿಣಾಮ ಬೀರುತ್ತದೆ. ಅಮೆರಿಕ ರಾಷ್ಟ್ರ ್ನ ನಗರಗಳನ್ನು ಪರಿಸರವನ್ನು ಶುಚಿಯಾಗಿ, ಸ್ವಚ್ಛವಾಗಿ ಇಟ್ಟುಕೊಳ್ಳಲು ಮೊದಲ ಆದ್ಯತೆಯನ್ನು ಡಿದೆ. ಅಮೆರಿಕದಲ್ಲಿ ಹೊರ ದೇಶದವರು ಕಾಲಿಟ್ಟ ತಕ್ಷಣ ಕಾಣುವುದು ಸ್ವಚ್ಚತೆಯ ಫಲಕಗಳು, ನಮ್ಮ ಾಜದಲ್ಲಂತು ಶುಚಿ ಇರುವ ಜಾಗ ಹುಡುಕಿದರು ಸಿಗುವುದು ಕಷ್ಟ. ಸಾರ್ವಜನಿಕ ವಾಹನವಾದ ್ಸನಿಂದ ಹಿಡಿದು, ಪುಟಪಾತಗಳು, ನಿಲ್ದಾಣಗಳು ಎಲ್ಲವೂ ಸಹ ಬಾಳೆಹಣ್ಣು ಸಿಪ್ಪೆ, ಗುಟ್ಕ, ಎಂಜಲು ನ್ನೂ ನಾನಾ ರೀತಿಯಲ್ಲಿ ಕಸದ ಬುಟ್ಟಿಯಾಗಿ ಪರಿವರ್ತಿತವಾಗಿರುತ್ತವೆ. ಆದರೆ ಅಮೆರಿಕದ ಪರಿಸರ ಚಿತ್ವದ ಪ್ರಜ್ಞೆ ಎಲ್ಲ ದೇಶಗಳು ಮತ್ತು ಪ್ರಜೆಗಳೂ ಕೂಡ ಅನುಸರಿಸಿಕೊಂಡರೆ ದೈಹಿಕವಾಗಿ ಸದೃಢ ೋಗ್ಯವಂತ ಪ್ರಜೆಗಳು, ಸಾಮಾಜಿಕವಾಗಿ ಸ್ವಚ್ಛತೆಯಿಂದ ಕೂಡಿರುವ ಸಮುದಾಯ, ಮಾಲಿನ್ಯಮುಕ್ತ ಸರವನ್ನು ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ಕಾಣಲು ಸಾಧ್ಯ. ಅಮೆರಿಕ-ಕೆನಡದ ರಸ್ತೆಗಳು

ವಿರಾರು ಮೈಲಿಗಳವರೆವಿಗೂ ಹಬ್ಬಿಕೊಂಡಿದ್ದು, ಸಂಪೂರ್ಣವಾಗಿ ಸ್ವಚ್ಛತೆಯನ್ನು ಕಾಪಾಡಿಕೊಂಡಿವೆ. ಚಿತ್ವದ ಬಗ್ಗೆ ಜಾಗೃತಿಯನ್ನು ಮೂಡಿಸುವಂತಹ ಫಲಕಗಳು ರಸ್ತೆಯ ಅಕ್ಕ-ಪಕ್ಕದಲ್ಲಿ ನೆಟ್ಟಿರುವುದು ವರ ಪರಿಸರ ಪ್ರಜ್ಞೆಯ ಮಹತ್ರಕ್ಕೆ ಸಾಕ್ಷಿಯಾಗಿವೆ. ಹಾಗೆಯೇ ಜನ ಸಾಮಾನ್ಯರ ಪ್ರಜ್ಞೆ ಕೂಡ ಬಹಳ ಮುಖವಾದದು ಎಲ್ಲ ಸ್ಥಳ ಮತ್ತು ಜನ ಪ್ರದೇಶಗಳಲ್ಲಿಯೂ ಪರಿಸರವನ್ನು ಸ್ವಚ್ಛವಾಗಿಡಲು ವಲುಗಾರರನ್ನು ನೇಮಿಸಲು ಸಾಧ್ಯವಿಲ್ಲ. ಅಮೆರಿಕದ ಜನರ ಸಾಮಾನ್ಯ ಪ್ರಜ್ಞೆ ಇದ್ದು ತಮ್ಮ ರಿಸರವನ್ನು ಕಾಪಾಡಿಕೊಳ್ಳುವ ಜವಾಬ್ದಾರಿಯನ್ನು ಹೊಂದಿದ್ದಾರೆ. "ರಸ್ತೆ ಅನೇಕ ಕಡೆ ನಿರ್ಜನ ಡುಗಳಲ್ಲಿ ಹಾದು ಹೋಗುತ್ತದೆ. ಅಲ್ಲಿ ನಾವು ಒಂದು ವೇಳೆ ಉಗುಳಿದರೆ ಅಥವಾ ಕಸವನ್ನು ಹೊರಕ್ಕೆ ಸೆದರೆ ಕಂಡು ಹಿಡಿದು ನಮ್ಮನ್ನು ಶಿಕ್ಷಿಸುವ ಪೋಲಿಸರು ಇರಲಾರರು ಆದರೂ ಅಲ್ಲಿನ ಜನ ಭಾವಿಕವಾಗಿ ಕಾನೂನನ್ನು ಅನುಸರಿಸುತ್ತಾರೆ."(3) ಈ ರೀತಿಯಾಗಿ ಸರ್ಕಾರ ಮತ್ತು ಜನರ ಹಭಾಗಿತ್ವದಲ್ಲಿ ಪರಿಸರವನ್ನು ರಕ್ಷಿಸುವ ಹೊಣೆಯನ್ನು ಹೊತ್ತಿರುವ ಅಮೆರಿಕ-ಕೆನಡಗಳು ಸ್ವಚ್ಛತೆಯನ್ನು ಪಾಡಿಕೊಂಡಿವೆ.

ಅಮೆರಿಕ ದೇಶವು ಯಂತ್ರಗಳ ಬಳಕೆಯಲ್ಲಿ, ಪರಿಸರ ಶುಚಿತ್ವದಲ್ಲಿ ಸೈ ಎನಿಸಿಕೊಂಡಿರುವ ರಾಷ್ಟ್ರ. ಲ್ಲ ವಲಯಗಳಲ್ಲೂ ಅದು ಗುರುತಿಸಿಕೊಳ್ಳಬೇಕಾದರೆ ಸಂಶೋಧಕರು, ಸಮಾಜ ಚಿಂತಕರು, ಜ್ಞಾನಿಗಳು ಇನ್ನೂ ಮುಂತಾದ ವಲಯಗಳಲ್ಲಿ ಶಿಕ್ಷಣ ತಜ್ಞರು ಹಾಗೂ ಶಿಕ್ಷಣವನ್ನು ನೀಡುವ ಕ್ರಮ ಹಳ ಪ್ರಾಮುಖ್ಯತೆಯನ್ನು ನೀಡಬೇಕಾಗುತ್ತದೆ. ಶಾಲಾ ಕಾಲೇಜುಗಳಲ್ಲಿ ಶಿಕ್ಷಣವನ್ನು ಕಲಿಯುವ ಮತ್ತು ಲಿಸುವ ವಾತಾವರಣ ಮುಕ್ತವಾದ ಅವಕಾಶವನ್ನು ನೀಡಿದಾಗ ಕಲಿಕೆಯ ವಿಸ್ತಾರ ವೃದ್ಧಿಗೊಳ್ಳುತ್ತದೆ. ಮೆರಿಕದ ವಿಶ್ವವಿದ್ಯಾಲಯಗಳು, ಅಧ್ಯಯನದ ಕೇಂದ್ರಗಳು ಮುಕ್ತವಾದ ವಾತಾವರಣವನ್ನು, ರಿಸರವನ್ನು ವಿದ್ಯಾರ್ಥಿಗಳಿಗೆ ಕಲ್ಪಿಸಿಕೊಟ್ಟಿದೆ. ಮುಕ್ತವಾದ ವಾತಾವರಣವಿದ್ದಾಗ ಮಾತ್ರ ಸಂಶೋಧನೆಗಳು ಯೋಜನಕಾರಿಯಾಗಲು ಸಾಧ್ಯ. ನಮ್ಮ ದೇಶದ ವಿಶ್ವವಿದ್ಯಾಲಯಗಳು, ಸರ್ಕಾರ, ಸರ್ಕಾರದ ತಿನಿಧಿಗಳು ಇನ್ನಿತರರ ಹಸ್ತಕ್ಷೇಪದಿಂದ ಮುಕ್ತಿಯನ್ನು ಪಡೆಯದೇ ಉಸಿರುಗಟ್ಟಿಸುವ ವಾತಾವರಣದಿಂದ ಡಿದೆ ಪ್ರತಿ ಶೈಕ್ಷಣಿಕ ವರ್ಷದಲ್ಲಿಯೂ ಸಹ ಒಂದಲ್ಲ-ಒಂದು ಕಾರಣದಿಂದ ಪ್ರವೇಶ, ಪರೀಕ್ಷೆಗಳು, ಲಿತಾಂಶ ಎಲ್ಲವೂ ಕೂಡ ಗೊಂದಲಗಳಿಂದ ಕೂಡಿರುತ್ತದೆ. ಸ್ವಾತಂತ್ರ್ಯ ಪಡೆದು ಅರ್ವತ್ತಾರು ವರ್ಷಗಳು ದಿದ್ದರೂ ಕಾನೂನು ಕಾಯ್ದೆಗಳಲ್ಲಿ ಬದಲಾವಣೆ ಆಗದೇ ಮುಂದುವರೆದುಕೊಂಡು ಹೋಗುತ್ತಿವೆ. ದಿನ ಸಮಾಜಕ್ಕೆ-ಶಿಕ್ಷಣಕ್ಕೆ ಅನೇಕ ಮಾರ್ಪಾಡುಗಳ ಅವಶ್ಯಕತೆಗಳು ಇದ್ದರೂ ಬದಲಾಯಿಸಲು ಧ್ಯವಿಲ್ಲದಂತಹ ದುರ್ಬಲ ಆಡಳಿತ ಹಾಗೂ ವೋಟ್ ಬ್ಯಾಂಕಿನ ರಾಜಕೀಯ ವ್ಯವಸ್ಥೆ ಇದೆ.

ಮೆರಿಕಾದ ಆಲ್‌ಬರ್ಟ್ ವಿಶ್ವವಿದ್ಯಾಲಯ ನಾಲ್ಕು ದಶಕಗಳ ಹಿಂದೆಯೆ ವಿದ್ಯಾರ್ಥಿಗಳಿಗೆ ಬೇಕಾದ ಷಯಗಳನ್ನು ವ್ಯಾಸಾಂಗಕ್ಕೆ ಸಂಶೋಧನೆ ಆಯ್ಕೆ ಮಾಡಿಕೊಳ್ಳುವ ಮುಕ್ತವಾದ ಅವಕಾಶಗಳ ಜೊತೆಗೆ, ಾವುದೇ ಸಮಯದಲ್ಲಿ ವಿಶ್ವವಿದ್ಯಾಲಯಕ್ಕೆ ಬರುವ ಮತ್ತು ವಾಚನಾಲಯಕ್ಕೆ ಬಂದು ಅಭ್ಯಾಸ ಾಡುವಂತಹ ಅವಕಾಶವನ್ನು ಕಲ್ಪಿಸಿಕೊಟ್ಟಿತು. ವಿದ್ಯಾರ್ಥಿಗಳಿಗೆ, ಸಂಶೋಧನಾರ್ಥಿಗಳಿಗೆ ಎಷ್ಟು ುಕ್ತವಾದ ಅವಕಾಶ ಮಾಡಿಕೊಟ್ಟಿತೆಂದರೆ ಸಂಶೋಧನಾಲಯ ಹಾಗೂ ವಾಚನಾಲಯಗಳ ಬೀಗದ ಗಳೂ ವಿದ್ಯಾರ್ಥಿಗಳ ಕೈಯಲ್ಲಿರುತ್ತವೆ. ದಿನದ ಇಪ್ಪತ್ನಾಲ್ಕು ಗಂಟೆಗಳು ಸಹ ತೆರೆದಿರುತ್ತವೆ, ಎಂದರೆ ದ್ಯಾರ್ಥಿಗಳ ಓದುವ, ಅಭ್ಯಾಸ ಮಾಡುವ ಇಚ್ಛಾಶಕ್ತಿ ಅರಿವು ತಿಳಿಯಬಹುದು. ಪ್ರೊಫೆಸರುಗಳ, ಂಶೋಧನಾರ್ಥಿಗಳ ಮಾರ್ಗದರ್ಶನಕ್ಕೆ ವೀಸಲಿಡುತ್ತಾರೆ. "ಸಂದರ್ಶನ, ಮಾರ್ಕ್ಸ್‌ಕಾರ್ಡ್‌ಗಳು, ಂದುಳಿದವ, ಮುಂದೆ ಬಂದವ, ಆರ್ಥಿಕ ದೌರ್ಬಲ್ಯ, ಪ್ರಮಾಣ ಪತ್ರಿಕೆ, ಮೈಗ್ರೇಶನ್ ಯಾವ ರ್ಟಿಫಿಕೇಟಿನ ರಗಳೆಯೂ ಇಲ್ಲ. ಈ ವಿಷಯವನ್ನು ಆ ವಿದ್ಯಾರ್ಥಿಯೇ ನನಗೆ ಹೇಳಿದ. ಕೆಲವು ದ್ಯಾರ್ಥಿಗಳು ನನ್ನೊಂದಿಗೆ 'ನಾವು ದಿನ ರಾತ್ರಿಗಳನ್ನು, ಇಲ್ಲಿಯೇ ಕಳೆಯುತ್ತೇವೆ. ಇಲ್ಲಿಯೇ ರಾತ್ರಿ ಲಗುವುದೂ ಉಂಟು' ಎಂದು ವಾಚನಾಲಯದ ಬೀರುಗಳ ಮೇಲೆ ಸುತ್ತಿಟ್ಟಿದ್ದ ತಮ್ಮ ರಗ್ಗುಗಳ ರುಳಿಗಳನ್ನು ತೋರಿಸಿದರು."(4) ನಮ್ಮ ದೇಶದ ವಿಶ್ವವಿದ್ಯಾಲಯಗಳು ಭ್ರಷ್ಟಚಾರ, ಜನಪಕ್ಷಪಾತಗಳಿಂದ ಕೂಡಿದ್ದು ಅಧ್ಯಯನದ ಅನುಕೂಲಕ್ಕಿಂತ ಅನಾನುಕೂಲಗಳೇ ಹೆಚ್ಚಾಗಿ ಕಾಣುತ್ತವೆ. ವೇಶಾತಿ ಸಂದರ್ಭದಲ್ಲಿ ತಂದೆಯ ಉದ್ಯೋಗ, ಜಾತಿ, ಕುಲ, ಗೋತ್ರದ ಪ್ರಮಾಣ ಪತ್ರ ಆದಾಯ ಮಾಣಪತ್ರ ಎಲ್ಲವನ್ನೂ ಆಪೇಕ್ಷಿಸುತ್ತದೆ. ವಿದ್ಯಾರ್ಥಿ ಪ್ರತಿಭೆ ಮತ್ತು ಆಸಕ್ತಿ ಹೊರತು ಪಡಿಸಿ, ಭಾರತೀಯ ಚ್ಚಿನ ವಿಶ್ವವಿದ್ಯಾಲಯಗಳು ಆರ್ಥಿಕವಾಗಿ, ಜನಾಂಗಿಕವಾಗಿ ಮೇಲ್ಮಟ್ಟದ ಜನರಿಗೆ ಹೆಚ್ಚು ುಕೂಲವಾಗಿರುವುದು ಸ್ಪಷ್ಟವಾಗಿ ಕಾಣುತ್ತದೆ. ಅನೇಕ ವಿಶ್ವವಿದ್ಯಾಲಯಗಳಲ್ಲಿ ವಾಚನಾಲಯದಲ್ಲಿರುವ ಸ್ತಕಗಳು ಗೆದ್ದಲು ಹಿಡಿದಿವೆ. ವ್ಯವಸ್ಥೆಯ ಪಾತ್ರದೊಡನೆ ವಿದ್ಯಾರ್ಥಿಗಳ ಆಸಕ್ತಿಯ ಕೊರತೆ ಕೂಡ ರಿದೆ. ನಮ್ಮ ವಿಶ್ವವಿದ್ಯಾಲಯಗಳನ್ನು ರಾಜಕೀಯ ಪಕ್ಷಗಳು ಹತೋಟಿಯಲ್ಲಿ ಇಟ್ಟುಕೊಳ್ಳಲು ಹಾಗೂ ಕ್ಷದ ಪ್ರಚಾರಕ್ಕಾಗಿ ಬಳಸಿಕೊಳ್ಳಲು ತೊಡಗಿರುವುದರಿಂದ ವಿದ್ಯಾರ್ಥಿಗಳ ಅಧ್ಯಯನ ಚಟುವಟಿಕೆಗಳಿಗಿಂತ ತರ ಚಟುವಟಿಕೆಗಳ ಪ್ರಬಲವಾಗುತ್ತಿವೆ. ಒಟ್ಟಾಗಿ ಇಡೀ ವ್ಯವಸ್ಥೆಯನ್ನು ಬದಲಾವಣೆ ಮಾಡಿ ಶ್ವವಿದ್ಯಾಲಯಗಳ ವಾತಾವರಣವನ್ನು ಮುಕ್ತಮಾಡಬೇಕಾದ ಜರೂರು ಎದ್ದು ಕಾಣುತ್ತಿದೆ.

ಧೂಮಪಾನ ಸಾರ್ವಜನಿಕ ಸ್ಥಳಗಳಲ್ಲಿ ನಿಷೇಧ ಎಂಬ ಕಾನೂನು ಇತ್ತೀಚೆಗೆ ಭಾರತ ದೇಶದಲ್ಲಿ ರಿಗೆ ಬಂದಿದೆ. ಈ ಕಾನೂನು ಜಾರಿಗೆ ತರಲು ಪಟ್ಟ ಸಂಕಷ್ಟಗಳು ಹಲವಾರು. ಅನೇಕ ವಿಘ್ನಗಳ

ಂತರ ಸರ್ವೋಚ್ಚ ನ್ಯಾಯಾಲಯ ಆದೇಶ ಹೊರಡಿಸಿತು. ನ್ಯಾಯಲಯದ ಆದೇಶ ಬಂದ ನಂತರ ರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ ಮಾಡಲಾಯಿತು. ಆದರೂ ಕೂಡ ಸಂಪೂರ್ಣವಾಗಿ ದೇಶ ಪಾಲನೆ ಮಾಡಲಾಗುತ್ತಿಲ್ಲ. ಮುಖ್ಯವಾಗಿ ವಿದ್ಯಾವಂತ ಬಳಗದಿಂದ ಕಾನೂನು ಉಲ್ಲಂಘನೆ ಗುತ್ತಿರುವುದು. ಸರ್ವೋಚ್ಚ ನ್ಯಾಯಾಲಯದ ಆದೇಶ-ಪರಿಪಾಲನೆಗಳು ಮಾತು ಇರಲಿ, ಇಂದು ೂಮಪಾನ (ಸಿಗರೇಟು) ಸೇದುವುದು ಯುವಕರಲ್ಲಿ ಫ್ಯಾಷನ್ ಆಗಿ ಮಾರ್ಪಟ್ಟಿದೆ. ಈ ಯುವಕರು ೂಡ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿ ಬಳಗವೆ ಆಗಿದೆ. ಪ್ರೌಢಶಾಲೆಯಲ್ಲಿ ವ್ಯಾಸಂಗ ಾಡುತ್ತಿರುವ ವಿದ್ಯಾರ್ಥಿಗಳು ಸಹ ಸಗರೇಟ್ ಸೇವನೆಯ ಫ್ಯಾಷನ್‌ಗೆ ಬಲಿಯಾಗುತ್ತಿದ್ದಾರೆ. ಇದು ವಲ ಬೆಂಗಳೂರು ನಗರಕ್ಕೆ ಸೀಮಿತವಾಗಿಲ್ಲ ಗ್ರಾಮಾಂತರ ಪ್ರದೇಶಕ್ಕೂ ಸಹ ಹಬ್ಬಿಕೊಂಡಿದೆ. ಜನರಲ್ಲಿ ಾಗೃತಿ ಮೂಡದ ಹೊರತು ಯಾವುದೇ ಆದೇಶಗಳು ಕೇವಲ ಆದೇಶಗಳಾಗಿಯೇ ಉಳಿದು ಬಿಡುತ್ತವೆ. ಂತಹ ಒಂದು ಜಾಗೃತಿ, ಪ್ರಜ್ಞೆ ಮತ್ತು ಜೀವನ ಭಯ ಇವುಗಳ ಪ್ರಭಾವದಿಂದ ಕೆನಡ-ಅಮೆರಿಕದ ನರಲ್ಲಿ ಧೂಮಪಾನವನ್ನು ತ್ಯಜಿಸುವ ಅರಿವು ನಾಲ್ಕು-ಐದು ದಶಕಗಳ ಹಿಂದೆಯೇ ಮೂಡಿತ್ತು. ಈ ಾಗೃತಿ ಮತ್ತು ಪ್ರಜ್ಞೆ ಮೂಡಲು ಕಾರಣ ಕ್ಯಾನ್ಸರ್ ಮತ್ತು ಕ್ಷಯರೋಗದ ಭಯ. ಸಿಗರೇಟ್, ತಂಬಾಕು ವನೆಯಿಂದ ಜೀವಕ್ಕೆ ಅಪಾಯ ಎಂದು ಮನವರಿಕೆ ಆದ ನಂತರ ಅಲ್ಲಿನ ಜನರು ಮತ್ತು ಸರ್ಕಾರ ಬ್ಬರು ಕೂಡ ಕಾರ್ಯಪ್ರವೃತ್ತರಾದರು. "ಅಂದರೆ ಒಟ್ಟಿನಲ್ಲಿ ನಡುಬೀದಿಯಲ್ಲಿ ಹೊರತು, ತನ್ನ ಮನೆಯಲ್ಲಿ ೂರತು ಹೊಗೆಸೊಪ್ಪು ಭಕ್ತ ಸಿಗರೇಟು ಸೇದುವಂತಿಲ್ಲ. ಈ ಕಾನೂನನ್ನು ಜನಾಭಿಪ್ರಾಯದಿಂದ ಾಡಿದ್ದಾರೆಂದರೆ, ಸಿಗರೇಟಿನಿಂದ ಕ್ಯಾನ್ಸರಿನ ಅಪಾಯವನ್ನು ಅಮೆರಿಕಾದ ಸಾಮಾನ್ಯ ಪ್ರಜೆ ಸಹ ಎಷ್ಟರ ಟ್ಟಿಗೆ ಅರ್ಥ ಮಾಡಿಕೊಂಡಿದ್ದಾನೆಂಬುದು ಗೊತ್ತಾಗುತ್ತದೆ."(5) ಜನರಲ್ಲಿ ಪ್ರಜ್ಞೆ ಮೂಡದ ಹೊರತು ಾವ ಪ್ರಕ್ರಿಯೆಯೇ ಆಗಲಿ ಅದು ಸಫಲತೆಯನ್ನು ಕಾಣುವುದಿಲ್ಲ. ಸರ್ಕಾರ ಮತ್ತು ನ್ಯಾಯಾಲಯ ೇಶಗಳು ಎಷ್ಟೇ ಜಾರಿಯಾಗಲಿ ಅರಿವು ಅನ್ನೋದು ಮುಖ್ಯ ಕಾನೂನು ಉಲ್ಲಂಘನೆ ಮಾಡಿ ರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವವರಿಗೆ ರೂ 200 ರಿಂದ 500ರೂ ವರೆಗೆ ಂಡವಿಧಿಸುವ ಆದೇಶ ಭಾರತದಲ್ಲಿ ಜಾರಿ ಆಗಿದೆ. ಈ ದಂಡದ ಮೊತ್ತವನ್ನು ಇನ್ನೂ ಹೆಚ್ಚು ಿಸಬೇಕು "1977 ಸೆಪ್ಟೆಂಬರ್ 30 ರಲ್ಲಿ ಅಂಗೀಕೃತವಾದ ನಿರ್ಣಯದಂತೆ, ಕಾನೂನಿಗೆ ವಿರುದ್ಧವಾಗಿ ರೇಟು ಸೇದುವವರಿಗೆ (ಸಾರ್ವಜನಿಕ ಸ್ಥಳಗಳಲ್ಲಿ) ಎಂಟೂಕಾಲು ಡಾಲರಿನಿಂದ 1650 ಲರ್‌ಗಳವರೆಗೆ ನ್ಯಾಯಾಲಯ ಜುಲ್ಮಾನೆ ವಿಧಿಸಬಹುದು."(6) ಮುವತ್ತೈದು ವರ್ಷಗಳ ಹಿಂದೆಯೇ ೆರಿಕ-ಕೆನಡ ರಾಷ್ಟ್ರಗಳಲ್ಲಿ ಕಾನೂನು ಉಲ್ಲಂಘನೆ ಮಾಡಿ ಧೂಮಪಾನ ಮಾಡುವವರಿಗೆ ಎಷ್ಟು ದೊಡ್ಡ

ೊತ್ತದ ದಂಡವನ್ನು ವಿಧಿಸುವ ಆದೇಶ ಹೊರಡಿಸಿದ್ದಾರೆ. ನಮ್ಮ ದೇಶದಲ್ಲಿಯೂ ಸಹ ಇದೇ ತಿಯಾಗಿ ದಂಡದ ಮೊತ್ತವನ್ನು ಹೆಚ್ಚಿಸಿದಾಗ ಜನರಲ್ಲಿ ದಂಡವನ್ನು ಕೊಡಬೇಕಾದ ಭಯದಿಂದಾದರು ಷ್ಟ ಮಟ್ಟದಲ್ಲಾದರೂ ನಿಷೇಧವಾಗಹುದು. ನಮ್ಮಲ್ಲಿ ಯಾವುದೇ ಕಾನೂನುಗಳಾಗಲಿ, ಜಾಗೃತಿಯ ಿವು ಮೂಡಿಸುವುದಾಗಲಿ ಬಹಳ ಕಷ್ಟ. ಏಕೆಂದರೆ ಎಲ್ಲ ಸ್ವಾರ್ಥ ಮನೋಭಾವದ ಪ್ರಜೆಗಳು ಸಿಸುತ್ತಾರೆಯೋ ಅಲ್ಲಿ ಯಾವುದನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಅದಕ್ಕಾಗಿಯೇ ಗಾಂಧೀಜಿಯ ೋರಾಟದ ಸಫಲತೆಯ ರಾಷ್ಟ್ರದಲ್ಲಿ ಇಂದು ಹೋರಾಟಗಳು, ಮುಷ್ಕರಗಳು ಸಫಲತೆಯನ್ನು ಕಾಣಲು ಧ್ಯವಾಗುತ್ತಿಲ್ಲ. ಸ್ವಾರ್ಥದಿಂದ ತುಂಬಿದ ಮನಸ್ಸು ಯಾವತ್ತೂ ನಿಸ್ವಾರ್ಥದಿಂದ ಪ್ರತಿಸ್ಪಂದಿಸುತ್ತದೆಯೋ ಂದು ಯಾವುದೇ ಕಾನೂನು/ಆದೇಶಗಳು ಇಲ್ಲದೆಯೂ ಧೂಮಪಾನ ನಿಷೇದ ಮಾಡಬಹುದು.

ಪ್ರವಾಸೋದ್ಯಮ ಇಂದು ಪ್ರತಿಯೊಂದು ರಾಷ್ಟ್ರದ ಬಹುಮುಖ್ಯವಾದ ಆರ್ಥಿಕವಾಗಿ ಲಿಷ್ಟಗೊಳಿಸುವ ಚಟುವಟಿಕೆ ಉದ್ಯಮವಾಗಿ ರೂಪುಗೊಂಡಿದೆ. ಯಾವುದೇ ಕ್ಷೇತ್ರದಲ್ಲಿ ಆರ್ಥಿಕವಾಗಿ ಗತಿಯನ್ನು ಸಾಧಿಸಬೇಕಾದರೆ, ಎಚ್ಚರಿಕೆಯಿಂದ ಯೋಜನೆಗಳನ್ನು ರೂಪಿಸಬೇಕು, ಕಾರ್ಯಗತಗೊಳಿಸಬೇಕು ವಸ್ಥಿತವಾದ ಯೋಜನೆಯಿಂದ ಪ್ರವಾಸೋದ್ಯಮ ಬೆಳೆಯಲು ಉತ್ತುಂಗಕ್ಕೆ ಏರಲು ಸಾಧ್ಯ. ವಿಶ್ವದಲ್ಲಿ ೇಕ ರಾಷ್ಟ್ರಗಳು ಪ್ರವಾಸೋದ್ಯಮದ ಪ್ರಾಮುಖ್ಯತೆಯನ್ನು ಅರಿತುಕೊಂಡು ನಿರ್ಮಾಣಮಾಡಿಕೊಂಡಿದೆ. ಾಸೋದ್ಯಮದಲ್ಲಿ ಪ್ರಮುಖವಾಗಿ ಆಕರ್ಷಣೆಯೇ ಮುಖ್ಯ ಸಾಧನ. ಉತ್ತಮ ಪರಿಸರ ಇದ್ದಾಗ ಮಾತ್ರ ಾಸೋದ್ಯಮದ ಬೆಳವಣಿಗೆಯಾಗಲು ಸಾಧ್ಯ. ಅಮೆರಿಕ, "ಕೆನಡ ಎರಡರ ಗಡಿಯಲ್ಲಿ ರಾಕೀಸ್ ರ್ವತ ಶ್ರೇಣಿಯಿದೆ". (7) ಈ ರಾಕೀಸ್ ಪರ್ವತ ಶ್ರೇಣಿಯಲ್ಲಿ ಅಣೆಕಟ್ಟು, ನ್ಯಾಷನಲ್ ಪಾರ್ಕು, ೋವರಗಳು ಎಲ್ಲವುಗಳ ಸಮನ್ವಯತೆಯಿಂದ ಕೂಡಿದ ಸಾವಿರಾರು ಎಕರೆ ಪ್ರದೇಶ ಪ್ರವಾಸೋದ್ಯಮದ ಾಸಿ ತಾಣವಾಗಿದೆ. ವರುಷದ ಹನ್ನೆರಡು ತಿಂಗಳುಗಳಲ್ಲಿ ಕೇವಲ ಮೂರರಿಂದ – ನಾಲ್ಕು ಗಳುಗಳು ಮಾತ್ರ ಪ್ರವಾಸಕ್ಕೆ ಯೋಗ್ಯವಾದ ಸ್ಥಳವಾಗಿದೆ. ಅಮೆರಿಕ–ಕೆನಡ ಎರಡೂ ರಾಷ್ಟ್ರಗಳು ಇದರ ಸ್ತುವಾರಿಕೆಯನ್ನು ನಿರ್ವಹಿಸುತ್ತಿವೆ. ಪ್ರಪಂಚದ ಪ್ರವಾಸೋದ್ಯಮದ ಕೇಂದ್ರಗಳಲ್ಲಿ ಕೆಲವು ಪ್ರವಾಸಿ ಂದ್ರಗಳು ಶೀಘ್ರವಾಗಿ ಪ್ರಗತಿ ಹೊಂದುತ್ತವೆ. ಪ್ರವಾಸೋದ್ಯಮವನ್ನು ಐಚ್ಛಿಕವಾಗಿ ಅಧ್ಯಯನ ಮಾಡಲು ವಿದ್ಯಾಲಯಗಳು ಅನುಕೂಲ ಒದಗಿಸಿಕೊಟ್ಟಿವೆ. ಆದರೂ ಕೂಡ ಭಾರತದ ಪ್ರವಾಸೋದ್ಯಮ ತಕ್ಕ ಟ್ಟಿಗೆ ಬೆಳೆಯಲು ಸಾಧ್ಯವಾಗುತ್ತಿಲ್ಲ. ಭಾರತ ದೇಶದಲ್ಲಿ ಅತೀ ಹೆಚ್ಚಿನ ಪ್ರವಾಸಿ ತಾಣಗಳನ್ನು ಬಹುದು. ಪುರಾತನ ಸಂಸ್ಕೃತಿಯನ್ನು ಹೊಂದಿರುವ ಭಾರತ ದೇಶವು ಐತಿಹಾಸಿಕವಾಗಿ ಹಾಗೂ ರ್ಗಿಕವಾಗಿಯೂ ಪ್ರವಾಸಿಗಳನ್ನು ಆಕರ್ಷಿಸುವ ತಾಣವಾಗಿದೆ. ಆದರೂ ಕೂಡ ವಿದೇಶಿ ಪ್ರವಾಸಗಳು

ಟಿ ನೀಡಿದ ಸಂದರ್ಭದಲ್ಲಿ ವ್ಯವಸ್ಥಿತವಾಗಿ ಅವರಿಗೆ ಮಾರ್ಗದರ್ಶನ, ಸಹಕಾರ, ಇನ್ನಿತರ ಮೂಲ ಕರ್ಯಗಳ ಕೊರತೆ ಇಂದು ಕೂಡ ಎದುರಾಗುತ್ತಿವೆ. ಅಮೆರಿಕ ಮತ್ತು ಕೆನಡ ದೇಶಗಳು ಪ್ರವಾಸಿಗಳಿಗೆ ರ್ಷಿಸಲು ಹಾಗೂ ಪ್ರವಾಸಿ ತಾಣಗಳ ಉಸ್ತುವಾರಿಗೆ ನೈಪುಣ್ಯತೆಯನ್ನು ಪಡೆದ ಮತ್ತು ಸದರಿ ಷಯಕ್ಕೆ ಸಂಬಂಧಿಸಿ ಪದವಿಯನ್ನು ಪಡೆದಂತಹವರಿಗೆ ಅವಕಾಶ ಒದಗಿಸಿಕೊಟ್ಟಿದೆ. "ನ್ಯಾಷನಲ್ ರ್ಕ್ ಯೂನಿವರ್ಸಿಟಿ" (8) ಎಂದು ಪಾರ್ಕುಗಳ ಸಂಬಂಧದ ಅಧ್ಯಯನದ ವಿಶ್ವವಿದ್ಯಾಲಯಗಳು ರ್ಯನಿರ್ವಹಿಸುತ್ತಿವೆ, ಎಂದು ಗೊರೂರು ತಮ್ಮ ಕಥನದಲ್ಲಿ ವ್ಯಕ್ತಪಡಿಸಿದ್ದಾರೆ. ನುರಿತ ಸಿಬ್ಬಂದಿ ವರ್ಗ, ಸತಿ ಸೌಕರ್ಯ, ಹೋಟೆಲುಗಳು ಮತ್ತು ಆಹಾರ ಇವು ಪ್ರವಾಸೋದ್ಯಮ ಬೆಳೆಯಲು ಪ್ರಮುಖವಾದ ಶಗಳಾಗಿದ್ದು, ಅಮೆರಿಕಾ ಮತ್ತು ಕೆನಡ ದೇಶಗಳು ತಮ್ಮ ಆದಾಯವನ್ನು ಹೆಚ್ಚಿಸುವ ಪ್ರವಾಸಿ ಣಗಳನ್ನಾಗಿ ಮಾಡಿವೆ. ಸಂಶೋಧಕರಿಗೂ ಕೂಡ ಇಲ್ಲಿನ ರಾಷ್ಟ್ರೀಯ ಉದ್ಯಾನವನಗಳು ಶೋಧನೆಯ ತಾಣವಾಗಿವೆ. ಭಾರತ ದೇಶ ಪ್ರಾಕೃತಿಕವಾಗಿ ವಿಶ್ವದಲ್ಲಿಯೇ ಅತ್ಯಂತ ಸುಂದರ ದೇಶ ಮಾಲಯ ಪರ್ವತ, ಕಾಶ್ಮೀರದ ಸೊಬಗು, ಸಮುದ್ರದಿಂದ ಸುತ್ತುವರೆದಿರುವ ತೀರಪ್ರದೇಶಗಳು, ಪಾತ್ರಗಳು, ಘಟ್ಟಗಳು, ನದಿಗಳು, ಅರಣ್ಯಗಳು ಜೊತೆಗೆ ವೈವಿಧ್ಯತೆಯಿಂದ ಕೂಡಿರುವ ಹವಾಗುಣ ಗಳಿಂದ, ಹಲವಾರು ದೇಶಗಳಲ್ಲಿ ನೋಡಬಹುದಾದ ಪ್ರದೇಶಗಳು ಭಾರತ ಒಂದರಲ್ಲೇ ಣಬಹುದು. ಭಾರತ ದೇಶದಲ್ಲಿ ಪ್ರವಾಸೋದ್ಯಮಕ್ಕೆ ಬೇಕಾಗಿರುವಂತಹ ಆಕರ್ಷಣೆಗಳು ಮೃದ್ಧವಾಗಿವೆ. ಆದರೂ ಕೂಡ ನಮ್ಮ ಪ್ರವಾಸೋಧ್ಯಮದ ನಿರ್ವಹಣೆಯ ಕೊರತೆಯು, ಮೂಲ ಕರ್ಯಗಳ ಕೊರತೆಯೂ ಅಮೆರಿಕ–ಕೆನಡ ದೇಶಗಳಿಗೆ ಹೋಲಿಸಿಕೊಂಡಾಗ ನಮ್ಮ ಪ್ರವಾಸೋದ್ಯಮ ನ್ಯ ಎನ್ನಬಹುದು. "ಪ್ರಕೃತಿ ಒಂದು ಸ್ವಲ್ಪ ವೈಚಿತ್ರ್ಯ ಒದಗಿಸಿದರೂ ಸಾಕು ಅಮೆರಿಕನ್ನರು ಅದರ ಸುತ್ತ ು, ಬಸು, ವಿದ್ಯುತ್ ಸೌಕರ್ಯ ನೂರಾರು ಇತರ ವೈಜ್ಞಾನಿಕ ಸೌಕರ್ಯಗಳನ್ನೆಲ್ಲ ರ್ಪಸಿಬಿಡುತಾರೆ."(9) ನಾಲ್ಕು ದಶಕಗಳ ಹಿಂದೆಯೇ ಅಮೆರಿಕ–ಕೆನಡ ದೇಶಗಳು ಪ್ರವಾಸೋದ್ಯಮಕ್ಕೆ ಷ್ಟೊಂದು ಮಹತ್ವವನ್ನು ನೀಡಿದ್ದರೂ ಮತ್ತು ಅದಕ್ಕಾಗಿ ವೈಜ್ಞಾನಿಕ ಆಲೋಚನ ಕ್ರಮ ಮೆಚ್ಚುವಂತಹದು. ಕ್ಕಾಗಿಯೇ ಇರಬಹುದು ಅಮೆರಿಕೆಗೆ ಹೋಗುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿ ಇರುವುದು ಅನಿಸುತ್ತದೆ. ಧ್ಯತೆ ಅಥವಾ ಪ್ರಕೃತಿಯ ವೈಚಿತ್ರ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ಜಾಯಮಾನ ನಮ್ಮಲ್ಲಿ ದಿಗೂ ಸಹ ಕೊರತೆಯಾಗಿ ಕಾಣುತ್ತದೆ.

ಗೊರೂರರು ತಮ್ಮ ಪ್ರವಾಸದ ಅನುಭವವನ್ನು ವರ್ಣಿಸುವಾಗ ಕೇವಲ ತಾನು ಕಂಡದ್ದನ್ನು ನಮ್ಮ ್ಮ ಮುಂದಿಡದೆ ಭಾರತದೊಡನೆ ತುಲನೆಯನ್ನು ಮಾಡುತ್ತಾರೆ. ಅಮೆರಿಕದವರ ಜೀವನ ಕ್ರಮವನ್ನು,

ರದವರ ಸರ್ವ ಸುಖ ಸರ್ವರಿಗಾಗಿ ಎಂಬ ಯುಕ್ತಿಯನ್ನು ಸ್ವಾರಸ್ಯಪೂರ್ಣವಾಗಿ ವಿವರಿಸಿದ್ದಾರೆ. ರ ಜೀವನ ಕ್ರಮ, ಶಿಕ್ಷಣ ಕ್ರಮ ಅದರಲ್ಲೂ ಪ್ರೌಢಶಾಲೆಯ ಮಕ್ಕಳಿಗೆ ವಿಜ್ಞಾನದ ವಿಷಯವನ್ನು ದಿಸುವ ವಿಧಾನ ವೈವಿಧ್ಯ ಪೂರ್ಣ ಹಾಗೂ ವೈಜ್ಞಾನಿಕವಾದ್ದು ಎನ್ನುತ್ತಾರೆ. ಸ್ವಚ್ಛತೆಯ ಕಡೆಗೆ ಗಮನ ಸುವಂತಹದು ಅದಕ್ಕಾಗಿ ರಸ್ತೆಗಳನ್ನು ಶುಚಿಯಾಗಿಡಲು ಬೃಹತ್ತಾದ ಯಂತ್ರಗಳು, ಸಾರ್ವಜನಿಕರ ಕಾರ ಎಲ್ಲವುಗಳು ಸಮ್ಮಿಳಿತವಾದಾಗ ಒಂದು ರಾಷ್ಟ್ರ ಪರಿಪೂರ್ಣತೆಯನ್ನು ಹೇಗೆ ದುಕೊಳ್ಳಬಲ್ಲದು ಎಂದು ಕೆಲವು ಕಡೆ ಹಾಸ್ಯ ಭರಿತವಾಗಿ ಮತ್ತೆ ಕೆಲವು ಸಂದರ್ಭದಲ್ಲಿ ವಿಡಂಬಿಸುವ ಲಕ ಅವರು ಶಿಸ್ತು, ಸಮಯಪರಿಪಾಲನೆ, ದೇಶಾಭಿಮಾನ ಶಿಕ್ಷಣದ ಅರಿವಿನ ಹಸಿವು, ಬಸವಣ್ಣನ ದಂತೆ ಕಾಯಕದಲ್ಲಿ ಕೈಲಾಸ ಕಾಣುವ ಪ್ರಜೆಗಳು ಎಲ್ಲವೂ ಕೂಡಿ ಜಗತ್ತಿನಲ್ಲಿಯೇ ಅಮೆರಿಕ ದೇಶವು ಷ್ಟವಾಗಿ ದೊಡ್ಡಣ್ಣನಾಗಿ ಇರಲು ಸಾಧ್ಯವಾಗಿದೆ.

ಣಿಗಳು :

1) ಗೊರೂರು ರಾಮಸ್ವಾಮಿ ಅಯ್ಯಂಗಾರ್, ಅಮೆರಿಕಾದಲ್ಲಿ ಗೊರೂರು, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು. ಪುಟ–25

2) ಗೊರೂರು ರಾಮಸ್ವಾಮಿ ಅಯ್ಯಂಗಾರ್, ಅಮೆರಿಕಾದಲ್ಲಿ ಗೊರೂರು, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು. ಪುಟ–81

3) ಗೊರೂರು ರಾಮಸ್ವಾಮಿ ಅಯ್ಯಂಗಾರ್, ಅಮೆರಿಕಾದಲ್ಲಿ ಗೊರೂರು, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು. ಪುಟ–35

4) ಗೊರೂರು ರಾಮಸ್ವಾಮಿ ಅಯ್ಯಂಗಾರ್, ಅಮೆರಿಕಾದಲ್ಲಿ ಗೊರೂರು, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು. ಪುಟ–73–74

5) ಗೊರೂರು ರಾಮಸ್ವಾಮಿ ಅಯ್ಯಂಗಾರ್, ಅಮೆರಿಕಾದಲ್ಲಿ ಗೊರೂರು, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು. ಪುಟ–254

6) ಗೊರೂರು ರಾಮಸ್ವಾಮಿ ಅಯ್ಯಂಗಾರ್, ಅಮೆರಿಕಾದಲ್ಲಿ ಗೊರೂರು, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು. ಪುಟ–253

7) ಗೊರೂರು ರಾಮಸ್ವಾಮಿ ಅಯ್ಯಂಗಾರ್, ಅಮೆರಿಕಾದಲ್ಲಿ ಗೊರೂರು, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು. ಪುಟ–122

8) ಗೊರೂರು ರಾಮಸ್ವಾಮಿ ಅಯ್ಯಂಗಾರ್, ಅಮೆರಿಕಾದಲ್ಲಿ ಗೊರೂರು, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು. ಪುಟ–134

9) ಗೊರೂರು ರಾಮಸ್ವಾಮಿ ಅಯ್ಯಂಗಾರ್, ಅಮೆರಿಕಾದಲ್ಲಿ ಗೊರೂರು, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು. ಪುಟ–124

ಅಧ್ಯಾಯ-3 ಹಿಂದುಳಿದ ರಾಷ್ಟ್ರಗಳ ಪ್ರವಾಸ ಕಥನಗಳು

ಹಿಂದುಳಿದ ರಾಷ್ಟ್ರಗಳ ಪ್ರವಾಸಗಳ ಅಡಿಯಲ್ಲಿ ಪೆರು ಹಾಗೂ ಕ್ಯೂಬಾ ದೇಶಕ್ಕೆ ಸಂಬಂಧಿಸಿದ ಡು ಪ್ರವಾಸ ಕಥನಗಳನ್ನು ನನ್ನ ಅಧ್ಯಯನಕ್ಕೆ ತೆಗೆದುಕೊಂಡಿದ್ದೇನೆ. ನೇಮಿಚಂದ್ರ ಅವರ 'ಪೆರುವಿನ ತ್ರ ಕಣಿವೆಯಲ್ಲಿ' ಹಾಗೂ ಜಿ.ಎನ್.ಮೋಹನ್ ಅವರ 'ನನ್ನೊಳಗಿನ ಹಾಡು ಕ್ಯೂಬಾ', ಈ ಎರಡು ಾಸ ಕಥನಗಳು ನನ್ನ ಅಧ್ಯಯನದ ವ್ಯಾಪ್ತಿಯಲ್ಲಿವೆ.

ಮನುಷ್ಯನಿಗೆ ಹಾರಲು ರೆಕ್ಕೆಗಳು ಇಲ್ಲದಿದ್ದರು ಕನಸುಗಳ ಎತ್ತರದಿಂದ ಅಂತಹ ಅದ್ಭುತ ಯನ್ನು ನಮ್ಮದಾಗಿಸಕೊಳ್ಳಬಹುದು ಎಂಬುದನ್ನು ಒಂಟಿಯಾಗಿ ದಿಟ್ಟವಾಗಿ ಭಾಷೆ ಬಾರದ ನೆಲದಲ್ಲಿ ್ಮ ರೋಮಾಂಚಕ ಅನುಭವಗಳನ್ನು ನೇಮಿಚಂದ್ರ ಅವರು 'ಪೆರುವಿನ ಪವಿತ್ರ ಕಣಿವೆಯಲ್ಲಿ' ಖಲಿಸಿದ್ದಾರೆ.

'ನನ್ನೊಳಗಿನ ಹಾಡು ಕ್ಯೂಬಾ' ಸೃಜನೇತರ ಸಾಹಿತ್ಯ ಮಾಲಿಕೆಯ ಅಡಿಯಲ್ಲಿ ಟವಾದರೂ ಕ್ಯೂಬಾದ ಜನಮನದಲ್ಲಿ ಮಿಳಿತವಾದ ಕಾವ್ಯ, ಕುಣಿತದ ಹೆಜ್ಜೆಗಳನ್ನು ಮೋಹನ್ ಅವರು ುತಿಸಿದ್ದಾರೆ.

ಭಾರತ ದೇಶವು ಸೇರಿ ಜಗತ್ತಿನ ಹಲವಾರು ದೇಶಗಳು 18-19ನೇ ಮತ್ತು 20ನೇ ಶತಮಾನದ ು ದಶಕಗಳವರೆಗೆ ನೇರವಾಗಿ ವಸಾಹತು ಷಾಹಿಗೆ ಒಳಪಟ್ಟ ದೇಶಗಳಾಗಿದ್ದವು. ವಸಾಹತು ಶಾಹಿಗೆ ಪಟ್ಟ ದೇಶಗಳಿಗೆ ಇಪ್ಪತ್ತನೆಯ ಶತಮಾನದ 5-6ನೇ ದಶಕಗಳಲ್ಲಿ ವಸಾಹತು ಶಾಹಿಯ ನೇರವಾದ ಳಿತದಿಂದ ಮುಕ್ತಿ ಲಭಿಸಿತು. ಆದರೆ ಸಂಪೂರ್ಣವಾಗಿ ಯಾವುದೇ ರಾಷ್ಟ್ರಗಳು ಅವುಗಳ ಕಪಿ ಷ್ಠಿಯಿಂದ ಹೊರಗೆ ಬರಲು ಇಂದಿಗೂ ಸಾದ್ಯವಾಗಲಿಲ್ಲ. ಏಕೆಂದರೆ ಇಂದು ಪಾಶ್ಚಿಮಾತ್ಯ ರಾಷ್ಟ್ರಗಳು ಪಾರದ ಮೂಲಕ ಸಂಪೂರ್ಣವಾದ ಸ್ವಾಮ್ಯವನ್ನು ಒದಗಿಸಿಕೊಂಡಿವೆ. ಜಾಗತೀಕರಣದ ಮೂಲಕ ಇಟ್ಟಿರುವ ಉದ್ಯಮಗಳು ಸಾಂಸ್ಕೃತಿಕವಾಗಿ ಬದಲಾವಣೆಯನ್ನು ಮಾಡುವ ಉದ್ದೇಶ ಹೊಂದಿವೆ. ರತವು ಸೇರಿ ಅನೇಕ ರಾಷ್ಟ್ರಗಳು ಸಾವಿರಾರು ವರುಷಗಳ ಸಾಂಸ್ಕೃತಿಕ ಇತಿಹಾಸ ಹೊಂದಿರುವಂತಹ ಶಗಳು ತಮ್ಮ ಮೂಲ ಸಂಸ್ಕೃತಿಯನ್ನು ಸಂಪೂರ್ಣವಾಗಿ ಬಿಟ್ಟುಕೊಡದ ಮತ್ತು ಹೊಸದನ್ನು ತ್ಯಜಿಸದೇ ದ್ವ ಸ್ಥಿತಿಯಲ್ಲಿ ಇವೆ. ದಕ್ಷಿಣ ಅಮೆರಿಕ ಖಂಡದಲ್ಲಿರುವ ಪೆರು ದೇಶವು ಸಾಂಸ್ಕೃತಿಕವಾಗಿ ಸಾವಿರಾರು ಷಗಳ ಇತಿಹಾಸವನ್ನು ಹೊಂದಿರುವಂತಹ ರಾಷ್ಟ್ರ. ಇಲ್ಲಿ ಇಂದಿಗೂ ಕೂಡ ಮೂಲ ಸಂಸ್ಕೃತಿಯ

ುಗಳು ಗಟ್ಟಿಯಾಗಿಯೇ ಉಳಿದುಕೊಂಡಿವೆ. ಜೊತೆಗೆ ಜೀವಂತಿಕೆಯಿಂದಲೂ ಕೂಡಿವೆ. ಇದಕ್ಕೆ ಕಾರಣ ಮೆರಿಕದಂತೆ ಎಲ್ಲಿಂದಲೋ ವಲಸೆ ಬಂದು, ಸ್ಥಳೀಯರನ್ನೆಲ್ಲ ಬಡಿದು ಮುಗಿಸಿ, ರಾತ್ರೋ ರಾತ್ರಿ ಏರಿ ತು, ಬೇರಿಲ್ಲದೆ ಬೆಳೆದ ಸಂಸ್ಕೃತಿಯಲ್ಲಿ ಈ ನೆಲದಲ್ಲಿ ಸಾವಿರಾರು ವರ್ಷಗಳ ಚರಿತ್ರೆಯಿತ್ತು. ಅತ್ಯಂತ ರಾತನ ಆಂಡೀಸ್ ಬೆಟ್ಟಗಳ ಕಠಿಣ ನೆಲದಲ್ಲಿ ಜೀವಂತವಿದ್ದ ಜನಜೀವನವಿತು." (1) ಪೆರು ದೇಶದ ರ ಸಂಸ್ಕೃತಿ ಪುರಾತನವಾಗಿರುವುದಷ್ಟೇ ಅಲ್ಲ ಇಲ್ಲಿನ ನೆಲ ಕೂಡ ಕಠಿಣತೆಯಿಂದ ಕೂಡಿರುವುದು. ಆ ಣತೆ ಎಷ್ಟೆಂದರೆ ಬೆಟ್ಟದ ರೀತಿ, ಬೆಟ್ಟಗಳು ಯಾವ ರೀತಿಯಲ್ಲಿ ಮಳೆ, ಪ್ರವಾಹ, ಬಿರುಗಾಳಿ ಬಂದರೂ ಲದೆ ತಟಸ್ಥವಾಗಿ ಮನೋಹರವಾಗಿ ಕಾಣುತ್ತವೆಯೋ ಹಾಗೆಯೇ ಹೊರಗಿನದನ್ನು ಅರಗಿಸಿಕೊಂಡು ಜೀವಂತಿಕೆಯನ್ನು ಕಾಪಾಡಿಕೊಂಡಿದೆ.

ಇಂಗ್ಲಿಷ್ ಭಾಷೆಯೂ ಜಾಗತಿಕ ಭಾಷೆಯಾಗಿದ್ದು ಅಥವಾ ಎಲ್ಲ ದೇಶಗಳು (ಕೆಲವು ದೇಶಗಳು ರತುಪಡಿಸಿ) ಸೇರಿ ದೊಡ್ಡಣ್ಣನ ಪಟ್ಟವನ್ನು ಕಟ್ಟಿ ಜಾಗತಿಕ ಭಾಷೆಯನ್ನಾಗಿ ನಾಮಕರಣ ಮಾಡಿದ್ದಾರೆ. ರತ ದೇಶದಲ್ಲಂತೂ ಇಂಗ್ಲಿಷ್ ಭಾಷೆಯ ವ್ಯಾಮೋಹಕ್ಕೆ ಬಲಿಯಾಗದೇ ಉಳಿದಿರುವ ಜನ ಸಮೂಹ ಯೂ ಕೂಡ ಇರಲು ಸಾಧ್ಯವಿಲ್ಲ. ನಗರ ಪ್ರದೇಶಗಳಿಂದ ಹಿಡಿದು ಗ್ರಾಮ ಮಟ್ಟದವರೆಗೂ ಇಂಗ್ಲೀಷ್ ರತದ ಸಂಧಿ–ಗೊಂದಿಗಳಲ್ಲಿ ಸೇರಿಕೊಂಡು ವ್ಯವಹಾರಿಕ ಭಾಷೆಯಾಗಿದೆ. ನಗರ ಮತ್ತು ಹಾನಗರಗಳಲ್ಲಿ ಕೆಲವು ಕುಟುಂಬಗಳಲ್ಲಿ ಮಾತೃ ಭಾಷೆಯಾಗಿಯೂ ಗೌರವ ಪಡೆದುಕೊಂಡಿದೆ. ಭಾರತ ರ್ಕರವು ಶಿಕ್ಷಣದ ಕಲಿಕೆಯ ಸಂದರ್ಭದಲ್ಲಿ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಇಂಗ್ಲೀಷ್, ಹಿಂದಿ ಮತ್ತು ಯಾ ರಾಜ್ಯದ ಭಾಷೆಯನ್ನು ಸೇರಿಸಿ ತ್ರಿಭಾಷಾ ಸೂತ್ರವನ್ನು ಅನುಷ್ಠಾನಗೊಳಿದಾಗ ತಮಿಳುನಾಡು ರ್ಕರ ಹಿಂದಿ ಭಾಷೆಯನ್ನು ನಾವು ಒಪ್ಪಿಕೊಳ್ಳುವುದಿಲ್ಲ ಎಂದು ಕ್ಯಾತೆ ತೆಗೆಯಿತು. ತಮಿಳುನಾಡು ಕ್ಯಾತೆ ುದರಲ್ಲಿ ಸತ್ಯಾಂಶವಿರಬಹುದು, ಏಕೆಂದರೆ ಭಾರತದ ದಕ್ಷಿಣ ಭಾಗದ ಆಂಧ್ರ ಪ್ರದೇಶ, ಕರ್ನಾಟಕ, ಳುನಾಡು ಮತ್ತು ಕೇರಳ ರಾಜ್ಯಗಳ ಭಾಷೆಗಳು ದ್ರಾವಿಡ ಕುಟುಂಬಕ್ಕೆ ಸೇರಿರುವುದು. ಹಿಂದಿ ಷೆಯು ಸಹ ಎರಡು–ಮೂರು ರಾಜ್ಯಗಳಲ್ಲಿ ಮಾತ್ರ ಬಳಕೆಯಲ್ಲಿದ್ದು ಉಳಿದ ಉತ್ತರ ಭಾರತದ ಬೇರೆ– ರಾಜ್ಯಗಳಲ್ಲಿ ಅವರದೇ ಆದಂತಹ ಭಾಷೆಗಳು ಆಡಳಿತ ಭಾಷೆಯಾಗಿ ಶಿಕ್ಷಣದ ಭಾಷೆಯಾಗಿ ಯಲ್ಲಿವೆ. ಇಂತಹ ಸಂದರ್ಭದಲ್ಲಿ ಹಿಂದಿ ಭಾಷೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಳುನಾಡಿನ ತಕರಾರನ್ನು ಪರಿಗಣಿಸಬಹುದು. ಆದರೆ ಅದೇ ತಮಿಳಿನ ಸರ್ಕಾರ ಮತ್ತು ಸಾಮಾನ್ಯರು ಹಿಂದಿಯನ್ನು ಒಪ್ಪದೇ ಇಂಗ್ಲೀಷನ್ನು ಬರಮಾಡಿಕೊಂಡದ್ದು ನಿಜಕ್ಕೂ ಆಶ್ಚರ್ಯ ಟುಮಾಡುತ್ತದೆ. ಹಾಗೆಯೇ ಕರ್ನಾಟಕದಲ್ಲಿಯೂ ಇತ್ತೀಚಿನ ವರ್ಷಗಳಲ್ಲಿ ಶಾಲಾ ಪ್ರಾರಂಭದ

ರ್ಭದಲ್ಲಿ ಚರ್ಚಿತವಾಗುತ್ತಿರುವ ವಿಷಯ ಪ್ರಾಥಮಿಕ ಹಂತದಲ್ಲಿ ಮಕ್ಕಳಿಗೆ ಯಾವ ಮಾಧ್ಯಮದಲ್ಲಿ ಣವನ್ನು ನೀಡಬೇಕು? ಎಂಬುದು ಚರ್ಚೆಯ ಸಂದರ್ಭದಲ್ಲಿ ರಾಜ್ಯದ ಚಿಂತಕರು ಮತ್ತು ದ್ಧಿಜೀವಿಗಳು ಪ್ರತಿಕ್ರಿಯೆ ನಿಜಕ್ಕೂ ಆಶ್ಚರ್ಯ ಉಂಟುಮಾಡುವಂತಹದು. ಈ ನಾಡಿನ ಚಿಂತಕರು ಸಿಕೊಂಡವರು ಮಕ್ಕಳಿಗೆ ಪ್ರಾಥಮಿಕ ಹಂತದ ಶಿಕ್ಷಣವನ್ನು ಮಾತೃ ಭಾಷೆಯ ಮೂಲಕ ನೀಡಿದರೆ ಕೆಯ ಸಾಮರ್ಥ್ಯ ಹೆಚ್ಚಾಗಿರುತ್ತದೆ. ಆದ್ದರಿಂದ ಮಕ್ಕಳು ಕಲಿಯಲು ಮತ್ತು ಅರ್ಥಮಾಡಿಕೊಳ್ಳಲು ಯೋಜನಕಾರಿಯಾದುದು ಎನ್ನುತ್ತಾರೆ. ಇದರಿಂದ ಉತ್ತೇಜಿತವಾದ ಸರ್ಕಾರವು ಕೂಡ ಸರ್ಕಾರಿ ದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ಕಡ್ಡಾಯವಾಗಿ ಕನ್ನಡ ಮಾಧ್ಯಮದಲ್ಲೇ ಪ್ರಾಥಮಿಕ ತದಲ್ಲಿ ಶಿಕ್ಷಣವನ್ನು ನೀಡಬೇಕು ಎಂದು ಆದೇಶಿಸಿತು. ಇದು ಕೋರ್ಟಿನ ಮೆಟ್ಟಿಲು ಕೂಡ ಏರಿತು. ಒಂದು ಕಡೆಯಾದರೆ ಇಡೀ ದೇಶದಲ್ಲೇ ಇಂಗ್ಲಿಷ್ ಭಾಷೆಯನ್ನು ಜಾಗತಿಕರಣದ ಭಾಷೆಯೆಂದು ಕೊಂಡಿದ್ದಾರೆ. ಇಂಗ್ಲಿಷ್ ಭಾಷೆಯನ್ನು ತಿಳಿದುಕೊಳ್ಳದೇ–ಒಪ್ಪಿಕೊಳ್ಳದೇ ಬದುಕುತ್ತಿರುವ ಮತ್ತು ಸುತ್ತಿರುವ ರಾಷ್ಟ್ರಗಳು ಪ್ರಪಂಚದಲ್ಲಿ ಅನೇಕ ಇವೆ. ಜರ್ಮನಿ, ರಷ್ಯಾ, ಚೈನಾ ದೇಶಗಳು ತಮ್ಮ ಷ್ಟ್ರದ ಭಾಷೆಗಳನ್ನು ಶಿಕ್ಷಣದಲ್ಲಿ, ಸಂವಹನದಲ್ಲಿ ಎಲ್ಲದರಲ್ಲೂ ಬಳಸಿಕೊಂಡು ಪ್ರಗತಿಯನ್ನು ಸುತ್ತಿವೆ. ದಕ್ಷಿಣ ಅಮೆರಿಕದ ಖಂಡದಲ್ಲಿರುವ ಪೆರುವಿನಲ್ಲಿ ಸಹ ಇಂಗ್ಲಿಷ್ ಭಾಷೆಯನ್ನು ಬಳಸದೆ ಯ ಭಾಷೆಯಾದ 'ಕೆಚುವಾ' ಮತ್ತು ಸ್ಪಾನಿಷ್ ಬಳಕೆಯಲ್ಲಿದೆ. " ಪೆರುವಿನ ತುಂಬಾ ನಮಗೆ ವುದು ಸ್ಪಾನಿಷ್ ಭಾಷೆಯೇ."(2) ಪೆರು ದೇಶ ಇಂದಿಗೂ ಕೂಡ ಇಂಗ್ಲಿಷ್ ಭಾಷೆಯನ್ನು ಬಳಸದೇ ಕುತ್ತಿಲ್ಲವೇ? ತಂತ್ರಜ್ಞಾನದಲ್ಲಿ ಮುಂದುವರೆದ ರಾಷ್ಟ್ರಗಳಾದ ಜಪಾನ್, ಕೊರಿಯಾ, ರಷ್ಯಾ, ಜರ್ಮನಿ ತ್ತು ಚೈನಾ ದೇಶಗಳು ತಮ್ಮ-ತಮ್ಮ ರಾಷ್ಟ್ರದ ಭಾಷೆಗಳನ್ನು ಎಲ್ಲ ಕ್ಷೇತ್ರಗಳಲ್ಲಿಯೂ ನಡಿಸಿಕೊಂಡಿದ್ದು, ಇಂಗ್ಲಿಷ್ ಭಾಷೆಯನ್ನು ದೂರ ಇಡುವ ಮೂಲಕ ಜಾಗತಿಕ ಮಟ್ಟದಲ್ಲಿ ತಿಸಿಕೊಳ್ಳುವಷ್ಟು ಪ್ರಗತಿಯನ್ನು ಹೊಂದಿವೆ.

ಭಾರತದ ನಗರಗಳ ಜನಜೀವನದ ಓಟ ಇಂದು ಬಹಳ ವೇಗವಾಗಿ ನಡೆಯುತ್ತಿದೆ. ಯಾರಿಗೂ ತ ಬಿಡುವಿಲ್ಲದಷ್ಟು ಕೆಲಸದ ಅನಿವಾರ್ಯತೆ ಶಾಂತಿಯಿಂದ ಕೆಲವು ಕ್ಷಣಗಳವರೆಗೆ ಕುಳಿತು ಯಿಸಿಕೊಳ್ಳುವಷ್ಟು ಕೂಡ ಸಮಯವಿಲ್ಲದ ಜನ. ನಗರ ಪ್ರದೇಶಗಳ ಜೀವನ ನವ್ಯ ಲೇಖಕರ ಸಾಹಿತ್ಯದ ಗಳು ವಾಸ್ತವ ಚಿತ್ರಣ ಆಗಿಬಿಟ್ಟಿದೆ. ದುಡಿಮೆ ಒಂದೇ ಜೀವನದ ಸಫಲತೆ ಕಾಣಲು ಮುಖ್ಯವಾದದು ು ಮನುಷ್ಯ ಮನಗೊಂಡನೊ ಅಂದೇ ತನ್ನ ಸುಖ, ಸಂತೋಷ, ನೆಮ್ಮದಿಯನ್ನು ಕಳೆದುಕೊಂಡನು. ರು, ಬಾಂಧವರು, ಗೆಳೆಯರನ್ನು ದೂರ ಮಾಡಿಕೊಂಡನು. ಹಬ್ಬ ಹರಿದಿನಗಳನ್ನು ಕಳೆದುಕೊಂಡನು.

ಾಗಿ ತನ್ನ ಜೀವನದ ಮೂಲ ಸೊಬಗು, ರಸಗಳಿಗೆಗಳನ್ನು ದೂರ ಮಾಡಿಕೊಂಡು ಬಿಟ್ಟ, ನಗರಗಳ ತ್ತು ಗ್ರಾಮಗಳ ಜನಜೀವನವನ್ನು ಹೋಲಿಸಿದರೆ ಭೂಮಿ-ಆಕಾಶದಷ್ಟು ಅಂತರವನ್ನು ಕಾಣುತ್ತದೆ. ಮು ಗ್ರಾಮ ಒಂದು ಕುಟುಂಬದಂತೆ ಜೀವನವನ್ನು ನಡೆಸುತ್ತಿರುತ್ತದೆ. ನಗರ ಪ್ರದೇಶಗಳ ಕುಟುಂಬ ಜನೆಗೊಂಡು ತನ್ನ ಕುಟುಂಬದ ಸದಸ್ಯರೊಡನೆಯೇ ಅಪರಿಚಿತವಾಗಿ ಅಥವಾ ದೂರದ ಬಂಧುಗಳ ಯಲ್ಲಿ ಜೀವಿಸುತ್ತಿರುತ್ತವೆ. ಇನ್ನೂ ನೆರೆ-ಹೊರೆಯವರ ಮಾತು ಹೇಳುವ ಹಾಗೆ ಇಲ್ಲ. ಅಕ್ಕ-ಪಕ್ಕದ ೆಯವರ ಮುಖ ಕೂಡ ಕಂಡಿರುವುದಿಲ್ಲ. ಹೀಗೆ ನಗರ ಪ್ರದೇಶದ ಜನರ ಜೀವನ ಾನವಾಗಿರುವುದರಿಂದ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ. ಅದರಲ್ಲೂ ಮುಖ್ಯವಾಗಿ .ಬಿ.ಟಿ. ಕಂಪನಿಗಳ ನೌಕರರು, ಗಂಡ-ಹೆಂಡತಿ ಇಬ್ಬರು ನೌಕರರಾಗಿದ್ದವರು ಜೀನವದಿಂದ ಪ್ಸೆಗೊಂಡು ಸಾವಿಗೆ ಶರಣಾಗತಿಯಾಗುತ್ತಿದ್ದಾರೆ. ಕುಟುಂಬ ವಿಭಜನೆಯ ಚಾಳಿ, ದುಡಿಮೆಯ ಿದ ಕನಸು ನಮಗೆ ಲಭಿಸಿದ್ದು ಪಾಶ್ಚಾತ್ಯರಿಂದ ಅಂದು, ಇಂದು ದೂರದರ್ಶನದ ಧಾರಾವಾಹಿಗಳ ೂಲಕ ಮನುಷ್ಯ-ಮನುಷ್ಯನ ಒಡನಾಟಗಳು ಅಮೆರಿಕದಂತೆ, ಭಾರತದ ನಗರ ಪ್ರದೇಶಗಳಲ್ಲೂ ಯವಾಗಿದೆ, ಇಂಗ್ಲಿಷ್ ದೇಶಗಳಂತೆ "ಇಲ್ಲಿ ಊರ ನಡುವಿನ ಪುಟ್ಟ ವೃತ್ತಾಕಾರದ ಪಾರ್ಕಿನ ಸುತ್ತಲಿದ್ದ ಕುಗಳಲ್ಲಿ ಕುಳಿತ ಜನ ಕೈ ಬುಟ್ಟಿಯಲ್ಲಿ ಏನನ್ನೋ ಮಾರಲು ತಂದ ಜನ ಒಂದು ಸುಂದರ ಸಂಜೆಯ ಚಿತ್ರ ಈ ನೆಲದ ಜನರ ಬದುಕಿಗೆ ಇಣುಕು ನೋಟವಾಗಿತ್ತು"(3) ಪೆರು ದೇಶದ ಜನಜೀವನ ಚವಾದ ಗ್ರಾಮ ಜೀವನವಾಗಿದೆ. ಹೇಗೆಂದರೆ ಎರಡು-ಮೂರು ದಶಕಗಳ ಹಿಂದಿನ ಭಾರತ ುಗಳ ಹಾಗೆ ಹೊರಗಿನ ಪ್ರಭಾವಕ್ಕೆ ಒಳಗಾಗದ ಪ್ರೀತಿ ಅಕ್ಕರೆ ತುಂಬಿದ ಜೀವನ ಭಯ ಆತಂಕವಿಲ್ಲದ ್ಧಿ ತುಂಬಿದ ಬದುಕಿಗೆ ಸಮಯದ ಅಭಾವವಾಗಲೀ ಅಥವಾ ದುಡಿದು ಕೂಡಿಡುವ ಚಿಂತೆಯಾಗಲಿ 'ಶ್ರೀಮಂತರ ಮನೆ ಮಾತು ಚಂದ ಬಡವರ ಮನೆ ಊಟ ಚಂದ' ಗಾದೆಯಂತೆ ಬಡತನ ಬಿದ ಬದುಕಿನಲ್ಲಿ ಮನುಷ್ಯತ್ವದ ಗುರುತುಗಳು ಹೆಜ್ಜೆ-ಹೆಜ್ಜೆಗೂ ಕಾಣಸಿಗುತ್ತವೆ. ಗ್ರಾಮಗಳಲ್ಲಿ ಯುವ ಸಂತೆಗಳು ಕೇವಲ ವ್ಯಾಪಾರದ ವಿನಿಮಯದ ಮಾರುಕಟ್ಟೆ ಅಲ್ಲ. ಸುಖ ದು:ಖಗಳನ್ನು ಕಿಕೊಳ್ಳುವ ವಿನಿಮಯದ ತಾಣ ಆಗಿರುತ್ತದೆ. "ಅಂಗಡಿಯವ ನಾವು ಒಳಗೆ ಪ್ರವೇಶಿಸಿದ್ದೇ ಡಿಯನ್ __ಇಂಡಿಯನ್' ಎಂದು ಸಂಭ್ರಮದಿಂದ ಸ್ವಾಗತಿಸಿದ. ನಾವು ಹಣ ನೀಡಿ ರಡುತ್ತಿದ್ದಂತೆಯೆ, ನಮ್ಮನ್ನು ನಿಲ್ಲಿಸಿದ ಆತ, ಮಾರಲು ಇಟ್ಟಿದ್ದ ಕೃತಕ ರೋಜಾ ಹೂಗಳಲ್ಲಿ ಎರಡನ್ನು ು ನಮ್ಮ ಕೈಗಿಟ್ಟ"(4) ಯಾವುದೇ ಮಾಲ್‌ಗಳಾಗಲಿ, ಷಾಪಿಂಗ್ ಸೆಂಟರ್‌ಗಳನ್ನಾಗಲಿ ಕೇವಲ ಕರೆನ್ಸಿ ಾ ರೂಪಾಯಿಗಳ ವ್ಯವಹಾರ ಅಥವಾ ಕ್ರೆಡಿಟ್ ಕಾರ್ಡ್, ಡೆಬಿಟ್‌ಕಾರ್ಡ್‌ಗಳಿಂದ ಮೂಲ

ುಗಳನ್ನು ಪಡೆದುಕೊಳ್ಳಬಹುದು ಅಷ್ಟೇ. ಹೃದಯಗಳ ಮನುಷ್ಯತ್ವದ ಸುಖ-ದು:ಖಗಳನ್ನು ಚಿಕೊಳ್ಳುವ, ಗ್ರಾಮೀಣ ಜನರ ಹರಟೆ-ಸಂಭಾಷಣೆಯ ವಿನಿಮಯ ಮಾಡಿಕೊಳ್ಳುವಂತಹ ಒಂದು ಪ್ರಪಂಚವಾಗಲು ಆಧುನಿಕ ಮಾರುಕಟ್ಟೆಯಲ್ಲಿ ಸಾಧ್ಯವಿಲ್ಲ. ಭಾರತ ದೇಶದ ಮಾರುಕಟ್ಟೆಗಳಾದ ತೆಗಳಲ್ಲಿ ಮಾತ್ರ ಸಾಧ್ಯ. ನಗರ ಪ್ರದೇಶದ ಮಂದಿ ಗ್ರಾಮೀಣ ಪ್ರದೇಶದ ಜನರಿಗಿಂತ ಬುದ್ಧಿವಂತರು ಮುಕೊಂಡಿದ್ದೇವೆ. ಗ್ರಾಮೀಣ ಪ್ರದೇಶದ ಜನರು ನಗರ ಪ್ರದೇಶದ ಜನರಿಗೆ ಹೆದರುತ್ತಾರೆ. ಕಾರಣ ರ ಪ್ರದೇಶಗಳಲ್ಲಿ ಹೆಚ್ಚಾಗಿ ಮೋಸ, ಕಪಟತನ, ವಂಚನೆಗಳು ಅತಿಯಾಗಿವೆ. ಇವುಗಳನ್ನೆ ಬುದ್ಧಿವಂತಿಕೆ ದರೆ ಬುದ್ಧಿವಂತಿಕೆಯನ್ನು ಏನೆಂದು ಕರೆಯಬೇಕೋ ತಿಳಿಯದು. ಬೆಂಗಳೂರು ಮಹಾನಗರಕ್ಕೆ, ರದ ಪರಿಚಯವಿಲ್ಲದ ವ್ಯಕ್ತಿ ಟ್ಯಾಕ್ಸಿ, ಆಟೋ ಏರಿದರೆ ಮೋಸ ಮಾಡುವಂತಹದು ದಿನ ನಿತ್ಯದಲ್ಲಿ ಸಿಗುತ್ತದೆ. ಪೆರುವಿನಲ್ಲೂ ಕೂಡ ಹೃದಯವಂತಿಕೆಯ ಜನ ಇದ್ದಾರೆ. ಭಾಷೆ ಬರದೇ ಇರುವ ರನ್ನು ಸಹ ಮೋಸ ಮಾಡದಂತಹ ಜನಸಮುದಾಯ "ಸದ್ಯ ಈ ನೆಲವಿನ್ನು ಸ್ಮಾರ್ಟ್ ಆಗಿಲ್ಲ"(5) ದರೆ ಮೋಸ ಮಾಡುವಷ್ಟು ಬುದ್ಧಿವಂತರಾಗಿಲ್ಲ ತುಂಬಾನೇ ಸರಳ ಬದುಕು ನಡೆಸುವಂತಹ ಜನ ಮಾನ್ಯವಾಗಿ ಮೋಸ ಮಾಡುವಂತಹ ಜಾಯಮಾನಕ್ಕೆ ವಗ್ಗುವುದಿಲ್ಲ. ಅತಿಯಾದ ಆಡಂಬರ ರುವಿಕೆಯ ಗುಣವುಳ್ಳಂತಹ ವ್ಯಕ್ತಿಗಳನ್ನು ನಂಬಲು ಅನುಮಾನ ಉಂಟಾಗುತ್ತದೆ.

ಇವತ್ತಿನ ಸಂದರ್ಭದಲ್ಲಿ ಅತೀ ಜಟಿಲವಾದ ಕುಟುಂಬದ ಸಮಸ್ಯೆಗಳಲ್ಲಿ ದಾಂಪತ್ಯಜೀವನ ಸ್ಯೆಯು ಒಂದು ಅವಿಭಕ್ತ ಕುಟುಂಬಗಳು ಇದ್ದಂತಹ ಸಂದರ್ಭದಲ್ಲಿ ದಾಂಪತ್ಯ ಜೀವನದ ಸ್ಯೆಗಳು ತೀರ ವಿರಳ ಅಂದರೆ ವಿರಳವಾಗಿದ್ದವು. ವಿದ್ಯಾಭ್ಯಾಸದ ಕೊರತೆ ಇದ್ದುದ್ದರಿಂದ ಸಮಾಜಕ್ಕೆ ಸ್ಯೆಗಳು ತಲುಪುತ್ತಿರಲಿಲ್ಲ ಎನ್ನುವವರು ಇದ್ದಾರೆ. ಆದರೆ ವಾಸ್ತವ ಕಾರಣಗಳಲ್ಲಿ ವಿದ್ಯಾಭ್ಯಾಸ ದಂತಹ ಹೆಣ್ಣಾಗಲಿ-ಗಂಡಾಗಲಿ ಹೊಂದಾಣಿಕೆಯ ಕೊರತೆಯಿದೆ. ಜೊತೆಗೆ ವಿದ್ಯಾಭ್ಯಾಸ ಒಳ್ಳೆಯ ಳ ತರುವಂತಹ ಅಳಿಯ ಬೇಕು ಎಂದು ವಧುವಿನ ಶ್ರೀಮಂತ ಪೋಷಕರು ವರದಕ್ಷಿಣೆ, ಮನೆ, ಇವುಗಳನ್ನು ನೀಡುತ್ತಿದ್ದು, ಆಮಿಷಕ್ಕೆ ಒಳಗಾಗುವ ವರ ಮತ್ತೆ-ಮತ್ತೆ ಹಣಕ್ಕೆ ಪೀಡಿಸುವುದು ರ್ವಸಾಮಾನ್ಯವಾಗಿದೆ. ಮತ್ತೊಂದು ಮುಖ್ಯವಾದ ಸಮಸ್ಯೆ ಎಂದರೆ ಹೆಣ್ಣು ತಾನು ಹುಟ್ಟಿ ಬೆಳೆದು ರ ಕುಟುಂಬದ ಸದಸ್ಯರ ಅಗಲುವಿಕೆ, ಹೊಸ ಪರಿಸರ, ಹೊಸ ಸಂಬಂಧಗಳ ನಡುವಿನ ಂದಾಣಿಕೆ ಮಾಡಿಕೊಳ್ಳಲು ಕಾಲಾವಕಾಶ ನೀಡದೇ ಇರುವುದರಿಂದ ಸಂಬಂಧಗಳು ಕಡಿದು ಕೊಳ್ಳುತ್ತಾ ಹದ ಭದ್ರತೆ ಸಡಿಲವಾಗುತ್ತಿದೆ. ಕೆಲವು ದಿನಗಳ ಹಿಂದೆ ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯ ಮಧ್ಯೆ ಪ್ರವೇಶಿಸಿ ವಿವಾಹದ ಸಂಬಂಧಗಳನ್ನು ಗಟ್ಟಿಗೊಳಿಸಲು ವರನ ಕುಟುಂಬದವರು

ಕರಿಸಬೇಕು. ಹೊಂದಾಣಿಕೆ ಆಗುವವರೆಗೆ ಹೆಣ್ಣನ್ನು ತವರು ಮನೆಗೆ ವಾರಕ್ಕೆ ಒಂದು ಸಲ ಆದರೂ ಕರೆದುಕೊಂಡೇ ಹೋಗಬೇಕು. ತವರು ಮನೆಗೆ ಹೋಗುವುದನ್ನು ನಿಷೇಧಿಸಬಾರದು ಎಂದು ಸಮಸ್ಯೆಗಳ ಸರಮಾಲೆಗಳು ಇವೆ. ನಾಗರೀಕ ಸಮಾಜದಲ್ಲಿ ಎಷ್ಟೇಲ್ಲಾ ಸಮಸ್ಯೆಗಳ ಸರಮಾಲೆಗಳು ಇವೆ. ಭಾರತ ದದಲ್ಲಿ ಪ್ರೇಮ ವಿವಾಹವನ್ನು ಬೆಂಬಲಿಸಬೇಕೋ ಅಥವಾ ಸಾಂಪ್ರದಾಯಿಕ ವಿವಾಹವನ್ನು ಬೆಂಬಲಿಸಬೇಕೋ ಎಂಬುದು ನಿರ್ಣಯಿಸಲು ಸಾಧ್ಯವಾಗದಂತಹ ಚರ್ಚೆಯಾಗಿದೆ. ಪ್ರೇಮ ವಿವಾಹ ಬೆಂಬಲಿಸೋಣ ಎಂದರೆ, ಪ್ರೀತಿಸಿ ವಿವಾಹ ಆಗಿ ಸುಖವಾಗಿ ಜೀವನ ನಡೆಸುವವರ ಸಂಖ್ಯೆ ಕಳವಾಗಿದೆ. ಹಾಗೆಂದು ಸಾಂಪ್ರದಾಯಿಕ ವಿವಾಹ ಪದ್ಧತಿಯನ್ನು ಬೆಂಬಲಿಸೋಣವೆಂದರೆ ಕುಲ, ಗೋತ್ರ, ಅಂತಸ್ತು, ಐಶ್ವರ್ಯ, ವರದಕ್ಷಿಣೆಯು ಅಡ್ಡಿಯಾಗಿದೆ. ಸಮಸ್ಯೆ ಸಮಸ್ಯೆಯಾಗಿಯೇ ಉಳಿಯುತ್ತದೆ. ನಾನು ವಿವಾಹಿತ, 26 ವರ್ಷಗಳ ಹಿಂದೆ ಮದುವೆಯಾದೆ, 25 ವರ್ಷದ ಮಗನಿದ್ದಾನೆ, ಜೊತೆಯಲ್ಲೇ ಇದ್ದಾನೆ. ಇಲ್ಲಿಯ ವಿವಾಹಗಳೆಲ್ಲ ಪ್ರೇಮ ವಿವಾಹಗಳೇ, ಹುಡುಗ ಹುಡುಗಿಯರು ತಮ್ಮ ಸಂಗಾತಿಯನ್ನು ಹುಡುಕಿಕೊಳ್ಳುತ್ತಾರೆ. ಆದರೆ ತಾಯ್ತಂದೆಯರನ್ನು ನೋಡಿಕೊಳ್ಳುತ್ತಾರೆ. ವಿವಾಹಗಳು ಒಂದಿಷ್ಟು ಗಟ್ಟಿಯಾಗಿವೆ."(6) ವಿವಾಹ ಪದ್ಧತಿ ಮತ್ತು ದಾಂಪತ್ಯ ಜೀವನ ಸೋಲಿಗ ಬುಡಕಟ್ಟಿನ ಜನಾಂಗದ ಅರಿವನ್ನು ತರುತ್ತದೆ. ನಾಗರೀಕ ಸಮಾಜಕ್ಕಿಂತ ಸೋಲಿಗರು ಕೂಡ ವೈಚಾರಿಕ ಪ್ರಜ್ಞೆಯನ್ನು ಹೊಂದಿದ್ದಾರೆ. ಅವರಲ್ಲಿಯೂ ಕೂಡ ಹುಡುಗ ಮತ್ತು ಹುಡುಗಿಗೆ ಮದುವೆಯನ್ನು ಮಾಡಿಕೊಳ್ಳಲು ಸಂಪೂರ್ಣವಾದ ಸ್ವಾತಂತ್ರ್ಯವಿದ್ದು ಪರಸ್ಪರ ಪ್ರೇಮಿಸಿ ವಿವಾಹವಾಗುವ ಪದ್ಧತಿಯಿದೆ. ಯಾವುದೇ ವರದಕ್ಷಿಣೆಯ ಸಮಸ್ಯೆಯು ಇಲ್ಲ. ಆದರೆ ಹುಡುಗ ತನ್ನ ಸಂಸಾರದ ಜವಾಬ್ದಾರಿಯ ಅರಿವನ್ನು ಪಡೆಯಲಿ ಎಂದು ಮದುವೆಯಾದ ನಂತರ ಪ್ರತ್ಯೇಕವಾಗಿ ಜೀವನ ನಡೆಸಬೇಕಾಗುತ್ತದೆ. ಮದುವೆಯ ನಂತರ ಏನಾದರೂ ಸಮಸ್ಯೆಗಳು ಕಂಡುಬಂದರೆ ಪಂಚಾಯಿತಿಯ ಮೂಲಕ ಬಗೆಹರಿಸಿಕೊಳ್ಳುತ್ತಾರೆ. ಅವಿದ್ಯಾವಂತ ಅಥವಾ ಸೀಮಿತ ವಿದ್ಯಾಭ್ಯಾಸ ಪಡೆಯದೆ ಇರುವ ಜನ ಸಮುದಾಯಗಳಲ್ಲಿ ದಾಂಪತ್ಯ ಬದುಕಿನಲ್ಲಿ ಪ್ರೀತಿಯ ಸಂಬಂಧಗಳ ಆದರ್ಶಗಳು ಕಾಣುತ್ತಿದ್ದೇವೆ.

ಇತಿಹಾಸ ಪುಟಗಳನ್ನು ತಿರುವಿದಾಗ ದಿಗ್ವಿಜಯಗಳ ಮತ್ತು ಸೋಲಿನ ಚಕ್ರಾಧಿಪತ್ಯಗಳ ಪುಟಗಳು ಒಂದೊಂದೇ ಕಣ್ಮುಂದೆ ಬಂದು ನಿಲ್ಲುತ್ತವೆ. ಯಾವುದೇ ಹೊಸ ಚಕ್ರಾಧಿಪತ್ಯ ಸ್ಥಾಪನೆ ಯಾಗಬೇಕಾದರೂ ಆ ನೆಲದಲ್ಲಿ ನೆತ್ತರು ಹರಿದು ಹೆಪ್ಪುಗಟ್ಟಿರಬೇಕು. ಹೆಪ್ಪುಗಟ್ಟಿದ ರಕ್ತದಲ್ಲಿ ಶಕ್ತಿಯುತ ಸಾಮ್ರಾಜ್ಯ ಸ್ಥಾಪನೆಯಾಗಬೇಕಿತ್ತು. ಈ ಕಾಲದ ಬದಲಾವಣೆಯು ಚಕ್ರಾಧಿಪತ್ಯಗಳ ಬದಲಾಗಿ, ಪ್ರಜಾತಂತ್ರವನ್ನು ತಂದಿದೆ. ವಿಶ್ವದ ಶಾಂತಿಗಾಗಿ ವಿಶ್ವಸಂಸ್ಥೆಯು ಇದೆ. ಆದರೆ ಶಾಂತಿ ಅನ್ನುವುದು ತನ್ನ

ತತೆಯನ್ನು ಕಳೆದುಕೊಂಡುಬಿಟ್ಟಿದೆ. ಹಣ, ಐಶ್ವರ್ಯ, ಖನಿಜ ಸಂಪನ್ಮೂಲಗಳು ಎಲ್ಲಿ ಹೇರಳವಾಗಿ ತ್ತದೆಯೋ ಅಲ್ಲಿ ಶಾಂತಿ, ಧರ್ಮ(ನ್ಯಾಯ) ನೆಲೆಸಲು ಸಾಧ್ಯವಿಲ್ಲ. ವ್ಯಾಪಾರಕ್ಕೆ ಬಂದಂತಹ ಜನ ಲ ತಮ್ಮ ವಿಕ್ರಿಯಗಳನ್ನು ನಡೆಸುವುದಿಲ್ಲ ಬದಲಾಗಿ ಇಡೀ ಮಾರುಕಟ್ಟೆಯ ವ್ಯವಸ್ಥೆಯನ್ನೇ ತನ್ನ ೀಟಿಯಲ್ಲಿ ಇಟ್ಟುಕೊಳ್ಳಲು ಬಯಸುತ್ತವೆ. ಅಮೆರಿಕ ದೇಶವು ಜಗತ್ತಿನ ಪ್ರಬಲ ಶಕ್ತಿಯುತ ್ರವಾಗಿದ್ದು ವಿಶ್ವದ ಇತರೆ ಯಾವ ಇರುವ ರಾಷ್ಟ್ರಗಳಲ್ಲಿ ಖನಿಜ ಸಂಪತ್ತುಗಳು ಇವೆಯೋ ಅಲ್ಲಿ ಯೂ ಯಾವ ರಾಷ್ಟ್ರವನ್ನು ನೆಮ್ಮದಿಯಾಗಿ ಉಸಿರಾಡಲು ಬದುಕಲು ಬಿಡುತ್ತಿಲ್ಲ. ಸಂಪನ್ಮೂಲವಿರುವ ್ರದಲ್ಲಿ ತನಗೆ ಸಹಾಯಹಸ್ತ ನೀಡಬಲ್ಲ ಅಥವಾ ತನ್ನ ಗುಲಾಮನನ್ನೇ ಅಲ್ಲಿನ ಸರ್ವಾಧಿಕಾರಿಯಾಗಿ ುಸುತ್ತದೆ. ಆ ಸರ್ವಾಧಿಕಾರಿಯಿಂದ ಅಮೆರಿಕಕ್ಕೆ ಬೇಕಾಗಿರುವಂತಹ ಸಂಪತ್ತನ್ನು ರವಾನಿಸುತ್ತದೆ. ಯೇ ತನಗೇ ಗುಲಾಮನಾಗದ ರಾಷ್ಟ್ರವನ್ನು ಮತ್ತೊಂದು ರಾಷ್ಟ್ರದ ಮೂಲಕ ವ್ಯಾಜ್ಯವನ್ನು ಟುಮಾಡುತ್ತದೆ. ನಂತರ ಎರಡೂ ರಾಷ್ಟ್ರಗಳ ರಾಯಭಾರಿಯಾಗಿ ತನ್ನ ಪಾತ್ರವನ್ನು ಪರಿಚಯಿಸಿ ನಂತೆ ಆ ರಾಷ್ಟ್ರದಲ್ಲಿ ಹೊಕ್ಕುತ್ತದೆ. "ಫ್ಯೂಜಿಮೊರಿ ಮತ್ತು ಮಾಂಟೆಸಿನೋರ ಸರ್ವಾಧಿಕಾರದಿಂದ ಗಡೆ ಪಡೆಯಲು ಪೆರುವಿನ ಜನ ಬಹಳಷ್ಟು ಹೋರಾಡಿದ್ದಾರೆ. ಪೆರುವಿಗರು ದಿಟ್ಟವಾದ ತಂತ್ರವನ್ನು ಪಡೆಯಲು ಇಂದಿಗೂ ಹೋರಾಡುತ್ತಿದ್ದಾರೆ. ಅಮೆರಿಕ ಸದಾಕಾಲಕ್ಕೂ ಬಡ ದೇಶಗಳ ಕೀಯದಲ್ಲಿ ತಲೆ ಹಾಕಿ ತನ್ನ ಲಾಭಕೋರತನವನ್ನು ಮೆರೆದಿವೆ."(7) ಬಡ ದೇಶಗಳನ್ನು ಕಬಳಿಸಲು ್ನರ ಹೂಡುವ ಅಮೆರಿಕಕ್ಕೆ ಸಮಯ ಸಾಧಕ ತನದ ಅರಿವು ಬಹಳ ಚೆನ್ನಾಗಿದೆ. ವಿಶ್ವದಲ್ಲಿರುವ ೊಬ್ಬ ಮನುಷ್ಯನಿಗೂ ದೇವರು ಸ್ವಾತಂತ್ರ್ಯವನ್ನು ನೀಡಿದ್ದಾನೆ. ಆ ಸ್ವಾತಂತ್ರ್ಯವನ್ನು ಹತ್ತಿಕ್ಕುವವರು ರೇ ಆಗಿರಲಿ ಎಷ್ಟೇ ಬಲಿಷ್ಠರಾಗಿರಲಿ ನಾವು ಸಹಿಸುವುದಿಲ್ಲ ಎನ್ನುವ ಅಮೆರಿಕ ಸಾವಿರಾರು ಜನರ ಾಟವನ್ನು ನಿಲ್ಲಿಸಿದೆ ಲಕ್ಷಾಂತರ ಜನರ ಸ್ವಾತಂತ್ರ್ಯವನ್ನು ಕಸಿದುಕೊಂಡಿದೆ. ಪೆಟ್ರೋಲಿಯಂನ ಗಳಿರುವ ಇರಾಕ್, ಇರಾನ್‌ಗಳನ್ನು ತನ್ನ ವಶಕ್ಕೆ ಪಡೆದುಕೊಂಡಿತು. ಆಫ್ಘಾನಿಸ್ತಾನಕ್ಕೆ ಪ್ರಜಾತಂತ್ರ ರವನ್ನು ರಚನೆಮಾಡಲು ಲಕ್ಷಾಂತರ ಜನರನ್ನು ಕಗ್ಗೊಲೆ ಮಾಡಿತು. ಭಾರತದಲ್ಲಿ ನಡೆಯುವ ೋತ್ಪಾದನೆಯ ಮೂಲ ಬೇರುಗಳನ್ನು ಕಿತ್ತೊಗೆಯಬೇಕು ಅದಕ್ಕಾಗಿ ನಮ್ಮ ನೆರವು ಯಾವಾಗಲೂ ಇರುತ್ತದೆ. ಪಾಕಿಸ್ತಾನ ಭಯೋತ್ಪಾದನೆಯ ಚಟುವಟಿಕೆ ತಾಣಗಳನ್ನು ನಾಶಮಾಡಬೇಕು, ೋತ್ಪಾಧಕರನ್ನು ಮಟ್ಟಹಾಕಬೇಕು ಎಂದು ಭಾರತಕ್ಕೆ ಅಭಯಹಸ್ತ ನೀಡುತ್ತಾ, ಪಾಕಿಸ್ತಾನಕ್ಕೆ ಬೇಕಾದ ುಧಗಳನ್ನು, ಸಾವಿರಾರು ಮಿಲಿಯನ್ ಹಣವನ್ನು ನೀಡಿತು. 'ಅಮೆರಿಕ ಎರಡು ತಲೆಯ ಹಾವು' ಆಗಿ ಕಾರ್ಯವನ್ನು ನಿರ್ವಹಿಸುತ್ತಿದೆ. ಅಮೆರಿಕಾ ಹಸ್ತಕ್ಷೇಪ ಮಾಡಿರುವ ಯಾವುದೇ ದೇಶವಿರಲಿ ಅದು

ಷ್ಟ ರಾಷ್ಟ್ರದ ಜನರಿಗೆ ಸಶಕ್ತವಾದ ಆಡಳಿತ, ಮೂಲ ಸೌಕರ್ಯ, ಭದ್ರತೆ ಮತ್ತು ಸರ್ವರಿಗೂ ಸರ್ವಸುಖ ಡಲು ಸಾಧ್ಯವೇ? ಎಂದು ಪ್ರಶ್ನೆಯನ್ನು ಹಾಕಿಕೊಂಡಾಗ ಉತ್ತರ ಸಿಗುವುದು ಇರಾಕ್, ಇರಾನ್, ಘಾನಿಸ್ತಾನ, ಪಾಕಿಸ್ತಾನ, ಕ್ಯೂಬಾ ಇನ್ನಿತರ ಬಡದೇಶಗಳೊಡನೆ ಅಮೆರಿಕದ ಸಂಬಂಧ ಮತ್ತು ರ್ಯಚಟುವಟಿಕೆ ಗಮನಿಸಬೇಕು. ಅವರ ಆತಿಥ್ಯವನ್ನು ಬಯಸಿದ ರಾಷ್ಟ್ರಗಳು ದಾರಿದ್ರ್ಯದಿಂದ ಳುತ್ತಿವೆ. ಪಾಶ್ಚಿಮಾತ್ಯ ದೇಶಗಳ ಜೊತೆ ಸ್ನೇಹ ಮಾಡುವುದಕ್ಕಿಂತ ವೈರತ್ವವನ್ನು ಕಟ್ಟಿಕೊಳ್ಳುವುದೇ ಚಿತ ಅನಿಸುತ್ತದೆ. ಏಕೆಂದರೆ ಸ್ನೇಹ ಮತ್ತು ವೈರ ಎರಡರಿಂದಲೂ ಯಾವುದೇ ಯೋಜನವಾಗುವುದಿಲ್ಲ.

ಯಾವುದೇ ಪ್ರಾಂತ್ಯವಾಗಲಿ ಅಥವಾ ರಾಷ್ಟ್ರವಾಗಲಿ ಜನಸಾಮಾನ್ಯನಿಗೆ ಮೂಲಭೂತ ಕರ್ಯಗಳು ದೊರೆಯದೇ ಇದ್ದಾಗ ಮುಷ್ಕರ, ಪ್ರತಿಭಟನೆಗಳು ಪ್ರಾರಂಭವಾಗುತ್ತದೆ. ಆಗಲು ಸರ್ಕಾರ ತ್ತಿತ್ತುಕೊಳ್ಳಲಿಲ್ಲ ಎಂದರೆ ಹಿಂಸೆಗಳು ಪ್ರಾರಂಭವಾಗುತ್ತವೆ. ಪೆರುವಿನ ದೇಶದಲ್ಲೂ ಕೂಡ ಅಮೆರಿಕ ಬಲಿತ ಸರ್ಕಾರದಿಂದ ಇಡೀ ದೇಶ ಬಡತನದಲ್ಲಿ ನಲುಗಿ ಹೋಯಿತು. ದೇಶದ ಆರ್ಥಿಕ ಸ್ಥಿತಿಯನ್ನು ರಗಿನಿಂದ ಬಂದ ಉದ್ಯಮಿಗಳ ಪೆರುವಿನ ಸಂಪನ್ಮೂಲವನ್ನು ಕೊಳ್ಳೆಹೊಡೆಯಿತು. "ಮಿಲಿಟರಿ ಳಿತದಲ್ಲಿ ಸಿಲುಕಿದ್ದ ಪೆರು, 1963 ರಲ್ಲಿ ಪ್ರಜಾತಾಂತ್ರಿಕವಾಗಿ ಅಧ್ಯಕ್ಷನನ್ನು ಪಡೆಯಿತು ಆದರೆ 1969 ಮಿಲಿಟರಿ ಅಧಿಕಾರವನ್ನು ಕಿತ್ತುಕೊಂಡಿತು. ವಿದೇಶಿ ಕಂಪನಿಗಳು ಧಾರಾಳವಾಗಿ ಬಂದು ಟಿಮಾಡಲು ಬಾಗಿಲು ತೆರೆಯಿತು."(8) ಪ್ರಜಾತಾಂತ್ರಿಕ ಆಡಳಿತದಿಂದ ಮಿಲಿಟರಿ ಆಡಳಿತಗಳ ುವಿನ ಬದಲಾವಣೆಗಳು ಮತ್ತು ವಿದೇಶಿ ಕಂಪನಿಗಳ ಕೊಳ್ಳೇ ಮತ್ತೊಂದು ಇತಿಹಾಸಕ್ಕೆ ಣವಾಗುತ್ತದೆ. ಕ್ರಾಂತಿಯ ಜ್ವಾಲೆಯ ಕಿಡಿ ಪೆರುವಿನ ತುಂಬಾ ಪಸರಿಸಿತು ಹೋಯಿತು. ಕಮ್ಯೂನಿಸ್ಟ್, ರ್ಕ್ಸ ಇವರುಗಳ ತತ್ವಗಳಿಂದ ಪ್ರಭಾವಿತರಾದ ಅನೇಕರು ಕ್ರಾಂತಿಕಾರಿಗಳಾಗಿ ಗುರುತಿಸಿಕೊಂಡಿದ್ದಾರೆ. ಯೂನಿಸ್ಟ್ ಮತ್ತು ಮಾರ್ಕ್ಸ್‌ವಾದಿಗಳು ಹುಟ್ಟಿಕೊಂಡಿದ್ದು ಅನ್ಯಾಯದ ವಿರುದ್ಧ ಹೋರಾಡಲು. ಹಕ್ಕನ್ನು ದುಕೊಂಡಿರುವ ಸಾಮಾನ್ಯನಿಗೆ ಅವನ ಹಕ್ಕುಗಳನ್ನು ಕೊಡಿಸಲು, ಸಮಾಜದಲ್ಲಿ ಸರ್ವರಿಗೂ ಪಾಲು ಎಂಬ ಧ್ಯೇಯದ ಹುಟ್ಟುಕೂಡ ಇವುಗಳ ಕೊಡುಗೆಯೇ ಆಗಿದೆ. ವಿಪರ್ಯಾಸ ಎಂದರೆ ವ ಒಂದು ಧ್ಯೇಯ, ತತ್ವಗಳೊಡನೆ ಮಾರ್ಕ್ಸ್‌ವಾದ ಮತ್ತು ಕಮ್ಯುನಿಸ್ಟ್‌ಗಳು ಹುಟ್ಟಿಕೊಂಡವು ುಗಳನ್ನು ಗಾಳಿಗೆ ತೂರಲಾಯಿತು. ನಮ್ಮ ದೇಶದಲ್ಲಿ ಕೂಡ ಪಶ್ಚಿಮ ಬಂಗಾಳ, ಆಂಧ್ರಪ್ರದೇಶ, ಬಿಹಾರ

ತರ ರಾಜ್ಯಗಳಲ್ಲಿ ಕ್ರಾಂತಿಯ ಕಹಳೆಯನ್ನು ಕೂಗಿಕೊಂಡು ಹುಟ್ಟಿದ ಸಂಘಟನೆಗಳು ರಕ್ತದ ಓಕುಳಿಯ ವಾಡುವ ಕ್ರೀಡೆಯಾಗಿ ಮಾರ್ಪಾಡಾಗಿದೆ. ಇವರ ಹೋರಾಟ ಸರ್ಕಾರದ, ಆಡಳಿತ ನಡೆಸುವವರ ುದ್ಧವಾಗಿ ನಡೆಯುತ್ತಿದೆ. ಆದರೆ ತನ್ನ ಸಂಘಟನೆಯ ಬಲವರ್ಧನೆಗಾಗಿ ಸಾಮಾನ್ಯ ಪ್ರಜೆಗಳನ್ನು ುಯ ಪೂರಕವಾಗಿ ಎಳೆದೊಯ್ಯುತ್ತವೆ. ಸಾಮಾನ್ಯ ಪ್ರಜೆಗಳ ರಕ್ಷಣೆಯೇನು? ಆಡಳಿತ ನಡೆಸುವ ುತ್ರಿಗಳಿಗೆ, ದೊಡ್ಡ ಅಧಿಕಾರಿಗಳಿಗೂ ಕೂಡ ಇಲ್ಲಿ ರಕ್ಷಣೆ ಇಲ್ಲದಂತಾಗಿದೆ. ಸರ್ಕಾರ ಮತ್ತು ನಕ್ಸಲ್ ುವೆ ಇಂದಿಗೂ ಕೂಡ ಸಂಧಾನಗಳು ನಡೆಯುತ್ತಲೇ ಇವೆ. ಆದರೆ ಯಾವುದೂ ಕೂಡ ಪ್ರದವಾಗುತ್ತಿಲ್ಲ. "ಆರು ವರ್ಷದ ಸಣ್ಣ ಮಗುವನ್ನು ತಮ್ಮ ಸಂಘಟನೆಗೆ ಎಳೆದುಕೊಂಡು, ನೇಮಕಾತಿ ಡಿಕೊಳ್ಳುವ ಈ ಕ್ರಾಂತಿಕಾರಿಗಳು ಪೆರುವಿನ ಸಮಾಜದ ಎಲ್ಲ ಸ್ಥಳಗಳಲ್ಲೂ ಹರಡಿಹೋಗಿ, ಪೆರುವಿನ ಮಾನ್ಯ ಜನರ ದುಸ್ವಪ್ನವಾಗಿದ್ದರು."(9) ಇಂತಹ ನಕ್ಸಲ ಚಟುವಟಿಕೆಗಳು ಹರಡಿರುವ ಪ್ರದೇಶಗಳಲ್ಲಿ ಸಾಮಾನ್ಯನ ಜೀವನ ಕೂಡ ದುಸ್ತರವಾಗುತ್ತದೆ. ಒಂದು ಕಡೆ ಸರ್ಕಾರದ ಅನುಮಾನದ ಕಣ್ಣೋಗಳು ಸ್ನೊಂದು ಕಡೆ ನಕ್ಸಲ್ ಸಂಘಟನೆಗಳ ಹಾವಳಿ, ಲೂಟಿ ಇವುಗಳ ಮಧ್ಯೆ ಬದುಕುವಂತಹ ಸ್ಥಿತಿ ವಾಗಲು ಭಯಂಕರವಾದದು. ನಕ್ಸಲ್ ಚಟುವಟಿಕೆಗಳು ಇರುವ ಪ್ರಾಂತ್ಯಗಳು ಮೊದಲೇ ಸರ್ಕಾರದ ರ್ಕ್ಷ್ಯಕ್ಕೆ ಗುರಿಯಾಗಿರುವುದು ನಂತರ ನಕ್ಸಲರ ನ್ಯಾಯ ಒದಗಿಸುವ ಹೋರಾಟಗಳು ಆ ಪ್ರದೇಶದ ಮಾನ್ಯ ಪ್ರಜೆಯ ಪರಿಸ್ಥಿತಿ ಕೂಡ ಹೀನ ಸ್ಥಿತಿಗೆ ತಲುಪಿದೆ. ಸರ್ಕಾರದ ಆಡಳಿತ ವಿರುದ್ಧ ಂಭವಾದ ಕ್ರಾಂತಿಗಳು ನಕ್ಸಲರ ರೂಪ ಪಡೆಯುತ್ತಿದ್ದಂತೆ ಜನಸಾಮಾನ್ಯ ನಲುಗಿ ಹೋದ. ನಲುಗಿ ೀದ ಜನಸಾಮಾನ್ಯನನ್ನು ಸರ್ಕಾರದಿಂದ ಮತ್ತು ನಕ್ಸಲರಿಂದ ಕಾಪಾಡಲು, ಸರ್ಕಾರ ಮತ್ತು ನಕ್ಸಲರ ುದ್ಧ ಅನೇಕ ಸಂಘಟನೆಗಳು ಅಹಿಂಸಾತ್ಮಕವಾದ ಹೋರಾಟಗಳನ್ನು ಪ್ರಾರಂಭಿಸಿವೆ. ಎಲ್ಲಿ ಸರ್ಕಾರದ ೀಜನೆಗಳು ಜನಸಾಮಾನ್ಯನವರೆಗೆ ತಲುಪಿಲ್ಲವೋ ಅಂತಹ ಕಡೆ ಯೋಜನೆಗಳನ್ನು ತಲುಪಿಸುವಂತಹ ್ಗಳನ್ನು ನಡೆಸುತ್ತಿವೆ ಇಂತಹ ಒಂದು ಹೋರಾಟಗಳಲ್ಲಿ ಮಹಿಳೆಯರು ಕೂಡ ಸಕ್ರಿಯವಾಗಿ ಡ್ಗೊಳ್ಳುತ್ತಲಿದ್ದಾರೆ. ಪೆರುವಿನಲ್ಲಿ ರಚನೆಯಾದ ಪ್ಯೂಜಿಮೊರಿಯ ಅಧ್ಯಕ್ಷತೆಯ ಅಮೆರಿಕ ಸರ್ಕಾರದಿಂದ ತನ ಇಡೀ ರಾಷ್ಟ್ರವನ್ನು ಆವರಿಸಿಕೊಂಡಿತು. ಇದರ ತೀವ್ರತೆ ಎಷ್ಟು ಎಂದರೆ ಒಂದು ಮಗುವಿಗೆ ು ಬಟ್ಟಲು ಹಾಲು ಸಿಗುವುದು ಕೂಡ ದುಸ್ತರ ಇಂತಹ ಸಂದರ್ಭದಲ್ಲಿ ಸಂಘಟನಾ ಮಹಿಳೆಯರು ೀಕ ಯೋಜನೆಗಳನ್ನು ಕೈಗೊಂಡರು. "ಎಲೆನಾಳ ಬದುಕು ಪೆರುವಿನ ಬಡ ಮಹಿಳೆಯರ ೀರಾಟವನ್ನು ಕುರಿತಾಗಿದೆ. ಮತ್ತಷ್ಟು ಬಡತನಕ್ಕೆ ದೂಡಿದ ಫ್ಯೂಜಿಮೊರಿ ಕಾಲದಲ್ಲಿ ಬದುಕುಳಿಯಲು ನ ಹೊಟ್ಟೆಗಳಿಗೆ ಊಟ ಒದಗಿಸಲು, ಮಹಿಳೆಯರು ಜೊತೆಗೂಡಿ 'ಹಾಲಿನ ಬಟ್ಟಲು' ಮತ್ತು

ುದಾಯ ಅಡಿಗೆ ಮನೆ'ಯಂತಹ ಯೋಜನೆಗಳನ್ನು ಹಾಕಿಕೊಂಡರು."(10) ಭಾರತದ ಸ್ವಾತಂತ್ರ್ಯ ೇರಾಟದ ಸಂದರ್ಭದಲ್ಲಿ ಅನೇಕ ಮಹಿಳೆಯರು ಸಂಘಟನೆಗಳಲ್ಲಿ ತೊಡಗಿ ಹೋರಾಟವನ್ನು ಸಿದರು. ಕೆಲವು ಕಡೆ ಸಂಘಟನೆಗಳಲ್ಲಿ ಇಲ್ಲದೆ ಹೋರಾಟ ನಡೆಸಿದರು. ಸ್ವಾತಂತ್ರ್ಯ ಪೂರ್ವ ಮತ್ತು ಂತ್ರ್ಯ ನಂತರ ಭಾರತದಲ್ಲಿನ ಮಹಿಳೆಯರು ಮತ್ತು ಮಕ್ಕಳ ಆರೈಕೆಯನ್ನು ಮಾಡಿ ಇಂದಿಗೂ ದರ್‌ಥೇರೆಸ ಹೆಸರು ಚಿರವಾಗಿ ಉಳಿದಿದೆ. ಮಹಿಳೆ ಕೂಡ ಎಂತಹ ಸಂದಿಗ್ಧ ಸ್ಥಿತಿಯನ್ನು ಕೂಡ ಾಯಿಸಬಲ್ಲಳು ಎಂಬುದು ಎಲ್ಲರಿಗೂ ತಿಳಿದಿರುವಂತಹದು. ನಕ್ಸಲ್ ಚಟುವಟಿಕೆಗಳಲ್ಲಿ ನ್ಯಾಯಕ್ಕಾಗಿ ೇರಾಡಿದವರು, ನ್ಯಾಯಯುತವಾಗಿ ಹೋರಾಡಿ ಪೋಲಿಸರಿಂದ ಅತ್ಯಾಚಾರಕ್ಕೆ ಒಳಗಾಗಿ ಬಲಿಯಾದ ಹಾಶ್ವೇತಾ ದೇವಿಯವರ 'ದೋಪ್ಧಿ' ಪಾತ್ರದಂತಹ ಮಹಿಳೆಯರು ಲೆಕ್ಕವಿಲ್ಲದಷ್ಟು ಪೆರುವಿನಲ್ಲೂ ಕೂಡ ನಾ ಎಂಬ ಮಹಿಳೆ ದೇಶದ ಮಹಿಳೆಯರ ಮತ್ತು ಮಕ್ಕಳ ಸಬಲೀಕರಣಕ್ಕಾಗಿ ನಕ್ಸಲರ ಬೆದರಿಕೆಯನ್ನು ಗಣಿಸಿ ತನ್ನ ಉಸಿರಿನ ಕೊನೆಯವರೆಗೂ ಹೋರಾಡಿದಳು. ಸಮಾಜದ ಸಬಲೀಕರಣದಿಂದ ನಕ್ಸಲ್ ಘಟನೆಯ ಕ್ರಾಂತಿಯಲ್ಲಿ ತೊಡಗುವವರ ಸಂಖ್ಯೆ ಇಳಿಮುಖವಾಗುವ ಭಯ ಆವರಿಸಿಕೊಂಡಿತು. ಲೆನಾ ಹೇಳಿದ್ದಳು 'ಶೈನಿಂಗ್ ಪಾತ್ ಗೊರಿಲ್ಲಾಗಳ ವಿಧಾನಗಳು ಸರಿ ಕಂಡುಬರದಿದ್ದರೂ, ನಾನು ೇಕ ವರ್ಷಗಳ ಕಾಲ ಅವರನ್ನು ಸಾರ್ವಜನಿಕವಾಗಿ ಟೀಕಿಸಲಿಲ್ಲ. ಕಾರಣ ಅವರು ಸಮಾಜದ ಸ್ಥಿತಿ ಾರಿಸುವತ್ತ ನಿಷ್ಠರಾಗಿ ಹೋರಾಡುತ್ತಿದ್ದಾರೆ ಎಂದುಕೊಂಡಿದ್ದೆ. ಆದರೆ ಇವರು ನನ್ನ ೋದ್ಯೋಗಿಗಳನ್ನೇ ಕೊಲ್ಲಲು ಆರಂಭಿಸಿದಾಗ, ಅವರ ಸಮಾಜ ಘಾತಕ ಕೆಲಸದ ಬಗ್ಗೆ ್ಮನಿರುವುದು ಸಾಧ್ಯವಿರಲಿಲ್ಲ', 'ಸುಮ್ಮನಿರದ' ಈ ಹೋರಾಟಗಾರ್ತಿಯನ್ನು ಗುಂಡಿಟ್ಟು ್ಮನಾಗಿಸಿದರು"(11) ಒಳ್ಳೆಯ ವ್ಯಕ್ತಿಗಳು, ಹೋರಾಟಗಾರರು ನಿಸ್ವಾರ್ಥವಾಗಿ ಸಮಾಜಕ್ಕೆ ಡುಗೆಯನ್ನು ನೀಡುವುದರಿಂದ ಅವರ ಹೋರಾಟಗಳು, ಯೋಜನೆಗಳು ಸಫಲತೆಯನ್ನು ಕಾಣುತ್ತವೆ. ಸಫಲತೆಗಳನ್ನು ಸಮಾಜದ ಉದ್ಧಾರವನ್ನು ಸಮಾಜಘಾತುಕ ವ್ಯಕ್ತಿಗಳು, ಸ್ವಾರ್ಥಿಗಳು ಎಂದೂ ಕೂಡ ಿಕೊಳ್ಳುವುದಿಲ್ಲ. ಎಲೆನಾಳ ಹೋರಾಟದ ಸಮಾಜ ಸುಧಾರಣೆಯ, ಹಸಿದವರಿಗೆ ಅನ್ನ ನೀಡುವುದನ್ನು ನ 'ಶೈನಿಂಗ್ ಪಾತ್' ಸಹಿಸಿಕೊಳ್ಳಲಿಲ್ಲ', ಇಂತಹ ಘಟನೆಗಳು ಕೇವಲ ಪೆರುವಿಗೆ ಮಾತ್ರ ುತವಾಗಿಲ್ಲ ಎಲ್ಲ ದೇಶಗಳಲ್ಲೂ ಸರ್ವೇ ಸಾಮಾನ್ಯ ಆಗಿಬಿಟ್ಟಿದೆ. ಸ್ವಾತಂತ್ರ್ಯಕ್ಕೆ ಹೋರಾಟದಲ್ಲಿ ತನ್ನ ನವನ್ನೇ ಮುಡುಪಾಗಿಟ್ಟ ಗಾಂಧೀಜಿಯನ್ನು ಸಹ ನಮ್ಮ ದೇಶದಲ್ಲಿ ಗುಂಡಿಕ್ಕಿ ಕೊಲ್ಲಲಾಯಿತು. ಇಡೀ ವೇ ಗಾಂಧಿಯನ್ನು ಆರಾಧಿಸಿ ದೈವದ ಸ್ಥಾನದಲ್ಲಿ ಇರಿಸಿ ಅವರ ಜನ್ಮದಿನವನ್ನು ವಿಶ್ವ ಅಹಿಂಸಾ ವನ್ನಾಗಿ ಆಚರಿಸುತ್ತಿದ್ದಾರೆ. ಹೀಗೆ ಸಮಾಜದ ಸುಧಾರಣೆಯನ್ನು, ಸಮಾಜದಲ್ಲಿ ಶಾಂತಿಯನ್ನು

ುಸುವ ವ್ಯಕ್ತಿಗಳಿಂದ, ಭ್ರಷ್ಟಾಚಾರಿಗಳಿಗೆ, ದೇಶದ್ರೋಹಿಗಳಿಗೆ, ಸ್ವಾರ್ಥಿಗಳಿಗೆ ತಮ್ಮ ಬೇಳೆಯನ್ನು ುಸಿಕೊಳ್ಳಲು ಸಾಧ್ಯವಿಲ್ಲದ ಕಾರಣ ನಿಜವಾದ ಹೋರಾಟಗಾರರು ಬಲಿಯಾಗುತ್ತಾ, ಖೂನಿಗಳೂ ಕೋರರು ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿಕೊಳ್ಳುತ್ತಾರೆ.

ಆದಿಯಿಂದಲೂ ಮನುಷ್ಯ ಬೇಟೆಯಾಡುವುದನ್ನು ರೂಢಿಸಿಕೊಂಡು ಬಂದಿದ್ದಾನೆ. ವ್ಯತ್ಯಾಸವಿಷ್ಟೇ ಟೆಯಾಡುವುದು ಅವನಿಗೆ ಅನಿವಾರ್ಯವಾಗಿದ್ದು ಜೀವನ ಕ್ರಮದ ಅಂಗವಾಗಿತ್ತು. ನಾಗರಿಕ ಎನಿಸಿಕೊಂಡ ತರ ಪ್ರಾಣಿಗಳ ಬೇಟೆಯನ್ನು ತನ್ನ ವಿಲಾಸಿ ಜೀವನದ ಸಮಯ ಕಳೆಯುವುದಕ್ಕಾಗಿ, ತನ್ನ ಶೌರ್ಯವನ್ನು ರ್ಶಿಸುವುದಕ್ಕಾಗಿ ಮೀಸಲಿರಿಸಿದ. ಅನಾಗರಿಕನಿಂದ ನಾಗರಿಕನಾದ ಮೇಲೆ ಬೇಟೆಯಾಡುವ ಕ್ರಮ ಲಾವಣೆಯಾಯಿತು, ಪ್ರಾಣಿಗಳ ಬದಲಾಗಿ ಮನುಷ್ಯರನ್ನು ಬೇಟೆಯಾಡಲು ಪ್ರಾರಂಭಿಸಿದ. ಟೆಯೆನ್ನುವ ಹೆಸರಿಗೆ ಬದಲಾಗಿ ಯುದ್ಧ ಎಂಬ ಹೊಸ ಪದ ಬೇಟೆಯ ಸ್ಥಾನವನ್ನು ಅಲಂಕರಿಸಿತು. ತ್ರೆಯ ಪುಟಗಳನ್ನು ತಿರುವಿದಾಗ ಪ್ರಪಂಚದ ಪರಿಚಯವಾಗುವುದು ಒಬ್ಬ ರಾಜನ ದಿಗ್ವಿಜಯದ ಕ್ರಮಗಳ ಮೂಲಕ ಮತ್ತೊಬ್ಬ ರಾಜನ ಪತನವನ್ನು ಅಥವಾ ದಿಗ್ವಿಜಯವನ್ನು ಕಾಣುತ್ತೇವೆ. ಜಯಕ್ಕೆ ಸೀಮಿತವಾಗದೇ ಇನ್ನೂ ಮುಂದುವರೆದು ದಿಗ್ವಿಜಯ ಸಾಧಿಸಿದ ರಾಜನ ಧರ್ಮವನ್ನು, ರ ಹೊಂದಿದ ರಾಜ ಮತ್ತು ಅಲ್ಲಿನ ಪ್ರಜೆಗಳು, ಅಧಿಕಾರಿಗಳು ಸ್ವೀಕರಿಸಬೇಕು ಇಲ್ಲದಿದ್ದರೆ ಅವನ ಕುಳ, ದಂಡನೆಗೆ ಒಳಗಾಗಿ ಸಾಯುವುದು ಅಥವಾ ಗರ್ಭಗುಡಿಯಲ್ಲಿ ಸ್ಥಾಪಿತವಾಗಿರುವ ರ್ತಿಗಳನ್ನು ಭಗ್ನಗೊಳಿಸಿ, ತೆರವುಗೊಳಿಸಿ ತನ್ನ ಧರ್ಮದ ಅಥವಾ ತಾನು ನಂಬಿದ ದೇವರ ರ್ತಿಗಳನ್ನು ಪ್ರತಿಷ್ಠಾಪಿಸಿದ್ದು ಕಾಣುತ್ತೇವೆ. ಇದು ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿಯೂ ಕೂಡ ಮಾನ್ಯವಾಗಿ ಕಂಡುಬಂದಿದೆ. "ಕುಸ್ಕೋ'ದ ಸುಪ್ರಸಿದ್ಧ ಇನ್ಕಾಗಳ ಸೂರ್ಯದೇವಾಲಯದ ಮೇಲೆ, ಷ್ ಜನರು ಕಟ್ಟಿದ ಚರ್ಚೆ ನಿಂತಿದೆ."(12) ಈ ರೀತಿಯ ಘಟನೆಗಳು ಪೆರುವಿಗೆ ಮಾತ್ರ ಸೀಮಿತ ್ಲ. ಭಾರತದಲ್ಲಿ ಈ ರೀತಿಯ ಅನೇಕ ಉಪಕರಣಗಳು ಸಿಗುತ್ತವೆ. ವಿಜಯನಗರ ಸಾಮ್ರಾಜ್ಯದ ನತಿಯ ನಂತರ ಹಂಪೆಯ ಹಲವು ದೇವಸ್ಥಾನಗಳು ನಾಶವಾದವು. ಶೈವ, ವೈಷ್ಣವ ಪಂಥಗಳಿಂದ ರ್ತಿಗಳ ಬದಲಾವಣೆಯೂ ಆಯಿತು.

ನವಾಬರ ದಾಳಿಯಿಂದ ಅನೇಕ ಗುಡಿ-ಗೋಪುರಗಳು ಭಗ್ನಗೊಂಡವು. ಇದು ಒಂದು ಾಹರಣೆಯಷ್ಟೇ ಈ ರೀತಿಯ ನೂರಾರು-ಸಾವಿರಾರು ಉದಾಹರಣೆಗಳು ಭಾರತ ದೇಶದಲ್ಲಿ ತ್ತವೆ. ಕೆಲವು ವರ್ಷಗಳ ಹಿಂದೆ ಆಫ್ಘಾನಿಸ್ಥಾನದಲ್ಲಿ ದೊರೆತ ಬುದ್ಧನ ವಿಗ್ರಹ ನಾಶಮಾಡಿದ್ದು

ರಿಗೂ ತಿಳಿದಿರುವ ಸಂಗತಿಯೇ, ಇಂದಿಗೂ ಕೂಡ ಭಾರತ ದೇಶದಲ್ಲಿ ಈ ರೀತಿಯ ಕಲಹಗಳು ಯುತ್ತಲೇ ಇವೆ. ಭಾರತ ದೇಶದ ರಾಮಜನ್ಮ ಭೂಮಿ–ಬಾಬರಿ ಮಸೀದಿಯ ವಿವಾದವು ಜೀವಂತ ಾಹರಣೆಯಾಗಿದೆ. ಇನ್ನೂ ಕೂಡ ಉತ್ಖನನಗಳು ನಡೆಯುತ್ತವೆ. ದೇಶದಲ್ಲಿ ಅಶಾಂತಿಯ ಅಲೆಗಳು ುತ್ತಿದೆ.

ವೈಜ್ಞಾನಿಕವಾಗಿ, ವೈಚಾರಿಕವಾಗಿ ಜಗತ್ತು ಬೆಳವಣಿಗೆಯಾಗಿದೆ. ಅಂತರಿಕ್ಷ ಪ್ರವಾಸ, ಚಂದ್ರಗ್ರಹದ ಶೋಧನೆಗಳು ಒಂದು ಕಡೆ ನಡೆಯುತ್ತಿವೆ. ಮತ್ತೊಂದು ಕಡೆ ಧರ್ಮಗಳು ತಮ್ಮ–ತಮ್ಮ ಪ್ರಾಬಲ್ಯಕ್ಕೆ ಸಾಡುತ್ತಿವೆ. ಹೀಗೆ ಆದಿಯಿಂದ ಇಂದಿನವರೆಗೂ ಧರ್ಮಗಳ ಕಲಂಗಳು, ದೇವಸ್ಥಾನ, ಮಸೀದಿ, ರ್ಗಳನ್ನು ಭಗ್ನಗೊಳಿಸುವ ಕಾರ್ಯಗಳು ಪ್ರಪಂಚದಾದ್ಯಂತ ನಡೆಯುತ್ತಲೆ ಇವೆ.

ಪ್ರತಿಯೊಂದು ರಾಷ್ಟ್ರದಲ್ಲೂ ಸ್ವಾತಂತ್ರ್ಯ ದೇವಿಯ ಉತ್ಸವವನ್ನು ಆಚರಿಸಲಾಗುತ್ತದೆ. ಭಾರತ ಮ್ಮ) ದೇಶದಲ್ಲಿ ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನಾಚರಣೆ ಆಚರಿಸುವಂತೆ, ಅದರ ಜೊತೆಯಲ್ಲಿ ತರ ದೇಶಿಯ(ರಾಷ್ಟ್ರೀಯ) ಹಬ್ಬಗಳಿಂದ ಗಣರಾಜ್ಯೋತ್ಸವ, ಗಾಂಧಿಜಯಂತಿ ಇತ್ಯಾದಿ ನಿಜವಾಗಲು ಷ್ಟ್ರೀಯ ಹಬ್ಬಗಳನ್ನು ಪ್ರೀತಿಯಿಂದ, ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬಲಿಯಾದ ೇರಾಟಗಾರರನ್ನು ನೆನಪಿಸುತ್ತಾ, ಸ್ಮರಿಸುತ್ತಾ ಆಚರಿಸಿದ್ದು ತೀರ ವಿರಳ ರಾಜ್ಯಗಳ ರಾಜಧಾನಿಗಳಲ್ಲಿ ತ್ತು ದೇಶದ ರಾಜಧಾನಿಯಲ್ಲಿ ಮಿಲ್ಟ್ರಿಪಡೆಗಳ ಕವಾಯತು, ಶಾಲಾ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ, ಪ್ರದರ್ಶನ ಇಲ್ಲಿಗೆ ಮುಗಿಯಿತು ರಾಷ್ಟ್ರೀಯ ಹಬ್ಬದ ಆಚರಣೆ ನಮ್ಮ ದೇಶದ ಜನಸಂಖ್ಯೆ ನೂರ ತ್ತು ಕೋಟಿಯಷ್ಟು ಇದೆ. ಆದರೆ ರಾಷ್ಟ್ರೀಯ ಹಬ್ಬಗಳಲ್ಲಿ ಭಾಗವಹಿಸುವವರ ಸಂಖ್ಯೆ ಎಷ್ಟು? ಕೇವಲ ಾ ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ಬೆರಳೆಣಿಕೆಯಷ್ಟು ಅಧಿಕಾರಿವರ್ಗ ದೇಶದ ಸಾಮಾನ್ಯ ಪ್ರಜೆಯ ್ರ ಏನೇನು ಇಲ್ಲ. ಸರ್ಕಾರಿ ನೌಕರರು ರಜೆಯ ಸಂಪೂರ್ಣ ಉಪಯೋಗಕ್ಕಾಗಿ ಕುಟುಂಬ ಸಮೇತ ವಾ ಸಹೋದ್ಯೋಗಿ ಮಿತ್ರರ ಜೊತೆ ಪಿಕ್‌ನಿಕ್. ಇದು ನಮ್ಮ ದೇಶದ ಸ್ವಾತಂತ್ರ್ಯ ದಿನಾಚರಣೆಯ, ರಾಜ್ಯೋತ್ಸವದ ಮತ್ತು ಗಾಂಧಿಜಯಂತಿಯ ದಿನದ ವಿಶೇಷತೆಗಳು. ಸ್ವಾತಂತ್ರ್ಯ ಪಡೆಯುವ ಮುಂಚಿನ ತಕ್ಕೂ, ಸ್ವಾತಂತ್ರ್ಯೋತ್ತರ ಭಾರತಕ್ಕೂ ಅಜಗಜಾಂತರ ವ್ಯತ್ಯಾಸಗಳನ್ನು ಕಾಣಬಹುದು. ಸ್ವಾತಂತ್ರ್ಯ ರ್ವದಲ್ಲಿ ಭಾರತೀಯ ಪ್ರತಿಯೊಬ್ಬ ಪ್ರಜೆ ಕೂಡ ಉಜ್ವಲ ಭವಿಷ್ಯದ ಕನಸುಗಳನ್ನು ಕಟ್ಟಿಕೊಂಡಿದ್ದ ್ತ ಆ ಕನಸುಗಳು ನನಸಾಗುತ್ತವೆ ಎಂಬ ಭರವಸೆ ಕೂಡ ದೃಢವಾಗಿತ್ತು. ಆದರೆ ವಾಸ್ತವ ಚಿತ್ರಣವೇ ಯಾಗಿದೆ. ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ನೀಡುವ ಮೊದಲು ಜನಾಂಗಿಕವಾಗಿ, ಧಾರ್ಮಿಕವಾಗಿ

ದೇಶವನ್ನು ಹಾಳುಮಾಡಿ ಎಂದೂ ಬಗೆಯರಿಯದ ಸಮಸ್ಯೆಗಳನ್ನು ಸೃಷ್ಟಿಸಿ ಹೋದರು. "ಉನ್ ಫೆಸ್ಟಿವಲ್–ನನ್ನ ಉತ್ಸವ".(13) ಎಂಬ ಉತ್ಸವ ವಿಶ್ವವಿದ್ಯಾರ್ಥಿ ಯುವ ಜನರ ಸಮ್ಮೇಳನ. ಹಲವಾರು ಬಡದೇಶಗಳ ಅಥವಾ ತೃತೀಯ ಜಗತ್ತಿನ ದೇಶಗಳು, ಮುಂದುವರೆದ ದೇಶಗಳ ಆಕ್ರಮಣಗಳನ್ನು, ವ್ಯಾಪಾರದ ನೀತಿಗಳನ್ನು ಖಂಡಿಸುವುದಕ್ಕಾಗಿ ರೂಪಿಸಿಕೊಂಡಿರುವಂತಹ ವಿಶ್ವ ವಿದ್ಯಾರ್ಥಿ ಯುವಜನರ ಸಮ್ಮೇಳನ ಯಾವ ದೇಶದಲ್ಲಿ ಪ್ರಜ್ಞಾವಂತ ವಿದ್ಯಾರ್ಥಿ ಸಮೂಹ ಕ್ರಿಯಾಶೀಲವಾಗಿರುತ್ತದೆಯೋ ಅಂತಹ ದೇಶ ಸಹ ಕ್ರಿಯಾಶೀಲವಾಗಲು ಹಾಗೂ ಪ್ರಗತಿಯ ನೋಟವನ್ನು ನೋಡಲು ಸಾಧ್ಯ. ಯಾವ ಜನರ ಉತ್ಸವಗಳು ಅಂದರೆ ರಾಷ್ಟ್ರವನ್ನು ಅಭಿವೃದ್ಧಿ ಪಡಿಸುವ ವಿಚಾರ ಮಂಡನೆ ಮಾಡುವಂತಹ, ಚರ್ಚಿಸುವಂತಹ, ವಿಚಾರಗಳನ್ನು ಹಂಚಿಕೊಳ್ಳುವಂತಹ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಉತ್ಸವಗಳು ನಡೆಯಬೇಕು. ಭಾರತ ದೇಶದ ವಿದ್ಯಾರ್ಥಿ ಸಂಘಟನೆಗಳು ಸಂಪೂರ್ಣ ರಾಜಕೀಯ ಪಕ್ಷಗಳ ಹಿಡತದಲ್ಲಿ ಇರುವಂತೆ ಇರಬಾರದು."ಏಷ್ಯಾ ಖಂಡದ ಕ್ಲಬ್‌ನಲ್ಲಿ ಹೀಗೆ ಒಮ್ಮೆ 'ಭಾರತ ದಿನ'ದ ಆಚರಣೆ ಭಾರತ ಹಲವು ಸಮರಶೀಲ ದೇಶಗಳಿಗೆ ಪ್ರೀತಿಯ ಹೆಸರು, ಅಲಿಪ್ತ ಒಕ್ಕೂಟದ ನಾಯಕನಾಗಿ, ಮೂರನೇ ಜಗತ್ತಿನ ಪ್ರಮುಖನಾಗಿ, ಹೋರಾಟದಲ್ಲಿದ್ದ ದೇಶಗಳಿಗೆಲ್ಲಾ ಭಾರತ ಸಹಾಯ ಹಸ್ತ ಚಾಚಿದ್ದನ್ನು ನೆನಪಿಸಿಕೊಂಡನು. ಹಲವು ದೇಶದ ಪ್ರತಿನಿಧಿಗಳು ಆತ್ಮೀಯ ಮಾತುಗಳನ್ನಾಡಿದರು"(14) ಭಾರತ ದೇಶವು ತೃತೀಯ ಜಗತ್ತಿನ ಪ್ರಮುಖ ರಾಷ್ಟ್ರ ಹಲವಾರು ಬಡದೇಶಗಳಿಗೆ, ಸಮರಶೀಲ ದೇಶಗಳಿಗೆ ಸಹಾಯ ಹಸ್ತ ಚಾಚಿದೆ, ಆದರೆ ಭಾರತದ ಪರಿಸ್ಥಿತಿ ಬೇರೆ ಬಡದೇಶಗಳಿಗೆ ಹೋಲಿಸಿಕೊಂಡಾಗ ಪ್ರಗತಿಯನ್ನು ಸಾಧಿಸುತ್ತಿದೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಮುಂದುವರೆದ ದೇಶಗಳ ಜೊತೆಗೆ ಹೋಲಿಕೆ ಮಾಡಿಕೊಂಡಾಗ ನಮ್ಮ ಪ್ರಗತಿ ಏನೇನು ಸಾಲದು. ಭಾರತ ದೇಶವು ಇನ್ನೂ ಸದೃಢದೇಶವಾಗಬೇಕಿದೆ. ನೆರೆ–ಹೊರೆಯ ರಾಷ್ಟ್ರಗಳ ಜೊತೆಗಿನ ಸಂಬಂಧಗಳ ವಿಷಯದಲ್ಲಿ ಅಮೆರಿಕದಂತಹ ದೇಶಗಳ ಮಧ್ಯಪ್ರವೇಶಿಕೆಯನ್ನು ತಡೆಗಟ್ಟಬೇಕಾಗಿದೆ. ನಮ್ಮ ದೇಶದ ಯುವ ಸಂಪನ್ಮೂಲವನ್ನು, ವಿದ್ಯಾರ್ಥಿ ಬಳಗವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡು ದೇಶವನ್ನು ಕಟ್ಟಬೇಕಾದ ಅನಿವಾರ್ಯತೆ ಒದಗಿದೆ.

ವಾಸ್ಕೋಡಿಗಾಮನಿಂದ ಕಂಡುಹಿಡಿಯಲ್ಪಟ್ಟ ಅಥವಾ ಕಂಡುಕೊಂಡ ಭಾರತ ದೇಶಕ್ಕೆ ವ್ಯಾಪಾರ ವಹಿವಾಟು ಪ್ರಾರಂಭವಾಯಿತು. ಡಚ್ಚರು ಪೋರ್ಚುಗೀಸರ ನಂತರ ಬ್ರಿಟಿಷರು ಹೀಗೆ ಸರದಿಯಾಗಿ ಒಬ್ಬರಿಂದ ಮತ್ತೊಬ್ಬರಿಗೆ ಭಾರತದ ಮೇಲಿನ ಹಿಡಿತ ಹಸ್ತಾಂತರ ಆಗತೊಡಗಿತು. ಭಾರತ ದೇಶವು ಸ್ವಾತಂತ್ರ್ಯವನ್ನು ಪಡೆದ 1947 ಆಗಸ್ಟ್ ಹೊತ್ತಿಗೆ ಸಾವಿರಾರು ಜನರ ಪ್ರಾಣ ಬಲಿ ತೆಗೆದುಕೊಂಡರು.

ಇಲ್ಲಿದ್ದ ಸಂಪತ್ತು ಇಂಗ್ಲೆಂಡ್ ಗೆ ರವಾನಿಸಿಕೊಂಡರು. ದೇಶವನ್ನು ತುಂಡಾಗಿ ಕತ್ತರಿಸಿ ಹೊಸ ಸಮಸ್ಯೆಯನ್ನು ಹುಟ್ಟುಹಾಕಿ ಭಾರತೀಯರನ್ನು ಗುಲಾಮತನದಿಂದ ಮುಕ್ತಿಯನ್ನು ನೀಡಿದರು. ಭಾರತ ದೇಶವನ್ನು ವ್ಯಾಪಾರಕ್ಕೆ ಪರಿಚಯಿಸಿದ ವಾಸ್ಕೋಡಿಗಾಮನ ಹಾಗೆ ಕೊಲಂಬಸ್ 'ಕ್ಯೂಬಾ'ವನ್ನು ಕಂಡುಹಿಡಿದ. "ಕ್ಯೂಬಾದಲ್ಲಿ ನಡೆದದ್ದು ಅದೇ ಸಂಸ್ಕೃತಿಯ ತಿಕ್ಕಾಟ 1956ರ ಅಕ್ಟೋಬರ್ 12ರಂದು ಕ್ಯೂಬಾಗೆ ಕಾಲಿಟ್ಟ ಕೊಲಂಬಸ್ ಈ ದ್ವೀಪದ ಸೌಂದರ್ಯವನ್ನು ನೋಡಿ ದಂಗಾಗಿ ಹೋದ. 'ಮನುಷ್ಯನ ಕಣ್ಣುಗಳೆಂದು ಕಂಡಿರದಿದ್ದ ಸೌಂದರ್ಯದ ದ್ವೀಪ' ಎಂದು ಕರೆದ. ಕೊಲಂಬಸ್ ಆಗಲೂ ಅಂದುಕೊಂಡಿದ್ದದ್ದು ತಾನು ಇಂಡಿಯಾಗೆ ಕಾಲಿಟ್ಟಿದ್ದೇನೆ ಎಂದೇ ಅದಕ್ಕಾಗಿ 'ಇಂಡೀಸ್' ಎಂದು ಕರೆದ. ಇದು ಇಂಡಿಯಾ ಅಲ್ಲ ಎಂದು ಗೊತ್ತಾದಾಗ 'ವೆಸ್ಟ್ಇಂಡೀಸ್' ಆಯಿತು"(15) ದ್ವೀಪದ ಸೌಂದರ್ಯಕ್ಕೆ ಸೋತು ಸೌಂದರ್ಯದ ದ್ವೀಪ ಎಂದ ಆದರೆ ತಾನು ತಲುಪಿದ್ದು ಇಂಡಿಯಾಕ್ಕೆ ಅಲ್ಲ ಅಂತ ತಿಳಿದಾಗ 'ವೆಸ್ಟ್ಇಂಡೀಸ್' ಎಂದ 'ವೆಸ್ಟ್' ಅವನ ಇಂಗ್ಲೀಷ್‌ನ 'waste' ಎಂದು ಕರೆದಿರಬೇಕು. ಏಕೆಂದರೆ ಅವನು ಯಾವ ನೆಲವನ್ನು ಹುಡುಕಿಕೊಂಡು ಬಂದಿದ್ದನು. ಆ ನೆಲ ಅದು ಆಗಿರದೇ ಇರುವುದರಿಂದ ಅದು ಕೆಲಸಕ್ಕೆ ಬಾರದ ನೆಲವೆಂದು ಕೆಲಸಕ್ಕೆ ಬಾರದೆ ಇರುವುದು ಇಂಗ್ಲೀಷ್‌ನ (waste) ಆಗಿರಬೇಕು ಎಂದು ಅನಿಸುತ್ತದೆ. ಪಾಶ್ಚಿಮಾತ್ಯ ಆಡಳಿತಗಾರರು ವಿಶ್ವದ ಅನೇಕ ರಾಷ್ಟ್ರಗಳಿಗೆ ತಲುಪುತ್ತ ಒಂದೊಂದು ಹೆಸರನ್ನು ನಾಮಕರಣ ಮಾಡಿಕೊಂಡರು. ಸುಮಾರು ನಾಲ್ಕು ಶತಮಾನಗಳ ಕಾಲ ಸ್ವಾತಂತ್ರ್ಯವನ್ನು ಕಳೆದುಕೊಂಡ ಕ್ಯೂಬಾ ಸ್ವಾತಂತ್ರ್ಯ ಪಡೆದ ನಂತರ ತನ್ನ ರಾಷ್ಟ್ರವನ್ನು ಹೇಗೆ ಬಲವರ್ಧನೆ ಮಾಡಬೇಕು ಎಂಬುದನ್ನು ಕಂಡುಕೊಂಡಿತು. "ಕೆಟ್ಟದ್ದರ ನಾಶದ ನಂತರ ಒಳ್ಳೆಯದೊಂದನ್ನು ಬದಲಿಗೆ ಕೆಡಹುವ ಕ್ರಿಯೆಗೆ ಕಟ್ಟುವ ಕನಸಿಲ್ಲದಾಗ ಬೆಲೆಯಿರುವುದಿಲ್ಲ."(16) ನಮ್ಮ ಜೀವನದ ಅನುಭವಗಳೇ ನಮಗೆ ದಾರಿ ತೋರಿಸುವ ಗುರುಗಳಾಗಬೇಕು. ಆಗ ಜೀವನದಲ್ಲಿ ಸಫಲತೆಯನ್ನು ಕಾಣಬಹುದು ಹಾಗೆಯೇ ನಾವು ಕೆಟ್ಟದ್ದನ್ನು ನಾಶ ಮಾಡಿದ ನಂತರ ಹೊಸದೊಂದು ಕ್ರಿಯೆಗೆ ಚಾಲನೆ ನೀಡಬೇಕು. ಹೊಸ ಚಾಲನೆಯನ್ನು ಕ್ಯೂಬಾ ದೇಶವು ನೀಡಿತು. ಸತತವಾಗಿ ನಾಲ್ಕು ಶತಮಾನಗಳ ಕಾಲ ಸ್ವಾತಂತ್ರ್ಯವನ್ನು ಕಳೆದುಕೊಂಡ ಕ್ಯೂಬಾ ತನ್ನ ದೇಶದ, ಪ್ರಜೆಗಳ ಭವಿಷ್ಯದ, ಎಲ್ಲ ರೀತಿಯಲ್ಲಿ ಸರ್ವತೋಮುಖವಾಗಿ ಕನಸನ್ನು ಕಂಡುಕೊಂಡ ಆ ಕನಸನ್ನು ಪ್ರಜೆಗಳ ಸಹಕಾರದಿಂದ ನನಸಾಗಿಸಿದೆ.

ಒಂದು ರಾಷ್ಟ್ರದ ಸರ್ವತೋಮುಖಿಯಾದ ಅಭಿವೃದ್ಧಿಗೆ ಆ ರಾಷ್ಟ್ರದ ಜವಾಬ್ದಾರಿ ಹೊತ್ತ ನಾಯಕರ ಪಾತ್ರ ತುಂಬಾ ಪ್ರಮುಖವಾಗಿರುತ್ತದೆ. ರಾಷ್ಟ್ರದ ಜವಾಬ್ದಾರಿ ಹೊತ್ತ ನಾಯಕರು ಸ್ವಜನ ಪಕ್ಷಪಾತ, ಸ್ವಾರ್ಥ, ಜಾತಿ, ಧರ್ಮ, ದುರಾಸೆ ಇವುಗಳಿಂದ ಮುಕ್ತರಾಗಿರಬೇಕು. ಪ್ರಜಾಪ್ರಭುತ್ವದ

ಅಡಿಯಲ್ಲಿ ಚುನಾವಣೆಯ ಮೂಲಕ ನಾವು ಯಾರನ್ನು ಬೇಕಾದರೂ ಆಯ್ಕೆ ಮಾಡಿಕೊಳ್ಳಬಹುದಾದ ಅಧಿಕಾರ ಪ್ರಜೆಗಳಿಗೆ ಕಲ್ಪಿಸಲಾಗಿದೆ. ಚುನಾವಣೆ ನೀತಿ ಸಂಹಿತೆಗಳನ್ನು ನೋಡಿಕೊಳ್ಳಲು, ಚುನಾವಣೆಯ ಸಂಪೂರ್ಣ ಉಸ್ತುವಾರಿಯನ್ನು ನಿಭಾಯಿಸಲು ಚುನಾವಣಾ ಆಯೋಗ ಕಾರ್ಯನಿರ್ವಹಿಸುತ್ತದೆ. ಭಾರತದ ಚುನಾವಣೆಯ ನೀತಿಗಳು ಮಾರ್ಪಾಟು ಆಗುತ್ತಾ ಹಲವಾರು ಪರಿವರ್ತನೆಗಳೊಂದಿಗೆ ಒಂದು ಒಳ್ಳೆಯ ಹಂತಕ್ಕೆ ಬಂದಿದೆ. ಎಂದುಕೊಂಡರು ಇನ್ನೂ ಸಂಪೂರ್ಣ ಸುಧಾರಣೆಯಾಗಿಲ್ಲ. ಇಂದು ಕೂಡ ಚುನಾವಣೆಯಲ್ಲಿ ಸ್ಪರ್ಧಿಸುವ ವ್ಯಕ್ತಿಗಳು ಕೋಟ್ಯಂತರ ರೂಪಾಯಿಗಳನ್ನು ಚುನಾವಣೆಯ ಸಂದರ್ಭದಲ್ಲಿ ಮತದಾರರಿಗೆ ಹಂಚುತ್ತಿದ್ದಾರೆ. ಇದರಿಂದ ಚುನಾವಣ ಪ್ರಕ್ರಿಯೆ ವ್ಯಾಪಾರದ ಹೂಡಿಕೆಯ ಮಾರುಕಟ್ಟೆ ಆಗುತ್ತಿದೆ. ಭೂ ಮಾಫಿಯಾದಂತಹ ಕ್ಷೇತ್ರಗಳಿಂದ ಬಂದವರು ಕೂಡ ಚುನಾವಣೆಯ ಕಣದಲ್ಲಿ ಸ್ಪರ್ಧಿಸಿ ಗೆದ್ದಂತಹ ಅನೇಕ ಉದಾಹರಣೆಗಳು ಕಂಡುಬರುತ್ತಿವೆ. ಗೆದ್ದಂತಹ ವ್ಯಕ್ತಿಗಳು ತಮ್ಮ ವ್ಯಾಪಾರ ವಹಿವಾಟುಗಳನ್ನು ವೃದ್ಧಿಸಿಕೊಳ್ಳಲು ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಸಾವಿರಾರು ಕೋಟಿಯ ವಹಿವಾಟುಗಳು ನಡೆಯುತ್ತಿವೆ. ಓಟಿಗೆ ಒಂದು ಸಾವಿರದಿಂದ ಐದು ಸಾವಿರದವರೆಗೆ ಹಣ ಪಡೆಯುವ ಮತದಾರ ತನ್ನ ಹಕ್ಕನ್ನು ಮಾರಿಕೊಂಡು ಸಂಭ್ರಮ ಪಡುತ್ತಾ ಚುನಾವಣೆಯ ನಿರೀಕ್ಷೆಯಲ್ಲಿರುತ್ತಿದ್ದಾನೆ. ಈ ರೀತಿಯ ಚುನಾವಣೆಗಳು ನಡೆಯುವ ವರ್ಗವು ಒಂದಾದರೆ, ಮತ್ತೊಂದು ರಾಜಕೀಯ, ಆಡಳಿತವನ್ನೇ ನೆಚ್ಚಿಕೊಂಡ ಕುಟುಂಬ ರಾಜಕಾರಣದ ನಾಯಕರುಗಳು ಇವರು ಜೀವನದ ಕೊನೆಯ ಉಸಿರು ಇರುವವರೆಗೂ ರಾಜಕೀಯದಿಂದ ನಿವೃತ್ತಿ ಪಡೆಯದ ಜನ ಇವರಿಲ್ಲದೇ ದೇಶದ ಭವಿಷ್ಯವನ್ನು ಕಾಣಲು ಸಾಧ್ಯವೇ ಇಲ್ಲ ಎನ್ನುವಂತಹವರು. ಇನ್ನೂ ಒಂದು ವರ್ಗವಿದೆ ಇದು ಭಾರತದ ಜಾತ್ಯಾತೀತತೆಯನ್ನುಪ್ರಶ್ನಿಸುತ್ತಾ ಹಿಂದೂ ಧರ್ಮದವರ ಓಟನ್ನು ಪಡೆಯಲು ಕೋಮುಗಲಭೆಯ ವಿಷದ ಬೀಜ ನೆಡುತ್ತಾ ಆಡಳಿತದ ಫಸಲನ್ನು ಬಯಸುವಂತಹದು. ಹೀಗಿರುವಾಗ ಭಾರತ ದೇಶವು ಹೇಗೆ ಅಭಿವೃದ್ಧಿ ಹೊಂದಲು ಸಾಧ್ಯ. 'ಫಿಡಲ್ ಕ್ಯಾಸ್ಟ್ರೋ' ಕ್ಯೂಬಾ ರಾಷ್ಟ್ರವನ್ನು ಅಮೆರಿಕ ರಾಷ್ಟ್ರದಂತಹ ದೊಡ್ಡಣ್ಣನ ಕಪಿ ಮುಷ್ಟಿಯಿಂದ ರಕ್ಷಿಸಿಕೊಳ್ಳಲು ತಮ್ಮ ಪ್ರಾಣವನ್ನು ಕೂಡ ಲೆಕ್ಕಿಸದೇ ಸೈನಿಕನಾಗಿ ಹೋರಾಡಿದ ರಾಷ್ಟ್ರಾಧ್ಯಕ್ಷ ಕ್ಯಾಸ್ಟ್ರೋ ಎನ್ನುವಂತಹ ರಾಷ್ಟ್ರವನ್ನು ನಡೆಸುವಂತಹ ದಂಡನಾಯಕನಿಂದ ಮಾತ್ರ ಅಭಿವೃದ್ಧಿಯ ಬೆಳೆಯನ್ನು ಕಾಣಲು ಸಾಧ್ಯ. ಇವರ ಚುನಾವಣೆಯ ನೀತಿಯು ಸಹ ಇತರ ದೇಶಗಳಿಗೆ ಮಾದರಿಯಾಗುವಂತಹದ್ದು. ಚುನಾವಣೆಯ ಪ್ರಕ್ರಿಯೆ ಯಾವತ್ತೂ ಕೂಡ ಪಾರದರ್ಶಕ ಹಾಗೂ ಹಣದ ವಹಿವಾಟಿನಿಂದ ಮುಕ್ತವಾಗಿರಬೇಕು. ಇಂತಹ ಮುಕ್ತತೆಯ ಅವಕಾಶವನ್ನು ಫಿಡೆಲ್ ಕ್ಯಾಸ್ಟ್ರೋ ಕ್ಯೂಬಾದಲ್ಲಿ ನಿರ್ಮಿಸಿದ್ದಾರೆ. "ಕ್ರಾಂತಿ ಜರುಗಿದ ನಂತರ ಅದನ್ನು ಕಾಪಾಡಿಕೊಳ್ಳುತ್ತಾ, ಇನ್ನೇನು

ಉಸಿರಾಡಬೇಕು ಎನ್ನುವಾಗ ಎದುರಾದ ಅಮೆರಿಕಾದ ದಾಳಿಯಲ್ಲಿ ಕ್ಯೂಬಾಗೆ ಚುನಾವಣೆ ಪ್ರಕ್ರಿಯೆ ನಡೆಸುವುದು ಸಾಧ್ಯವೇ ಇರಲಿಲ್ಲ. ಆದರೆ 1976 ರಲ್ಲಿ ಕ್ಯೂಬಾ ಹೊಸ ಸಂವಿಧಾನದ ಕರಡನ್ನು ತಯಾರಿಸಿ ಜನರ ಬಳಿಗೆ ಕೊಂಡೊಯ್ದಿತು. ಕಾರ್ಮಿಕರ ಮಧ್ಯೆ, ರೈತರ ಮಧ್ಯೆ, ಕ್ರಾಂತಿ ರಕ್ಷಿಸಲು ಹುಟ್ಟುಕೊಂಡಿದ್ದ ಸಮಿತಿಗಳಲ್ಲಿ, ಬೀದಿಗಳಲ್ಲಿ ಸಂವಿಧಾನದ ಕರಡನ್ನು ಚರ್ಚಿಸಲಾಯಿತು. 1976 ರ ಫೆಬ್ರವರಿ 24 ರಂದು ಈ ಕರಡಿನ ಬಗ್ಗೆ ಜನಾಭಿಪ್ರಾಯ ಸಂಗ್ರಹ ಮಾಡಲಾಯಿತು. ಈ ಸಂವಿಧಾನದ ಪರವಾಗಿ ಶೇ. 97.7 ಕ್ಯೂಬನ್ನರು ಮತ ನೀಡಿದರು. 'ಕ್ಯೂಬಾ ಗಣತಂತ್ರ' ಅಸ್ತಿತ್ವಕ್ಕೆ ಬಂತು. ಅದುವರೆಗೆ ಇದ್ದ ಕ್ರಾಂತಿಕಾರಿ ಪ್ರಭುತ್ವ ಈಗ ಸಮಾಜವಾದಿ ಪ್ರಭುತ್ವವಾಗಿ ಬದಲಾಯಿತು."(17) ಕ್ಯೂಬಾದಂತಹ ಜನಸಾಮಾನ್ಯರ ನಡುವಿನ, ಪ್ರತಿಯೊಂದು ಸಂಘಟನೆಗಳ ಉದಾಹರಣೆ ಅತೀ ವಿರಳ. ನಮ್ಮ ದೇಶಕ್ಕೂ 'ಕ್ಯೂಬಾ'ದಂತಹ ರೀತಿಯಲ್ಲಿ ರಚನೆಯಾದ 'ಸಂವಿಧಾನ' ಅವಶ್ಯಕತೆ ಇಂದು ಇದೆ. 65 ವರ್ಷಗಳ ಹಿಂದೆ ನಾವು ರಚನೆ ಮಾಡಿಕೊಂಡಿರುವ 'ಸಂವಿಧಾನ'ದಲ್ಲಿ ಸಮಕಾಲೀನ ಸಂದರ್ಭವು ಅನೇಕ ಮಾರ್ಪಾಡುಗಳನ್ನು ಬಯಸುತ್ತಿರುವ ಸಂದರ್ಭವಾಗಿದೆ. ಆದ್ದರಿಂದ ಸಮಕಾಲೀನ ಸಂದರ್ಭಕ್ಕೆ ಅನುಗುಣವಾಗಿ ಬೇಕಾಗಿರುವ ರೂಪುರೇಷಗಳನ್ನು ರಚಿಸಿಕೊಳ್ಳಬೇಕಾಗಿದೆ.

ಒಂದು ರಾಷ್ಟ್ರದ ಭವಿಷ್ಯಕ್ಕೆ ಆ ರಾಷ್ಟ್ರದ ನಾಯಕರ ಪಾತ್ರ ಎಷ್ಟು ಮುಖ್ಯವೋ ಅಲ್ಲಿ ಪ್ರಜೆಗಳ ಪಾತ್ರವೂ ಅಷ್ಟೇ ಮುಖ್ಯವೆಂದರೆ, ಅಕ್ಷರಸ್ಥ, ತಿಳುವಳಿಕೆಯುಳ್ಳದಿದ್ದಾಗ ನಮ್ಮ ರಾಷ್ಟ್ರ ಏನಾಗಿದೆ. ಏನಾಗಲು ಸಾಧ್ಯ ಎಂಬ ಅರಿವು ಇರಬೇಕು. ಈ ರಾಷ್ಟ್ರೀಯತ್ವದ ಬಗ್ಗೆ ಪ್ರಜ್ಞೆ ಇದ್ದಾಗ, ರಾಷ್ಟ್ರ ಸುಭಿಕ್ಷವಾಗಿ ಮುಂದುವರೆಯಲು ರಾಷ್ಟ್ರದ ಚುಕ್ಕಾಣಿ ಯಾರ ಕೈಗೆ ನೀಡಬೇಕು ಎಂಬ ಅರಿವು ಜಾಗೃತವಾಗುತ್ತದೆ. ನಮ್ಮಲ್ಲಿ ಈ ಅರಿವಿನ ಕೊರತೆ ಇರುವುದರಿಂದಲೇ ಅಕ್ಷರ ಪರಿಚಯ ಕೂಡ ಇಲ್ಲದ, ಕನಿಷ್ಠ ಶಿಕ್ಷಣ ಮಟ್ಟವನ್ನು ಇರದವರನ್ನು ಚುನಾವಣೆಯಲ್ಲಿ ಆರಿಸಿ ಜನಪ್ರತಿನಿಧಿಗಳನ್ನಾಗಿ ಮಾಡುತ್ತಿದ್ದೇವೆ.

ಒಂದು ರಾಷ್ಟ್ರದ ನಿಜವಾದ ಸಂಪತ್ತು ಎಂದರೆ ಮಾನವ ಸಂಪನ್ಮೂಲ, ಖನಿಜ ಸಂಪನ್ಮೂಲಗಳಿಗಿಂತ ಮುಖ್ಯವಾದದ್ದು, ಮಾನವ ಸಂಪನ್ಮೂಲ ಅನಕ್ಷರಸ್ಥವಾಗಿದ್ದರೆ, ಅದು ಕೂಡ ಖನಿಜ (ವಸ್ತು)ಗಳ ರೀತಿಯಲ್ಲಿ ಮಾತ್ರ ಬಳಕೆಗೆ ಬರುವಂತಹದ್ದು. ಖನಿಜ ಸಂಪನ್ಮೂಲಗಳನ್ನು ಯಾವ ದೇಶದವರು ಬೇಕಾದರೂ ಕೊಂಡುಕೊಳ್ಳಬಹುದು ಆದ್ದರಿಂದ ಈ ಮಾನವ ಸಂಪನ್ಮೂಲ ಇತರ ದೇಶಗಳ ಕೈಗೊಂಬೆಯಾಗಬಾರದು ಎಂದರೆ ಶೈಕ್ಷಣಿಕ ಸಂಪನ್ಮೂಲ ಆಗಬೇಕು. ಭಾರತ ದೇಶವು 1947ರಲ್ಲಿ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಬ್ರಿಟೀಷರಿಂದ ಪಡೆದುಕೊಂಡಿತು. ಆದರೆ 1959 ರಲ್ಲಿ ಸ್ವಾತಂತ್ರ್ಯ

ಪಡೆದರೂ ಸಂಪೂರ್ಣವಾಗಿ ಮುಕ್ತಿಯನ್ನು ಪಡೆಯದ 'ಕ್ಯೂಬಾ' ರಾಷ್ಟ್ರದ ಸಾಕ್ಷರತೆಯ ಪ್ರಮಾಣಕ್ಕೆ ತುಲನೆ ಮಾಡಿದರೆ ಶಿಕ್ಷಣದ ಪ್ರಮಾಣ ಭಾರತ ದೇಶದ್ದು ಬಹಳ ಕಡಿಮೆ. "ಈ ಕಾರಣಕ್ಕಾಗಿಯೇ ಯುನೆಸ್ಕೋ ಹಾಗೂ ಯುನಿಸೆಫ್ 'ಕ್ಯೂಬಾದತ್ತ ನೋಡಿ' ಎಂದು ಜಗತ್ತಿಗೆ ಕರೆ ನೀಡಿದವು. 'ಕನಿಷ್ಠ ಒಂಭತ್ತನೆಯ ತರಗತಿಯವರೆಗೆ ಶಿಕ್ಷಣ ಪಡೆದ ಶೇ 98.6 ಸಾಕ್ಷರತೆ ಹೊಂದಿರುವ ಕ್ಯೂಬಾ ಕೇವಲ ಅಮೆರಿಕಾದ ದೇಶಗಳಲ್ಲಿ ಮಾತ್ರವಲ್ಲ ಇಡೀ ಜಗತ್ತಿಗೆ ನಾಯಕನಾಗಿ ನಿಂತಿದೆ ಎಂದು ಶ್ಲಾಘಿಸಿದವು. '37 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕ ಕ್ಯೂಬಾದಲ್ಲಿದ್ದು ಜಗತ್ತಿನ ಇನ್ನಾವುದೇ ದೇಶದಲ್ಲಿ ಈ ಸಾಧನೆ ಮಾಡಲಾಗಿಲ್ಲ. ಎಂದು ಬೆನ್ನು ತಟ್ಟಿದವು".(18) ಈ ರೀತಿಯ ಸಾಕ್ಷರತೆಯ ಪ್ರಮಾಣ ಗರಿಷ್ಠ ಮಟ್ಟಕ್ಕೆ ಏರಲು ಇಡೀ ದೇಶದಲ್ಲಿ ಕೆಲವೇ ವಿದ್ಯಾವಂತ ಸಮೂಹ, ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಿದೆ. ಹಾಗೆಯೇ ಇವರ ಶಿಕ್ಷಣ ನೀಡುವ ಪದ್ಧತಿಯು ಬಹಳ ವಿಶಿಷ್ಟವಾದದ್ದಾಗಿದೆ. ಇವರ ಶಿಕ್ಷಣ ನೀತಿಯೂ ಹಿಂದೆ ಭಾರತ ದೇಶದಲ್ಲಿ ಗುರುಕುಲಗಳಲ್ಲಿ ನೀಡುವ ರೀತಿಯದ್ದು. (ಗುರುಕುಗಳಲ್ಲಿ ಪ್ರತಿಷ್ಠಿತ ಜಾತಿಗೆ ಮಾತ್ರ ಸೀಮಿತವಾಗಿತ್ತು). ಶಿಕ್ಷಣದ ಕ್ರಮ ಮಾತ್ರ ಗುರುಕುಲಗಳದ್ದು ಜಾತಿ, ಭೇದಗಳು ಇರಲಿಲ್ಲ. ಬ್ರಿಟಿಷರು 1835 ರಲ್ಲಿ ತಂದಂತಹ ಶಿಕ್ಷಣ ಪದ್ಧತಿಯನ್ನೇ ನಾವು ಇಂದು ಕೂಡ ಶಾಲೆಗಳಲ್ಲಿ ಕಲಿಸುತ್ತಿವೆ. ಅವರು ಗುಮಾಸ್ತರ ತಯಾರಿಕೆಗಾಗಿ, ಆಡಳಿತದ ಸಹಾಯಕಾಗಿ, ತರಭೇತಿಯ ಅವಶ್ಯಕತೆಗೆ ಅನುಗುಣವಾಗಿ ತರಭೇತುದಾರನನ್ನಾಗಿ ಮಾಡಿದರು. ಅದನ್ನೆ ನಾವು ಇಂದಿನವರೆಗೂ ಮುಂದುವರೆಸಿಕೊಂಡು ಸಾಗಿದ್ದೇವೆ. ಆದರೆ ಕ್ಯೂಬಾ ದೇಶವು ತನ್ನ ದೇಶದ ಜನಕ್ಕೆ ಕೇವಲ ಅಕ್ಷರದ ಅರಿವು ಮಾತ್ರ ನೀಡಲಿಲ್ಲ, ಬದುಕು, ಜೀವನ, ರಾಷ್ಟ್ರ ಎಂಬುದನ್ನು ಅರಿತುಕೊಳ್ಳುವ ಪ್ರಾಯೋಗಿಕ ಸಂಶೋಧನ ಕೇಂದ್ರವಾಯಿತು. "ಇಲ್ಲಿ ಶಿಕ್ಷಣ ಎಂಬುದು ಪ್ರತ್ಯೇಕ ವ್ಯವಸ್ಥೆಯಲ್ಲ-ಬದುಕು, ಕೆಲಸ ಹಾಗೂ ಉತ್ಪಾದನೆಯ ನಡುವಿನ ಕೊಂಡಿ"(19) ಈ ರೀತಿಯಾದ ಬದುಕನ್ನು ರೂಪಿಸಕೊಳ್ಳುವಂತಹ ಅಕ್ಷರವನ್ನು ನೀಡಿರುವುದರಿಂದಲೇ ದೇಶದ ಪ್ರಗತಿ ಜಗತ್ತಿನ ಮಟ್ಟದಲ್ಲಿ ಗುರುತಿಸಿಕೊಳ್ಳಲು ಸಾದ್ಯವಾಯಿತು.

ಮತ್ತೊಂದು ಅಂಶ ರಾಷ್ಟ್ರಕ್ಕೆ ಅತಿಮುಖ್ಯವಾದದ್ದು ಆರೋಗ್ಯವಂತ ಪ್ರಜೆಗಳು ಒಂದು ಕುಟುಂಬವು ಆರೋಗ್ಯಪೂರ್ಣವಾಗಿರದಿದ್ದರೆ ಆ ಕುಟುಂಬ ಆರ್ಥಿಕ ಸ್ಥಿತಿ ಹೀನಾಯವಾಗಿರುತ್ತದೆ. ಮತ್ತು ಇನ್ನೊಬ್ಬರ ನೀಡುವಿಕೆಯನ್ನು, ಸಹಾಯ ಹಸ್ತವನ್ನು ನಿರೀಕ್ಷೆಯಲ್ಲಿರುತ್ತದೆ. ಹಾಗೆಯೇ ಒಂದು ದೇಶ ಕೂಡ ಆರೋಗ್ಯವಂತ ಪ್ರಜೆಗಳನ್ನು ಹೊಂದಿದ್ದರೆ ಅದು ಆರ್ಥಿಕವಾಗಿ, ಸಾಮಾಜಿಕವಾಗಿ ಸದೃಢತೆಯನ್ನು, ಮಾನಸಿಕ ಸ್ವಾಸ್ಥವನ್ನು ಹೊಂದಿರುವಂತಹ ರಾಷ್ಟ್ರವಾಗುತ್ತದೆ. ಭಾರತ ದೇಶವು ಗ್ರಾಮಗಳಿಂದ ತುಂಬಿದ ರಾಷ್ಟ್ರ. ಗಾಂಧೀಜಿ ಅವರು ಹೇಳುವ ಹಾಗೆ ರೈತ ದೇಶದ ಬೆನ್ನೆಲುಬು. ಈ ಗ್ರಾಮಗಳಿಂದ ತುಂಬಿರುವ

ಾಷ್ಟ್ರದಲ್ಲಿ ಗ್ರಾಮವಾಸಿಗಳು ಆರೋಗ್ಯವಂತರಾಗಿದ್ದಾರೆಯೇ? ಗ್ರಾಮಾಂತರ ಪ್ರದೇಶದ ಪ್ರಜೆಗಳ ಆರೋಗ್ಯದ ಬಗ್ಗೆ ಸರ್ಕಾರಗಳು ಎಷ್ಟರ ಮಟ್ಟಿಗೆ ಗಮನ ಹರಿಸುತ್ತಿವೆ? ಅದಕ್ಕಾಗಿ ಸರ್ಕಾರ, ಆರೋಗ್ಯ ಇಲಾಖೆಯು ಕೈಗೊಂಡ ಕ್ರಮಗಳೇನು? ಹೀಗೆ ಅನೇಕ ಪ್ರಶ್ನೆಗಳು ಹುಟ್ಟುತ್ತವೆ. ಭಾರತ ದೇಶದಲ್ಲಿ ಕರ್ನಾಟಕ ರಾಜ್ಯವೂ) ಸೇರಿದಂತೆ ಗ್ರಾಮಾಂತರ ಪ್ರದೇಶದಲ್ಲಿ ಸರ್ಕಾರಿ ವೈದ್ಯರು ಕಾರ್ಯನಿರ್ವಹಿಸಲು ಆಸಕ್ತಿವಹಿಸದೇ ಇರುವುದರಿಂದ, ಕಡ್ಡಾಯವಾಗಿ ಗ್ರಾಮಾಂತರ ಪ್ರದೇಶದಲ್ಲಿ ಒಂದು ವರ್ಷವಾದರೂ ಕಾರ್ಯನಿರ್ವಹಸಿಬೇಕು ಎಂದು ಸರ್ಕಾರ ಆದೇಶಿಸಿದೆ. ಆದರೂ ಕೂಡ ಗ್ರಾಮಾಂತರ ಪ್ರದೇಶದಲ್ಲಿ ವೈದ್ಯರ ಕೊರತೆ ಎದ್ದು ಕಾಣುತ್ತಿದೆ. ಇದಕ್ಕೆ ಕಾರಣ ನರ್ಸಿಂಗ್ ಹೋಂಗಳು ಇಂದು ವೈದ್ಯಕೀಯ ವಲಯವನ್ನು ಮಾಯೆಯನ್ನಾಗಿ ಮಾರ್ಪಡಿಸಿಕೊಂಡಿದೆ. ವೈದ್ಯಕೀಯ ವಲಯದಲ್ಲಿರುವ ಲಾಭ ಬೇರೆ ಯಾವುದೇ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆ ಮಾಡಿದರು ಸಿಗುವುದಿಲ್ಲ. ಸರ್ಕಾರಿ ವೈದ್ಯರು ಸರ್ಕಾರಿ ಆಸ್ಪತ್ರೆಗಳಲ್ಲಿ

ಕೆಲಸಕ್ಕೆ ನಿಯೋಜನೆಗೊಂಡಿದ್ದರೂ, ನರ್ಸಿಂಗ್ ಹೊಂ ಗಳಲ್ಲಿ ಗುತ್ತಿಗೆಯ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಮತ್ತೊಂದು ಪ್ರಮುಖ ಕಾರಣ ವೈದ್ಯಕೀಯ ಪದವಿ ಪಡೆದ ಭಾರತೀಯರು ಹೊರ ದೇಶಗಳಿಗೆ ಹೋಗಿ ನೆಲೆಸುತ್ತಿರುವುದು. ಈ ಕಾರಣಗಳಿಂದ ಗ್ರಾಮೀಣ ಪ್ರದೇಶದಲ್ಲಿ ವೈದ್ಯರ ಅಭಾವ ಎದುರಾಗುತ್ತಿದೆ. "ವಿಶ್ವ ಆರೋಗ್ಯ ಸಂಸ್ಥೆ ಬೆರಗಾಗಿರುವ ಮೊತ್ತೊಂದು ಸಂಗತಿ 'ಈ ಮನೆ ವೈದ್ಯ'. ಅಂದರೆ ನಮ್ಮಲ್ಲಿಯಂತೆ ಡಾಕ್ಟರ್ ಶಾಪಿನಲ್ಲಿ ಇರುವ ಕ್ಯೂ ನೆನೆಸಿಕೊಂಡೇ ಭಯವಾಗಿ ಮನೆಯಲ್ಲಿ ಇರುವ ಮಾತ್ರೆಗಳನ್ನೇ ನುಂಗಿ ಸುಧಾರಿಸಿಕೊಳ್ಳುವುದಲ್ಲ. ಕ್ಯೂಬಾದ ಹೆಮ್ಮೆಯ ವಿಷಯವೆಂದರೆ ಇಲ್ಲಿ ವೈದ್ಯರೇ ಜನರ ಬಳಿಗೆ ಹೋಗುತ್ತಾರೆ. ಇದು ಕ್ಯೂಬಾದ ಸುಂದರ ಯೋಜನೆಗಳಲ್ಲೊಂದು. ಕ್ಯೂಬಾದ ಪ್ರತೀ 120 ಮನೆಗೆ ಒಬ್ಬ ವೈದ್ಯ ಹಾಗೂ ಒಬ್ಬ ನರ್ಸನ್ನು ನೀಡಲಾಗಿದೆ. ಇವರು ಈ 120 ಮನೆಗಳ ಮಧ್ಯದಲ್ಲಿಯೇ ವಾಸ ಇರುತ್ತಾರೆ."(20) ಭಾರತೀಯ ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯರೆ ಇಲ್ಲದಂತಾಗಿದ್ದಾರೆ. ನಗರದ ಪ್ರದೇಶಗಳಲ್ಲೂ ವೈದ್ಯರ ಅಭಾವ ಇದ್ದೇ ಇದೆ. ಇದಕ್ಕೆ ಮುಖ್ಯವಾದ ಕಾರಣ ಇಲ್ಲಿ ವೈದ್ಯಕೀಯ ಪದವಿ ತೆಗೆದುಕೊಂಡ ವೈದ್ಯ ತನ್ನ ದೇಶದ ಮೇಲೆ ದೇಶಾಭಿಮಾನ ಇಲ್ಲದಿರುವುದು, ಹೊರ ದೇಶಗಳಿಗೆ ಹೋಗಿ ಹೆಚ್ಚಿನ ಹಣ ಸಂಪಾದನೆ ಮಾಡುವ ಸ್ವಾರ್ಥ ಮನೋಭಾವ ತುಂಬಿದೆ. ಭಾರತೀಯ ವೈದ್ಯಕೀಯ ವಲಯ ಕೂಡ ಸಾರ್ವಜನಿಕವಾಗಬೇಕಾದ ಅನಿವಾರ್ಯತೆಯಿಂದ ತುಂಬಿದೆ. ಭಾರತೀಯ ಹವಾಗುಣ, ಸಂಪನ್ಮೂಲ ಎಲ್ಲವುಗಳು ಸಹ ಮಾನವ ಸ್ನೇಹಿಯಾಗಿದ್ದರೂ ಕೂಡ, ಸಾಮಾನ್ಯ ಯಿಲೆಗೂ ವೈದ್ಯರ ಅಭಾವವಿರುವುದರಿಂದ ಆರೋಗ್ಯವಂತ ಸಮಾಜ ಕಾಣಲು ಸಾಧ್ಯವಿಲ್ಲದಂತಾಗಿದೆ.

120 ಮನೆಗೆ ಒಬ್ಬ ವೈದ್ಯವಿಲ್ಲದಿದ್ದರೂ ಚಿಂತೆಯಿಲ್ಲ ಹೋಬಳಿ ಮಟ್ಟಕ್ಕೆ ಕನಿಷ್ಟ ಇಬ್ಬರು ವೈದ್ಯರ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಜೊತೆಗೆ ದೇಶದ ವೈದ್ಯಕೀಯ ಪಡೆದ ವೈದ್ಯರು ದೇಶಾಭಿಮಾನ ಬೆಳೆಸಿಕೊಂಡು ದೇಶದ ಜನತೆಗೆ ನೆರವಾಗಬೇಕು. ಕ್ಯೂಬಾದ ರೀತಿಯಲ್ಲಿ 'ಮನೆ ವೈದ್ಯ' ಅಲ್ಲದಿದ್ದರೂ 'ಗ್ರಾಮ ವೈದ್ಯ'ನ ಅವಶ್ಯಕತೆಯ ಜರೂರು ನಮ್ಮ ಗ್ರಾಮಗಳ ಭಾರತಕ್ಕೆ ಬೇಕಾಗಿದೆ.

ಪ್ರಗತಿಯ ಪಥದಲ್ಲಿರುವ ಕ್ಯೂಬಾ ತನ್ನ ಅನುಭವಗಳಿಂದ, ತನ್ನ ಚರಿತ್ರೆಯಿಂದ ಅನೇಕ ರೀತಿಯ ಪಾಠಗಳನ್ನು ಕಲಿತಿದೆ. ಬ್ರಿಟಿಷರ ಆಡಳಿತ, ಸ್ಪೇನಿನ ಆಡಳಿತ ಅನ್ನುವುದಕ್ಕಿಂತ ದಬ್ಬಾಳಿಕೆಗೆ ಒಳಗಾದ ಸ್ಪೇನ್ ಹತ್ತೊಂಬತ್ತನೆಯ ಮತ್ತು ಇಪ್ಪತ್ತನೆಯ ಶತಮಾನದಲ್ಲಿ ತನ್ನ ಹೋರಾಟವನ್ನು ತೀವ್ರಗೊಳಿಸಿತು. 19ನೇ ಶತಮಾನದಲ್ಲಿ ಕ್ಯೂಬಾದ ಸಕ್ಕರೆ ರುಚಿ ಅಮೆರಿಕಾಗೆ ಹಿಡಿಸಿತ್ತು. ಯಾವಾಗಲು ಹದ್ದು ಆಕಾಶದಲ್ಲಿ ಅತೀ ಎತ್ತರದಲ್ಲಿ ಹಾರಾಡುತ್ತ ಭೂಮಿಯ ಮೇಲಿನ ಆಹಾರದ ತುಣುಕುಗಳನ್ನು ನಿರೀಕ್ಷಿಸುತ್ತಲೆ ತನ್ನ ಪ್ರಯಾಣ ಮುಂದುವರೆಸಿರುತ್ತೆ. ಯಾವಾಗ ಆಹಾರದ ಮೇಲೆ ತನ್ನ ಕಣ್ಣು ಬಿತ್ತೋ ಅಲ್ಲಿನ ಆಹಾರ ಹದ್ದಿನ ಬಾಯಲ್ಲಿರುತ್ತದೆ. ಅಮೆರಿಕ ದೇಶದ ಕಣ್ಣು 'ಹದ್ದಿನ ಕಣ್ಣು'. ಸದಾ ಆಹಾರದ ಅನ್ವೇಷಣೆ ಹೀಗೆ ಯಾವಾಗಲು ಅನ್ವೇಷಣೆಯಲ್ಲಿರುವ ಅಮೆರಿಕ ಸ್ಪೇನ್ ದೇಶವನ್ನು ಎದುರಿಸಿ ಕ್ಯೂಬಾದ ಮೇಲೆ ತನ್ನ ನಿಯಂತ್ರಣವನ್ನು ಸ್ಥಾಪಿಸಿಕೊಂಡಿತು. ಕ್ಯೂಬಾದ ಹೋರಾಟಗಳನ್ನು ಹತ್ತಿಕ್ಕುತ್ತಲೇ ಬಂತು. ತನಗೆ ಬೇಕಾದ ಆಡಳಿತಾಧಿಕಾರಿಯನ್ನು ನೇಮಿಸಿಕೊಂಡು ಕ್ಯೂಬಾದ ಸಂಪತ್ತನ್ನು ಕೊಳ್ಳೆ ಹೊಡೆಯಿತು. ಅದರಿಂದ ಎಚ್ಚೆತ್ತುಕೊಂಡ ಕ್ಯೂಬಾ ದಿಟ್ಟವಾದ ಉತ್ತರವನ್ನು ನೀಡಲು ಪ್ರಾರಂಭಿಸಿತು. ಅಮೆರಿಕಾದ ಧೋರಣೆಗಳು ಅಂದಿನಿಂದ ಇಂದಿನವರೆಗೂ ಹಾಗೆ ಮುಂದುವರೆದುಕೊಂಡು ಸಾಗಿದೆ. ತೀರ ಇತ್ತೀಚಿನ ಬೆಳವಣಿಗೆಯನ್ನು ಅಮೆರಿಕಾದ ಕುತಂತ್ರ ನೀತಿಯ ಬಗ್ಗೆ ತುಂಬಾ ಒಳ್ಳೆಯ ಉದಾಹರಣೆಯಾಗಿದೆ. "ಇದಕ್ಕೂ ಮೊದಲು ವಿರೋಧ ಪಕ್ಷಗಳ ಜತೆ ಸಂಧಾನ ಮಾತುಕತೆ ನಡೆಸುವಂತೆ ಮತ್ತು ಅವರನ್ನು ಸರ್ಕಾರ ಒಳಗೆ ಸೇರಿಸಿಕೊಳ್ಳುವಂತೆ ಅಮೆರಿಕ ಪದೇ-ಪದೇ ಸಲಹೆ ನೀಡುತ್ತಲೇ ಬಂದಿತ್ತು. ಆದರೆ ಹೊಸ ಅಧ್ಯಕ್ಷರು ಅದನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ತಮಗೆ ದೊರೆತ ಕೊನೆಯ ಅವಕಾಶವನ್ನು ಅವರು ನಿರೀಕ್ಷೆಯಂತೆ ಕೈಚೆಲ್ಲಿದರು. ಮೊರ್ಸಿ ತಮ್ಮ ಪಟ್ಟು ಸಡಿಲಿಸಲಿಲ್ಲ. ಬೇರೆ ಯಾವ ದಾರಿ ಕಾಣದೆ ಅವರ ಆಪ್ತ ಹಾಗೂ ವಿದೇಶಾಂಗ ನೀತಿ ಸಲಹೆಗಾರ ಎಸ್ಸಾಮ್ ಅಲ್ ಹದ್ದದ್' ವಾಷಿಂಗ್ಟನ್ ಗೆ ತಮ್ಮ ನಿಲುವು ಸ್ಪಷ್ಟಪಡಿಸಿದರು. ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮತ್ತು ಅಧಿಕಾರಿಗಳ ಜೊತೆ ದೂರವಾಣಿಯಲ್ಲಿ ಮಾತನಾಡಿ ಮರಳಿ ಬಂದ ಅವರು, 'ಇನ್ನೂ ಒಂದು ಗಂಟೆಯಲ್ಲಿ ನಿಮ್ಮ ಪದಚ್ಯುತಿ ಆಗಲಿದೆ ಎಂದು ಮದರ್ ತಿಳಿಸಿದ್ದಾರೆ' ಎಂದು ಅಧ್ಯಕ್ಷರ ಕಿವಿಯಲ್ಲಿ ಪಿಸುಗುಟ್ಟಿದರು."(21) ಈಜಿಪ್ಟಿನ ಅಧ್ಯಕ್ಷ ಹೊನ್ನೆ

ಮುಭಾರಕ್ ವಿರುದ್ಧ ದಂಗೆಯೆದ್ದು, ಪದಚ್ಯುತಗೊಳಿಸಿ ಪ್ರಜಾತಂತ್ರದ ಅಡಿಯಲ್ಲಿ ಹೊಸ ಸರ್ಕಾರ ರಚನೆಯಾಯಿತು. ಹೊಸ ಅಧ್ಯಕ್ಷರ ನೇಮಕವಾಗಿ ವರ್ಷ ಕಳೆದಿದೆ ಅಷ್ಟೇ ಮತ್ತೆ ಈಜಿಪ್ಟನಲ್ಲಿ ದಂಗೆಯ ಬಿರುಗಾಳಿ ಕಳೆದ ಕೆಲವು ದಿನಗಳ ಹಿಂದೆ ಪ್ರಾರಂಭವಾಯಿತು. ನಂತರ ಅಧ್ಯಕ್ಷರ ಪದಚ್ಯುತಿಯು ನಡೆದೇ ಹೋಯಿತು. ದೂರದರ್ಶನದಲ್ಲಿ ಬಿತ್ತರಿಸಿದ ಸುದ್ದಿ ಎಲ್ಲ ಹರಡಿ ಜನಸಾಮಾನ್ಯನಿಗೆ ತಿಳಿದು ಹೋಯಿತು. ಆದರೆ ದಂಗೆ ಏಳಲು ಕಾರಣವೇನು? ಎಂಬ ಜನಸಾಮಾನ್ಯನ ಬಳಿಗೆ ತಲುಪುವುದು ಅಸಾಧ್ಯ. ಕಳೆದ ವರ್ಷವಷ್ಟೇ ಸರ್ವಾಧಿಕಾರಿಯನ್ನು ಪದಚ್ಯುತಗೊಳಿಸಿದ ಜನತೆ, ತಾವೇ ಆರಿಸಿದ ಅಧ್ಯಕ್ಷನನ್ನು ಪದಚ್ಯುತಗೊಳಿಸುವುದೆಂದರೆ ಆಶ್ಚರ್ಯವಾಗುತ್ತದೆ. ಆದರೆ ಅಮೆರಿಕಾದ ಹಸ್ತಕ್ಷೇಪ ಇಲ್ಲೂ ಕೂಡ ತನ್ನ ಕಾರ್ಯವನ್ನು ಸಾಧಿಸಿರುವುದು ಈ ಮೇಲಿನ ಉದಾಹರಣೆಯೊಂದಿಗೆ ಮನವರಿಕೆ ಆಗುತ್ತದೆ. 'ಮದರ್' ಎಂದರೆ ತಾಯಿ. ಈ ತಾಯಿಗೆ ಜಗತ್ತಿನಲ್ಲಿ ಮಹತ್ತರವಾದ ಸ್ಥಾನವಿದೆ. ಮೊದಲ ಸ್ಥಾನವನ್ನು ನೀಡಿ ಗೌರವಿಸುವುದು ತಿಳಿದಿರುವ ವಿಷಯ ಅಮೆರಿಕಾವನ್ನು ಮದ್ಯಪ್ರಾಚ್ಯ ರಾಷ್ಟ್ರಗಳು 'ಮದರ್' ಎಂದು ಕರೆಯುವುದು 'ಅಮ್ಮ' ಹೆಸರಿಗೆ ಮಾಡಿದ ಅವಮಾನವಾಗುತ್ತದೆ. ಅಮೆರಿಕ ಯಾವತ್ತು ಕೂಡ ಅಮ್ಮನ ರೀತಿಯ ವಾತ್ಸಲ್ಯ, ಆರೈಕೆ, ಪ್ರೀತಿಯನ್ನು ಇತರೆ ರಾಷ್ಟ್ರಗಳ ನೀಡಲು ಸಾಧ್ಯವಿಲ್ಲ. ಮಲತಾಯಿ ಆಗಲು ಕೂಡ ಅರ್ಹತೆ ಇಲ್ಲದ ರಾಷ್ಟ್ರ ಅಮೆರಿಕ. ಇಂತಹ ರಾಷ್ಟ್ರ ಇಂದು ಅನೇಕ ರಾಷ್ಟ್ರಗಳ ಕಲಹಗಳಿಗೆ, ರಾಷ್ಟ್ರಗಳಲ್ಲಿನ ವೈಯಕ್ತಿಕ ಸಮಸ್ಯಗಳಲ್ಲೂ ಕೂಡ ಮೂಗು ತೂರಿಸುವುದೆಂದರೆ ಹೀದೆಯೂ ಅಮೆರಿಕ ರಾಷ್ಟ್ರದ ಹಸ್ತಕ್ಷೇಪ ಯಾವ ರೀತಿಯಿಂದ ಎಂದು ಊಹಿಸಬಹುದಾಗಿದೆ. ಆದ್ದರಿಂದಲೇ ಕ್ಯೂಬಾ ದೇಶವು ಒಂದು ಪಕ್ಷವನ್ನು ಮಾತ್ರ ಕಟ್ಟಿಕೊಂಡಿದೆ. ಹಲವಾರು ಶತಮಾನಗಳ ನಂತರ ಸ್ವಾತಂತ್ರ್ಯವನ್ನು ಪಡೆದಿರುವ ಕ್ಯೂಬಾ ಯಾವುದೇ ಕಾರಣಕ್ಕೂ ಅಮೆರಿಕ ದೇಶಕ್ಕೆ ತನ್ನ ಮೇಲೆ ಹಿಡಿತ ಸಾಧಿಸಲು ಬಿಟ್ಟು ಕೊಡದೆ ಕಾಪಾಡಿಕೊಂಡು ಹೋಗುತ್ತದೆ. "ಕ್ಯೂಬಾದಲ್ಲಿ ಅಭಿಪ್ರಾಯ ಭೇದ ಇದೆ ಎಂದರೆ ಸಾಕು ಅಮೆರಿಕಾದ ಕೆಲಸ ಸಲೀಸು".(22) ಆದ್ದರಿಂದ ಯಾವುದೇ ಅಭಿಪ್ರಾಯಗಳಲ್ಲಿ ನಿರ್ಣಯಗಳಲ್ಲಿ ಬೇದ ಬಾರದ ರೀತಿಯಲ್ಲಿ ದೇಶವನ್ನು ಕಾಪಾಡಿಕೊಂಡು ಬರುತ್ತಿದ್ದಾರೆ.

ಸಮೂಹ ಮಾಧ್ಯಮ ಜನರ ಬಳಿಗೆ ಸುದ್ದಿಯನ್ನು ಅತಿ ವೇಗವಾಗಿ ಮುಟ್ಟಿಸುವ ವಾಹಕ. ಮಾಧ್ಯಮದಲ್ಲಿ ಬಿತ್ತರಿಸಿದ ಸುದ್ದಿ ಎಲ್ಲವೂ ಪ್ರತಿಶತ ನೂರಕ್ಕೆ ನೂರರಷ್ಟು ಸತ್ಯ ಎಂದು ಎಲ್ಲರ ನಂಬಿಕೆ. ಸತ್ಯವೇ ಇರಬೇಕಾದದ್ದು. ಆದರೆ ಸಮೂಹ ಮಾಧ್ಯಮದಲ್ಲೂ ಕೂಡ ಭ್ರಷ್ಟತೆ, ಸ್ವಾರ್ಥ, ಸ್ವಜನಪಕ್ಷಪಾತ ತಲೆದೂರಿದೆ. ರಾಜಕೀಯ ಪಕ್ಷಗಳು ತಮ್ಮ ಪಕ್ಷದ ಪ್ರಚಾರಕ್ಕಾಗಿ ಸ್ವಂತ ಖಾಸಗಿ ದೂರದರ್ಶನದ ಚಾನಲ್‌ಗಳನ್ನು ಪ್ರಾರಂಭಿಸಿಕೊಂಡಿವೆ. ಇವುಗಳು ಪ್ರಾದೇಶಿಕ ಮತ್ತು ರಾಷ್ಟ್ರೀಯ ಮಟ್ಟದಿಂದ

ಂತರಾಷ್ಟ್ರೀಯ ಮಟ್ಟದವರೆಗೂ ವ್ಯಾಪ್ತಿಯನ್ನು ಹೊಂದಿದೆ. 'ಫಿಡೆಲ್ ಕ್ಯಾಸ್ಟ್ರೋ' ಕ್ಯೂಬಾ ದೇಶವನ್ನು ತ್ಯಂತ ಸಮರ್ಥವಾಗಿ ಕಟ್ಟುತ್ತಾ, ಅಮೆರಿಕ ದೇಶಕ್ಕೆ 'ಕವಡೆ ಕಾಸಿನ ಕಿಮತ್ತು' ನೀಡದಿದ್ದಾಗ ಅದು ಮೂಹ ಮಾಧ್ಯಮವನ್ನು ತನ್ನ ಪರವಾಗಿ ಬಳಸಿಕೊಂಡಿದ್ದು, ತನ್ನ ವಿರೋಧಿಗಳು ಂದುಕೊಂಡಿರುವವರ ತೇಜೋವಧೆ ಮಾಡುವಂತಹ ನೀಚ ಕಾರ್ಯಕ್ಕೂ ಕೈ ಹಾಕಿತು. "ಕುದುರೆ ಂಡಾಗ ಕಾಲು ನೋವು ಭಾರತದ ಪತ್ರಿಕೆಗಳಿಗೆ ಮಾತ್ರವಲ್ಲ ಅಮೆರಿಕಾದ ಪತ್ರಿಕೆಗಳಿಗೂ ಯಶಸ್ವಿಯಾಗಿ ವಾನಿಸಲಾಗಿದೆ. ಪತ್ರಿಕೆಯ ಅಂಗಳಕ್ಕೆ ಬೇಕಾದಷ್ಟು ಸುದ್ದಿಯನ್ನು ಕನಿಷ್ಠ ಬೆಲೆಗೆ ಕೊಡುವುದಾದರೆ ಯಾರಿಗೆ ಬೇಡ? ಅರೆಕಾಸಿಗೆ ಬೇಕಾದಷ್ಟು ಮಜ್ಜಿಗೆ ಈ ಅರೆಕಾಸಿನ ಸುದ್ದಿಗಳ ಪರಿಣಾಮ ಏನು ಂಬುದು 'ಪತ್ರಿಕಾ ಉದ್ಯಮ'ಕ್ಕೆ ಬೇಕಿಲ್ಲದ ಸಂಗತಿ ಮೈನೋಯಿಸಕೊಳ್ಳದೇ ಲಾಭವಾಗುವುದಾದರೆ ಕಣ್ಣು ಮುಚ್ಚಿಕೊಂಡು ಹಾಲು ಕುಡಿಯುವುದು ಬೆಕ್ಕಿಗೆ ಮಾತ್ರ ಗೊತ್ತಿರುವ ಕಲೆಯೇನು?"(23) ಅನೇಕ ಾಜಕೀಯ ಪಕ್ಷಗಳು ಮತ್ತು ರಾಷ್ಟ್ರಗಳ ತಮ್ಮ ಸ್ವಹಿತಾಸಕ್ತಿಗಾಗಿ ಸಮೂಹ ಮಾಧ್ಯಮವನ್ನು ತನ್ನ ಗೊಂಬೆಯನ್ನಾಗಿಸಿಕೊಂಡಿವೆ. ಮಾಧ್ಯಮದ ಪಾತ್ರ ಕೂಡ ಸಮಾಜಕ್ಕೆ ಬಹಳ ಪ್ರಾಮುಖ್ಯವಾದದ್ದು. ಂವಿಧಾನದಲ್ಲಿ ಒಂದು ಆಡಳಿತ ಪಕ್ಷವಾಗಿದ್ದು, ಅದು ಸರಿಯಾದ ದಾರಿಯಲ್ಲಿ ನಡೆಯುತ್ತಿದೆಯಾ ಲ್ಲವೋ ಎಂದು ನೋಡಿಕೊಳ್ಳಲು ವಿರೋಧ ಪಕ್ಷವಿರುತ್ತದೆ. ಹಾಗೆಯೇ ಮಾಧ್ಯಮಗಳೂ ಸಹ ಮಾಜಮುಖಿಯಾಗಿದ್ದು, ಸರ್ಕಾರಗಳ ಆಡಳಿತವನ್ನು ವಿಮರ್ಶಿಸುವ, ಜನ ಸಾಮಾನ್ಯರ ಬಳಿ ಂಡೊಯ್ಯುವ, ಸಮಾಜದಲ್ಲಿ ಜಾಗೃತಿಯನ್ನು ಮೂಡಿಸುವ, ಸರ್ಕಾರಕ್ಕೆ ಸಲಹೆಗಳನ್ನು ನೀಡುವ ಟ್ಟಿನಲ್ಲಿ ಕಾರ್ಯನಿರ್ವಹಿಸುವಂತಹ ಮಾಧ್ಯಮವಾಗಬೇಕಾದ ಅನಿವಾರ್ಯತೆ ಇದೆ.

ಕ್ಯೂಬಾದ ಜನ ಅಮೆರಿಕಾದ ಯಾವುದೇ ಷಡ್ಯಂತ್ರಗಳಿಗೆ ಬಲಿಯಾಗದೆ, ತಮ್ಮ ನಾಯಕ 'ಫಿಡೆಲ್ ್ಯಾಸ್ಟ್ರೋ'ನ ಬೆಂಬಲಿಸುತ್ತಿದ್ದಾರೆಂದರೆ 'ಫಿಡೆಲ್ ಕ್ಯಾಸ್ಟ್ರೋ'ನ ನಿಸ್ವಾರ್ಥದಿಂದ ತುಂಬಿದ ಆದರ್ಶಗಳು ುತ್ತೊಂದು ಕ್ರಾಂತಿಕಾರಿ 'ಚೆಗೆವಾರ'ನ ನುಡಿಮುತ್ತುಗಳು ಜಗತ್ತಿನ ಯುವಕರನ್ನು ಹುಚ್ಚೆಬ್ಬಿಸಿದವು. ಗೆವಾರ ಯಾವತ್ತು ಕೂಡ ಆತ್ಮಾಭಿಮಾನವನ್ನು ಮಾರಿಕೊಳ್ಳುವವರನ್ನು ಪ್ರೀತಿಸಲು ಇಷ್ಟಪಡಲಿಲ್ಲ. ಎಲ್ಲಿ ನ್ಯಾಯವಿದೆಯೋ ಅಲ್ಲಿ ಪ್ರತಿಭಟಿಸುವವರು ಅವನ ಸಂಗಾತಿಗಳು ಎಂದ. "ಸಿಡಿದೆದ್ದರೆ ನೀನು ನನ್ನ ಂಗಾತಿ ಎಂದ 'ಚೆ'"(24) ಅನ್ಯಾಯ ವಿರುದ್ಧ ಸಿಡಿದೇಳುವಂತಹ ನಾಯಕರನ್ನು ತನ್ನ ದೇಶಕ್ಕೆ ಸಂದೇಶ ೊಡುವುದರ ಮೂಲಕ ನೇಮಿಸಿ ಕ್ಯೂಬಾ ದೇಶದ ಜನರಲ್ಲಿ ಮಾತ್ರವಲ್ಲ ವಸಾಹತು ಶಾಹಿಗೆ ಒಳಪಟ್ಟ ಬ್ಬಾಳಿಕೆಗೆ ಒಳಗಾದ ಪ್ರತಿಯೊಂದು ದೇಶದ ನಾಯಕನಾಗಿ ಮಾರ್ಗದರ್ಶಕನಾಗಿ ಚೆಗೆವಾರ ುಣಿಸಿಕೊಳ್ಳುತ್ತಾನೆ.

ಟಿಪ್ಪಣಿಗಳು :

1) ನೇಮಿಚಂದ್ರ, ಪೆರುವಿನ ಪವಿತ್ರ ಕಣಿವೆಯಲ್ಲಿ, ನವ ಕರ್ನಾಟಕ ಪ್ರಕಾಶನ ನಲ್ಕನೇ ಮುದ್ರಣ:2010 ಪುಟ –16
2) ನೇಮಿಚಂದ್ರ, ಪೆರುವಿನ ಪವಿತ್ರ ಕಣಿವೆಯಲ್ಲಿ, ನವ ಕರ್ನಾಟಕ ಪ್ರಕಾಶನ ನಲ್ಕನೇ ಮುದ್ರಣ:2010 ಪುಟ –20
3) ನೇಮಿಚಂದ್ರ, ಪೆರುವಿನ ಪವಿತ್ರ ಕಣಿವೆಯಲ್ಲಿ, ನವ ಕರ್ನಾಟಕ ಪ್ರಕಾಶನ ನಲ್ಕನೇ ಮುದ್ರಣ:2010 ಪುಟ –43
4) ನೇಮಿಚಂದ್ರ, ಪೆರುವಿನ ಪವಿತ್ರ ಕಣಿವೆಯಲ್ಲಿ, ನವ ಕರ್ನಾಟಕ ಪ್ರಕಾಶನ ನಲ್ಕನೇ ಮುದ್ರಣ:2010 ಪುಟ –50
5) ನೇಮಿಚಂದ್ರ, ಪೆರುವಿನ ಪವಿತ್ರ ಕಣಿವೆಯಲ್ಲಿ, ನವ ಕರ್ನಾಟಕ ಪ್ರಕಾಶನ ನಲ್ಕನೇ ಮುದ್ರಣ:2010 ಪುಟ –23
6) ನೇಮಿಚಂದ್ರ, ಪೆರುವಿನ ಪವಿತ್ರ ಕಣಿವೆಯಲ್ಲಿ, ನವ ಕರ್ನಾಟಕ ಪ್ರಕಾಶನ ನಲ್ಕನೇ ಮುದ್ರಣ:2010 ಪುಟ –54
7) ನೇಮಿಚಂದ್ರ, ಪೆರುವಿನ ಪವಿತ್ರ ಕಣಿವೆಯಲ್ಲಿ, ನವ ಕರ್ನಾಟಕ ಪ್ರಕಾಶನ ನಲ್ಕನೇ ಮುದ್ರಣ:2010 ಪುಟ –29
8) ನೇಮಿಚಂದ್ರ, ಪೆರುವಿನ ಪವಿತ್ರ ಕಣಿವೆಯಲ್ಲಿ, ನವ ಕರ್ನಾಟಕ ಪ್ರಕಾಶನ ನಲ್ಕನೇ ಮುದ್ರಣ:2010 ಪುಟ –30
9) ನೇಮಿಚಂದ್ರ, ಪೆರುವಿನ ಪವಿತ್ರ ಕಣಿವೆಯಲ್ಲಿ, ನವ ಕರ್ನಾಟಕ ಪ್ರಕಾಶನ ನಲ್ಕನೇ ಮುದ್ರಣ:2010 ಪುಟ –30
10) ನೇಮಿಚಂದ್ರ, ಪೆರುವಿನ ಪವಿತ್ರ ಕಣಿವೆಯಲ್ಲಿ, ನವ ಕರ್ನಾಟಕ ಪ್ರಕಾಶನ ನಲ್ಕನೇ ಮುದ್ರಣ:2010 ಪುಟ –38
11) ನೇಮಿಚಂದ್ರ, ಪೆರುವಿನ ಪವಿತ್ರ ಕಣಿವೆಯಲ್ಲಿ, ನವ ಕರ್ನಾಟಕ ಪ್ರಕಾಶನ ನಲ್ಕನೇ ಮುದ್ರಣ:2010 ಪುಟ –41
12) ನೇಮಿಚಂದ್ರ, ಪೆರುವಿನ ಪವಿತ್ರ ಕಣಿವೆಯಲ್ಲಿ, ನವ ಕರ್ನಾಟಕ ಪ್ರಕಾಶನ ನಲ್ಕನೇ ಮುದ್ರಣ:2010 ಪುಟ –119

13) ಜಿ.ಎನ್.ಮೋಹನ್, 'ನನ್ನೊಳಗಿನ ಹಾಡು ಕ್ಯೂಬಾ' ಲೋಹಿಯಾ ಪ್ರಕಾಶನ ಬಳ್ಳಾರಿ ಮೂರನೇ ಮುದ್ರಣಾ 2009. ಪುಟ – 12

14) ಜಿ.ಎನ್.ಮೋಹನ್, 'ನನ್ನೊಳಗಿನ ಹಾಡು ಕ್ಯೂಬಾ' ಲೋಹಿಯಾ ಪ್ರಕಾಶನ ಬಳ್ಳಾರಿ ಮೂರನೇ ಮುದ್ರಣಾ 2009. ಪುಟ – 13

15) ಜಿ.ಎನ್.ಮೋಹನ್, 'ನನ್ನೊಳಗಿನ ಹಾಡು ಕ್ಯೂಬಾ' ಲೋಹಿಯಾ ಪ್ರಕಾಶನ ಬಳ್ಳಾರಿ ಮೂರನೇ ಮುದ್ರಣಾ 2009. ಪುಟ – 22

16) ರಹಮತ್ ತರೀಕೆರೆ, 'ಪ್ರತಿ ಸಂಸ್ಕೃತಿ' ಅಭಿನವ ಪ್ರಕಾಶನ ಬೆಂಗಳೂರು ಎರಡನೇ ಮುದ್ರಣ 2009. ಪುಟ – 1

17) ಜಿ.ಎನ್.ಮೋಹನ್, 'ನನ್ನೊಳಗಿನ ಹಾಡು ಕ್ಯೂಬಾ' ಲೋಹಿಯಾ ಪ್ರಕಾಶನ ಬಳ್ಳಾರಿ ಮೂರನೇ ಮುದ್ರಣಾ 2009. ಪುಟ – 83

18) ಜಿ.ಎನ್.ಮೋಹನ್, 'ನನ್ನೊಳಗಿನ ಹಾಡು ಕ್ಯೂಬಾ' ಲೋಹಿಯಾ ಪ್ರಕಾಶನ ಬಳ್ಳಾರಿ ಮೂರನೇ ಮುದ್ರಣಾ 2009. ಪುಟ – 62

19) ಜಿ.ಎನ್.ಮೋಹನ್, 'ನನ್ನೊಳಗಿನ ಹಾಡು ಕ್ಯೂಬಾ' ಲೋಹಿಯಾ ಪ್ರಕಾಶನ ಬಳ್ಳಾರಿ ಮೂರನೇ ಮುದ್ರಣಾ 2009. ಪುಟ – 63

20) ಜಿ.ಎನ್.ಮೋಹನ್, 'ನನ್ನೊಳಗಿನ ಹಾಡು ಕ್ಯೂಬಾ' ಲೋಹಿಯಾ ಪ್ರಕಾಶನ ಬಳ್ಳಾರಿ ಮೂರನೇ ಮುದ್ರಣಾ 2009. ಪುಟ – 66

21) ಡೇವಿಡ್ ಡಿ ಕಿರ್ಕ್ ಪ್ಯಾಟ್ರಿಕ್ / ಮೆಯೀ ಎಲ್ ಶೇಖ್, (ದಿ ನ್ಯೂಯಾರ್ಕ್ ಟೈಮ್ಸ್) ಪ್ರಜಾವಾಣಿ 'ವಿದ್ಯಾಮಾನ' ಭಾನುವಾರ 14 ಜುಲೈ 2013

22) ಜಿ.ಎನ್.ಮೋಹನ್, 'ನನ್ನೊಳಗಿನ ಹಾಡು ಕ್ಯೂಬಾ' ಲೋಹಿಯಾ ಪ್ರಕಾಶನ ಬಳ್ಳಾರಿ ಮೂರನೇ ಮುದ್ರಣಾ 2009. ಪುಟ – 86

23) ಜಿ.ಎನ್.ಮೋಹನ್, 'ನನ್ನೊಳಗಿನ ಹಾಡು ಕ್ಯೂಬಾ' ಲೋಹಿಯಾ ಪ್ರಕಾಶನ ಬಳ್ಳಾರಿ ಮೂರನೇ ಮುದ್ರಣಾ 2009. ಪುಟ – 101

24) ಜಿ.ಎನ್.ಮೋಹನ್, 'ನನ್ನೊಳಗಿನ ಹಾಡು ಕ್ಯೂಬಾ' ಲೋಹಿಯಾ ಪ್ರಕಾಶನ ಬಳ್ಳಾರಿ ಮೂರನೇ ಮುದ್ರಣಾ 2009. ಪುಟ – 116

ಅಧ್ಯಾಯ–4 ಸಾಂಸ್ಕೃತಿಕ ಇತಿಹಾಸವನ್ನು ಗುರುತಿಸುವ ಆಯಾಮ

ಸಂಸ್ಕೃತಿಯನ್ನು ಕುರಿತ ಚರ್ಚೆಗಳು ಅಕಾಡೆಮಿಕ್ ವಲಯದಿಂದ ಪ್ರಾರಂಭವಾಗಿ ಾಜಕಾರಣದವರೆಗೂ ಅದು ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಸಂಸ್ಕೃತಿಗೆ ಸಂಬಂಧದಂತೆ ಾನಪದೀಯವಾಗಿ, ಜನಾಂಗಿಕವಾಗಿ, ಧಾರ್ಮಿಕವಾಗಿ ಇನ್ನೂ ಹಲವು ಅಧ್ಯಯನ ಶಿಸ್ತುಗಳಲ್ಲಿ ಂಸ್ಕೃತಿಯ ಅಧ್ಯಯನಗಳು ಪ್ರಚಲಿತದಲ್ಲಿವೆ. ಸಂಸ್ಕೃತಿಯ ಅಧ್ಯಯನಕ್ಕೆ ಸೃಜನಶೀಲ ಸಾಹಿತ್ಯ ೂಪಗಳಾದ ಕಾದಂಬರಿ, ಕಥೆ, ನಾಟಕ, ಕಾವ್ಯ ಪೂರಕವಾಗಿವೆ. ಹಾಗೆಯೇ ಇತ್ತೀಚೆಗೆ ಕೆನಡ ಪ್ರವಾಸ ಥನಗಳು ಕೂಡ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದ್ದು ಸಂಸ್ಕೃತಿಯನ್ನು ಪರಿಚಯಿಸುವ ವಿಶ್ಲೇಷಿಸುವ ಂಶಗಳನ್ನು ಒಳಗೊಂಡಿರುವುದರಿಂದ ಸಾಂಸ್ಕೃತಿಕವಾಗಿ ಮಹತ್ವವನ್ನು ಪಡೆದುಕೊಂಡಿದೆ. ನನ್ನ ಧ್ಯಯನ ವ್ಯಾಪ್ತಿಗೆ ವಿ.ಸೀ. ಅವರ 'ಪಂಪಾಯಾತ್ರೆ' ಮತ್ತು ಡಾ.ಶಿವರಾಮ ಕಾರಂತರ 'ಅರಸಿಕರಲ್ಲ' ಈ ರಡು ಕಥನಗಳನ್ನು ಆಯ್ದುಕೊಂಡಿದ್ದೇನೆ.

ಮಹಾಭಾರತದ ಸಭಾಪರ್ವ (ಮತ್ತು ಭೀಷ್ಮಪರ್ವಗಳಲ್ಲಿ 'ಕರ್ಣಾಟ' ಎಂಬ ಪದ ಳಕೆಯಾಗಿದ್ದು ಕರ್ನಾಟಕ ಪ್ರಾಚೀನತೆಯನ್ನಿ ತಿಳಿಸುತ್ತದೆ.) ಹದಿನಾಲ್ಕನೇ ಶತಮಾನದಲ್ಲಿ ವಿದ್ಯಾರಣ್ಯ ುರುಗಳ ಮಾರ್ಗದರ್ಶನದಲ್ಲಿ ಹರಿಹರ ಮತ್ತು ಬುಕ್ಕರಾಯನಿಂದ ವಿಜಯನಗರ ಸಾಮ್ರಾಜ್ಯವು ್ಥಾಪನೆಯಾಯಿತು. ವಿಜಯನಗರ ಸಾಮ್ರಾಜ್ಯವು ದಕ್ಷಿಣ ಭಾರತದಲ್ಲಿ ಅತ್ಯಂತ ಪ್ರಬಲ ಸಾಮ್ರಾಜ್ಯವಾಗಿ ನರ ಬದುಕಿಗೆ ಆಶಾಕಿರಣವಾಯಿತು. ಮುಸ್ಲಿಮ್ಮರ ದಾಳಿಗಳಿಂದ ತತ್ತರಿಸಿಹೋಗಿದ್ದ ಹಾಗೂ ಆಂತರಿಕ ಲಭೆಗಳಿಂದು ಭದ್ರವಾಗಿದ್ದ ಸಮಾಜಕ್ಕೆ ಶಾಂತಿ ಮತ್ತು ಸುವ್ಯವಸ್ಥೆಯನ್ನು ನೀಡಿ ಹೊಸ ಜನತೆ ಹೊಸ ಕ್ತಿಯನ್ನು ಬದುಕನ್ನೂ ನೀಡಿತು. ಅತ್ಯಂತ ಕಡಿಮೆ ಅವಧಿಯಲ್ಲಿ ತನ್ನ ಸಾಮ್ರಾಜ್ಯವನ್ನು ಸ್ತರಿಸಿಕೊಂಡಿತು. ಹರಿಹರ ಮತ್ತು ಬುಕ್ಕರಾಯರ ಸ್ಥಾಪಿತವಾದ ಸಾಮ್ರಾಜ್ಯದ ರಾಜಧಾನಿ ಹಂಪಿಯು ಂಸ್ಕೃತಿಕವಾಗಿಯೂ ಪ್ರಸಿದ್ಧಿಯನ್ನು ಪಡೆಯಿತು. ಕರ್ನಾಟಕದ ಸಂಸ್ಕೃತಿಗೆ ವಿಜಯನಗರವು ಳಿಸಲಾಗದ ಕೊಡುಗೆಯನ್ನು ನೀಡಿತು. ಸುಂದರವಾದ, ವ್ಯವಸ್ಥಿತವಾದ ನಗರಗಳನ್ನು ನಿರ್ಮಾಣ ಾಡಿದರು. ಕೇವಲ ಸಾಮ್ರಾಜ್ಯ ವಿಸ್ತಾರ, ಯುದ್ಧಗಳಿಗಷ್ಟೇ ಅಲ್ಲದೇ ಕಲೆ ಮತ್ತು ಸಾಹಿತ್ಯವನ್ನು ಸಾಮ್ರಾಜ್ಯ ಳೆಸಿದ ರೀತಿಯಲ್ಲಿ ಉತ್ತುಂಗ ಮಟ್ಟಕ್ಕೆ ಏರಿಸಿದರು. ಶಿಕ್ಷಣ, ಕೃಷಿ, ಕೈಗಾರಿಕೆ ವ್ಯಾಪಕವಾದ ಪ್ರಮಾಣದಲ್ಲಿ ಗತಿಯನ್ನು ಕಂಡಿತು. ಕರ್ನಾಟಕದ ಸಂಸ್ಕೃತಿಯನ್ನು, ಹಿಂದೂ ಧರ್ಮವನ್ನು ಪರಕೀಯರ ದಾಳಿಗಳಿಂದ

ಕ್ಷಿಸುವುದರ ಜೊತೆಗೆ ಸರ್ವಧರ್ಮದವರನ್ನು ಗೌರವದಿಂದ ಕಾಣುತ್ತಾ ಸಮಾಜದಲ್ಲಿ ಐಕ್ಯತೆಯನ್ನು ಸ್ಥಾಪಿಸಿದರು.

ಕೃಷ್ಣದೇವರಾಯನ ಕಾಲದಲ್ಲಿ ಮಂದಿರಗಳಿಂದ ನಗರದ ಅಲಂಕಾರಗಳು ಮೆರುಗು ಪಡೆದವು. ಅರಮನೆಯು ವರ್ಣಚಿತ್ರಗಳಿಂದ, ನೃತ್ಯಭಾವಗಳಿಂದ ಆಕರ್ಷಿತವಾಗಿದ್ದವು. ಹೀಗೆ ಎರಡು– ಮೂರು ಶತಮಾನಗಳ ಕಾಲ ಕರ್ನಾಟಕದ ಇತಿಹಾಸದಲ್ಲಿ 'ಸುವರ್ಣಯುಗ'ವನ್ನು ಕಂಡಂತಹ ಸಾಮ್ರಾಜ್ಯ ಪತನ ಹೊಂದಿದ್ದು ದುರಾದೃಷ್ಟಕರ. ಇಂತಹ ವೈಭೋಗವನ್ನು ಕಂಡ ಸಾಮ್ರಾಜ್ಯ ಹಾಳು ಹಂಪೆಯಾಗಿ ಕಾಣುತ್ತಿದೆ. ಇಂತಹ ನಾಡಿಗೆ ಪ್ರವಾಸ ಹೋದ ಪಿ.ಸೀ. ಅವರು ತಮ್ಮ 'ಪಂಪಾಯಾತ್ರೆ' ಪ್ರವಾಸ ಕಥನದಲ್ಲಿ ತಮ್ಮ ಸಮಕಾಲೀನ ಪರಿಸ್ಥಿತಿಯನ್ನು ನೋಡಿ ಮರುಕ ಪಡುತ್ತಾ, ಗತವೈಭವದಲ್ಲಿ ಕರ್ನಾಟಕದ ಸಾಂಸ್ಕೃತಿಕ ನೋಟವನ್ನು ಕಾಣುತ್ತಾರೆ. ಕರ್ನಾಟಕ ಸಂಸ್ಕೃತಿಯನ್ನು ಒಟ್ಟಾಗಿ ಕಂಡರೂ ಪ್ರಾದೇಶಿಕವಾಗಿ ಮೈಸೂರು, ಧಾರವಾಡ, ಗುಲ್ಬರ್ಗ, ರಾಯಚೂರು, ಕರಾವಳಿ ಹೀಗೆ ಅನೇಕ ಸಂಸ್ಕೃತಿಗಳಾಗಿ ಒಡಲೊಡೆಯುತ್ತದೆ. ಹೀಗೆ ಪರಸ್ಪರ ಒಂದಕ್ಕೊಂದು ಸಂಬಂಧವಿಲ್ಲವೆನ್ನುವ ರೀತಿಯಲ್ಲಿ ಕಾಣಲಾಗುತ್ತದೆ. ಹಾಗೆಯೇ ನೆಲ, ಜಲ, ಭಾಷೆ ಇವುಗಳ ಪ್ರಸ್ತಾಪದ ಸಂದರ್ಭದಲ್ಲಿಯೂ ನಮ್ಮ ರಾಜ್ಯದ ಜನತೆ ತಲೆಕೆಡಿಸಿಕೊಳ್ಳುವುದಿಲ್ಲ. ಹಿಂದಿನಿಂದ ಇಂದಿನವರೆಗೂ ಐಕ್ಯತೆಯನ್ನು ಕಾಣಲಾಗುತ್ತಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುವಂತಹ ಸಂದರ್ಭದಲ್ಲೇ ತಮ್ಮ ತಮ್ಮ ಭಾಷಿಕ ಪ್ರಾಂತ್ಯಗಳನ್ನು, ನಾಡನ್ನು ಕಟ್ಟಿಕೊಳ್ಳುವಂತಹ ಕಾರ್ಯವನ್ನು ಪಶ್ಚಿಮ ಬಂಗಾಲ, ಮಹಾರಾಷ್ಟ್ರ, ಆಂದ್ರಪ್ರದೇಶ, ತಮಿಳುನಾಡು ಇನ್ನಿತರ ರಾಜ್ಯಗಳ ಹೋರಾಟಗಾರರು ಹೋರಾಟವನ್ನು ಪ್ರಾರಂಭಿಸಿದರು. ಆದರೆ ಈ ವಿಷಯದಲ್ಲಿ ಕರ್ನಾಟಕದಲ್ಲಿ ನಿರಾಶೆಯ ಪ್ರತಿಕ್ರಿಯೆ ವ್ಯಕ್ತವಾಗಿತ್ತು. "ಕರ್ನಾಟಕತ್ವವು ನಿರಾಶೆಯ ವಾತಾವರಣದಲ್ಲಿ ಹುಟ್ಟಿ ನಿರಾಶೆಯ ವಾತಾವರಣದಲ್ಲಿ ಬೆಳೆಯಿತು"(1) ಈ ನಿರಾಶೆಯಿಂದ ಹೊರ ಬರಲು ಕರ್ನಾಟಕದ ಗತ ವೈಭವವಾದ ವಿಜಯನಗರ ಸಾಮ್ರಾಜ್ಯದ ನೆರವು ಪಡೆಯಲೇಬೇಕಾಯಿತು.

ಬ್ರಿಟಿಷರು ಭಾರತಕ್ಕೆ ಬಂದು ಆಡಳಿತ ನಡೆಸಲು ಪ್ರಾರಂಭಿಸಿದ ಮೇಲೆ ಹಲವಾರು ಜನ ತಮ್ಮ ದೇಸೀಯತೆಯನ್ನು ಮರೆತು ಬಿಟ್ಟರು. ಇಂಗ್ಲಿಷ್ (ಬ್ರಿಟಿಷರ) ಶಿಕ್ಷಣ ನೀತಿ ಭಾರತ ದೇಶದಲ್ಲಿ ಜಾರಿಗೆ ಬಂದ ನಂತರ ದೇಸಿ ಭಾಷೆಯನ್ನು ಮರೆತು ಬಿಟ್ಟರು. ಇವತ್ತಿಗೂ ಕೂಡ ಕೆಲವರ ಬಾಯಿಯಲ್ಲಿ ಇಂಗ್ಲೀಷರ ಕಾಲದ ಆಡಳಿತ ಚೆನ್ನಾಗಿತ್ತು ಎನ್ನುವ ಉದ್ಗಾರ ಕೂಡ ಕೇಳುತ್ತಿದ್ದೇವೆ. ಜೊತೆಗೆ ಮುಕ್ತ ವ್ಯಾಪಾರ ಮಾರುಕಟ್ಟೆಯನ್ನು ಬರಮಾಡಿಕೊಂಡಿದ್ದೇವೆ. ವ್ಯಾಪಾರಕ್ಕಾಗಿ ಬಂದ ಬ್ರಿಟಿಷರು ಇಡೀ

ಾರತವನ್ನು ಆಕ್ರಮಿಸಕೊಂಡು ಸ್ಥಳೀಯರನ್ನು ಗುಲಾಮರನ್ನಾಗಿ ಮಾಡಿಕೊಂಡರು. ಇಲ್ಲಿನ ಂಪನ್ಮೂಲವನ್ನು ತಮ್ಮ ದೇಶಕ್ಕೆ ಸಾಗಿಸಿಕೊಂಡರು. ತಮ್ಮ ಧರ್ಮವನ್ನು ಸ್ಥಳೀಯರ ಮೇಲೆ ಹೇರಿದರು. ಟ್ಟಾಗಿ ಇಡೀ ಭಾರತದ ಪರಿವರ್ತನೆಯ ಬಯಕೆ ಅವರಲ್ಲಿ ಮನೆ ಮಾಡಿತು. ಭಾರತದ ಜನರು ಕೇವಲ ಮ್ಮ ಬಣ್ಣದಿಂದ ಭಾರತೀಯರಾಗಿರಬೇಕು. ತನ್ನ ಮನಸ್ಸಿನಿಂದ ಅವರು ಕ್ರೈಸ್ತ ಅಥವಾ ಇಂಗ್ಲೀಷ್ ಾವನಾಗಬೇಕು ಎಂಬ ಪರಿಕಲ್ಪನೆ ಮಾಡಿಕೊಂಡಿದ್ದರು. ಅದಕ್ಕೆ ತಕ್ಕಂತಹ ಶಿಕ್ಷಣ ಪದ್ಧತಿಯನ್ನು ೇರಿದರು. ಹಿಂಧೂ ಧರ್ಮದಲ್ಲಿದ್ದ ಚತುರ್ವರ್ಣ ಪದ್ಧತಿಯ ಲಾಭವನ್ನು ಪಡೆದು ುತಾಂತರಗೊಳಿಸಲು ಸಹ ಪ್ರಾರಂಭಿಸಿದರು. ಇವುಗಳನ್ನು ನೋಡಿದ ಜನಕ್ಕೆ ನಮ್ಮ ರಾಜರುಗಳು ೀಡದಂತಹ ಸ್ವಾತಂತ್ರ್ಯ, ಶಿಕ್ಷಣ, ಹುದ್ದೆ, ಗೌರವಗಳನ್ನು ನೀಡುತ್ತಿದ್ದಾರೆ ಎಂಬ ಭ್ರಮೆಯಲ್ಲಿ ತನ್ನ ಂಸ್ಕೃತಿಯನ್ನು ಮರೆಯಲು ಪ್ರಾರಂಭಿಸಿದರು. "ಕತ್ತಲೆಯಲ್ಲಿ ಜಾಗ್ರತೆ ಜಾಗ್ರತೆಯಾಗಿ ನನ್ನ ಕಡೆಗೆ ಹರಿದು ಪ್ಪಗೆ ಬರುತ್ತಿರುವ ಪ್ರಾಣಿಯೊಂದು ಕಾಣಿಸಿತು. ಚೆನ್ನಯ್ಯನು ನೋಡಿದನು. ಚೇಳೂ ಅಲ್ಲ, ಹಾವೂ ಅಲ್ಲ; ನು. ಸ್ವಾಮಿ ನಿಮಗೇಕೆ ಇಷ್ಟು ಗಾಬರಿ? ಜೇಡರ ಹುಳ ಬಂದರೆ ಹೀಗೆ ಹುಚ್ಚು ಕುಣಿತ ುರುಮಾಡಿದ್ದಿರಲ್ಲ".(2) ಇಲ್ಲಿ ಬರುವ ದೇಸಿಯತೆಯ ಸಾಮ್ರಾಜ್ಯ ವ್ಯಕ್ತಿಗೆ ಚೇಳೂ ಮತ್ತು ಹಾವು ಮಾತ್ರ ್ರಾಣಕ್ಕೆ ಅಪಾಯ ತರುವಂತಹ ಪ್ರಾಣಿಗಳಾಗಿ ಕಾಣಿಸುತ್ತವೆ. ಜೇಡರ ಹುಳ ಯಾವುದೇ ಅಪಾಯ ರುವುದಿಲ್ಲ ಎನ್ನುತ್ತಾರೆ. ಆದರೆ ಜೇಡರ ತನ್ನ ಬಲೆಯಿಂದ ಇತರ ಪ್ರಾಣಿಗಳನ್ನು ಬಂಧನದಲ್ಲಿಟ್ಟುಕೊಂಡು ಾಯಿಸುತ್ತದೆ. ಚೇಳು ಮತ್ತು ಹಾವಿನ ರೀತಿಯಲ್ಲಿ ಬ್ರಿಷಿಟರು ನೇರವಾಗಿ ಯಾರ ಮೇಲೂ ಯುದ್ಧ ಾಡಿಲ್ಲ. ಭಾರತದ ಒಳಜಗಳಗಳನ್ನು ನೋಡಿ ತಮ್ಮ ಕಾರ್ಯಸಾಧನೆಯನ್ನು ಮಾಡಿಕೊಂಡರು. ತಾವು ದ್ದಂತಹ ರಾಜ್ಯದ ಜನರನ್ನು ತಮ್ಮ ಬಲೆಯಲ್ಲಿ ಬಂಧಿಸಿಕೊಂಡು ಹಿಂಸೆ ನೀಡುವ ಮೂಲಕ ಬಲಿ ಗೆದುಕೊಂಡರು. ಏನೂ ಅರಿಯದ ಮುಗ್ಧ ಮನಸ್ಸುಗಳಿಗೆ ಹಿಂದೂ ಧರ್ಮದ ಚತುರ್ವಣ ಪದ್ಧತಿಯ ೀಸತ್ವ ಜನರಿಗೆ ಬ್ರಿಟಿಷರ ಕುತಂತ್ರ ಬುದ್ಧಿ ಯಾವುದೂ ಕೂಡ ಕಾಣಿಸುವಂತದ್ದಲ್ಲ. ಸಾವಿರಾರು ರ್ಷಗಳ ಪುರಾತನ ಸಂಸ್ಕೃತಿಯಾದ ಭಾರತದ ಸಂಸ್ಕೃತಿಯನ್ನು ಯಾರು ಕೂಡ ಅಳಿಸಿ ಹಾಕಲು ಾಧ್ಯವಿಲ್ಲ. ಭಾರತೀಯ ಸಂಸ್ಕೃತಿಯ ಮೇಲೆ ಮುಸ್ಲಿಮ್ಮರು, ಪೋರ್ಚುಗೀಸರು, ಡಚ್ಚರು, ಪ್ರೆಂಚರು ಮತ್ತು ಟಿಷರ ದಾಳಿಗಳು ನಿರಂತರವಾಗಿ ನಡೆಯುತ್ತಲೇ ಇದ್ದವು. ಈ ದಾಳಿಗಳು ಧಾರ್ಮಿಕವಾಗಿ, ಾಮಾಜಿಕವಾಗಿ, ಆರ್ಥಿಕವಾಗಿ ಎಲ್ಲ ವಲಯಗಳನ್ನು ಕೂಡ ಆಕ್ರಮಿಸಿಕೊಳ್ಳಲು ಪ್ರಯತ್ನಪಟ್ಟವು. ಆದರೆ ಂಪೂರ್ಣವನ್ನು ಹತೋಟಿಯನ್ನು, ಸ್ವಾಮ್ಯವನ್ನು ಪಡೆಯಲು ಯಾರಿಗೂ ಕೂಡ ಸಾಧ್ಯವಾಗಲಿಲ್ಲ. ಾರತ ಮಾತೆಯ ತನ್ನ ತಪೋಭೂಮಿಯ ಮೇಲೆ ಅನೇಕ ಋಷಿ-ಮುನಿಗಳನ್ನು ಕಂಡಿದೆ. ಹಾಗೆಯೇ

ನೇಕ ರಾಕ್ಷಸ ಪ್ರವೃತ್ತಿಯ ಜನರನ್ನು ಕಂಡು ಅರಗಿಸಿಕೊಂಡಿದೆ. ಸಾವಿರಾರು ವರುಷಗಳಿಂದ ತನ್ನ ೃತಿಯನ್ನು ಕಾಪಾಡಿಕೊಂಡು ಬರುತ್ತಿರುವ ಭಾರತೀಯ ಸಂಸ್ಕೃತಿ ಅನೇಕ ಕಷ್ಟ-ಸುಖಗಳನ್ನು, ಅನೇಕ ುದ್ಧಗಳ ಮೂಲಕ ನೆತ್ತರನ್ನು ಕಂಡಿದೆ. ಇವುಗಳೆಲ್ಲವನ್ನು ತನ್ನ ದಿಟ್ಟತೆಯಿಂದ ನೋಡುತ್ತಿರುವ ಾರತೀಯ ಸಂಸ್ಕೃತಿ ಹಿಮಾಲಯ ಪರ್ವತ ಶಿಖರಗಳ ರೀತಿಯಲ್ಲಿ ಬೆಳೆದಿದೆ. ಇಂತಹ ಪರ್ವತ ಖರಗಳಂತೆ ಬೆಳೆದಿರುವ ಸಂಸ್ಕೃತಿಯನ್ನು ಯಾರು ಕೂಡ ಆಕ್ರಮಿಸಿಕೊಳ್ಳಲು ಸಾಧ್ಯವಿಲ್ಲ. ದೇವಸ್ಥಾನವನ್ನು ಪ್ರದಕ್ಷಿಣೆ ಮಾಡಿಕೊಂಡು ಮುಖ ಭಾಗಕ್ಕೆ ಬಂದು ನಿಂತರೆ ಅದೇನು ಚಿತ್ರ ಕೃತಿಯ ಂವಿಧಾನ! ಏನು ಶಿಲ್ಪಕಲಾಕೌಶಲ್ಯ! ದ್ರಾವಿಡ ಶೈಲಿಯ ವಾಸ್ತುರಚನೆಯಲ್ಲಿ ಈ ತೆರನಾದ ಇನ್ನೊಂದು ಲ್ಪಕೃತಿಯಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗದು ಮಹಾಮಂಟಪಕ್ಕೆ ಹತ್ತಿಹೋಗಲು ಮಾಡಿರುವ ಟ್ಟಿಲುಗಳ ಎರಡು ಕಡೆಗಳಲ್ಲೂ ಸುಂದರವಾಗಿ ಕೆತ್ತಿ ಮಾಡಿದ, ಸರ್ವಾಲಂಕಾರಭೂಷಿತಗಳಾಗಿ ುಂಗಾಲುಗಳೆತ್ತಿ ನಿಂತಿರುವ ಮಗದಜಗಳು. ಹಂಪೆಯಲ್ಲಿನ ಸರ್ವತ್ರ ಶಿಥಿಲ ಸ್ಥಿತಿ ಈ ಆನೆಗಳಿಗೂ ಂದಿದೆ. ಅವುಗಳ ಮುಖದಿಂದ ಸೊಂಡಿಲು ಕತ್ತರಿಸಿಹೋಗಿವೆ"(3) ಭಾರತ ರಚನೆ, ಭೌಗೋಳಿಕ ದೇಶ ಎಲ್ಲವೂ ಕೂಡ ರಕ್ಷಣಾತ್ಮಕವಾದದು. ಒಂದು ದೇವಾಲಯವನ್ನು ಯಾವ ರೀತಿಯಲ್ಲಿ ನಿರ್ಮಾಣ ಾಡುತ್ತಾರೆಯೂ ಅಚ್ಚು ಕಟ್ಟಾಗಿ ಆ ರೀತಿಯಲ್ಲಿ ರಚನೆಯಾಗಿರುವಂತಹವು. ಕೆತ್ತನೆ ಮಾಡಿ ೌಂದರ್ಯವನ್ನು ಅನಾವರಣಗೊಳಿಸುವಂತೆ, ಆಕರ್ಷಣೀಯವಾಗಿಸುವಂತೆ ಭಾರತದ ಹವಾಗುಣ, ್ರಕೃತಿಕ ಸಂಪತ್ತಿನಿಂದ ಕೂಡಿದೆ. ಇಂದ ಭೌಗೋಳಿಕವಾಗಿ, ಸಂವಿಧಾನತ್ಮಕವಾಗಿ ರಚನೆಗೊಂಡಿರುವ ಾರತ ದೇಶದಲ್ಲಿ ಮತ್ತು ಕರ್ನಾಟಕದಲ್ಲಿ ಮದಗಜಗಳಂತಹ ಅಶೋಕ, ಚಂದ್ರಗುಪ್ತಮೌರ್ಯ, ಾತವಾಹನ, ಶಾತಕರ್ಣೆ, ಮಯೂರ ಶರ್ಮ, ಚಾವುಂಡರಾಯ, ಪುಲಕೇಶಿ, ವಿಕ್ರಮಾದಿತ್ಯ ಅಮೋಘ ರ್ಷ ನೃಪತುಂಗ, ವಿಷ್ಣುವರ್ಧನ, ಹರಿಹರ-ಬುಕ್ಕರಾಯ ಮತ್ತು ಶ್ರೀ ಕೃಷ್ಣದೇವರಾಯನಂತಹ ಾಮ್ರಾಟರನ್ನು ಕಂಡಂತಹ, ಆಡಳಿತ ನಡೆಸಿ ಸಂಸ್ಕೃತಿಯನ್ನು ಕಾಪಾಡಿಕೊಂಡು ಕರ್ನಾಟಕದ ರಿಮೆಯನ್ನು ಜಗತ್ತಿಗೆ ಪರಿಚಯಿಸಿದ್ದರು. ಇವತ್ತು ಕೂಡ ಈ ನಾಡಿನಲಿ ಮದಗಜಗಳಂತಹ ಾಯಕರುಗಳು ಇದ್ದಾರೆ. ಆದರೆ ಬ್ರಿಟಿಷರು ಇಲ್ಲಿನ ಒಳಜಗಳಗಳನ್ನು, ಅಂತರ್ ಕಲಹಗಳನ್ನು ಳಸಿಕೊಂಡು ಮದಗಜಗಳ ಸೊಂಡಿಲುಗಳನ್ನು ಕತ್ತರಿಹಾಕಿದ್ದಾರೆ. ದೇಸಿಯ ರಾಜರುಗಳ ಪ್ರತಿಷ್ಠೆ, ಹಂಕಾರ, ದರ್ಪ ಇವುಗಳು ದೇಸಿಯ ಪ್ರಾಂತ್ಯಗಳ, ಸಾಮ್ರಾಜ್ಯಗಳ ನಡುವೆ ಮನಸ್ತಾಪ ಉಂಟಾಗಿದ್ದು, ಟಿಷರ ಸಾಮ್ರಾಜ್ಯದ ಮುಂದೆ ತಲೆಯೋರಿದೆ. "ಮನೆ ಸೇರುವ ಆತುರ, ದಾರಿಯ ಹೆದರಿಕೆ, ಭೀರು ನಸ್ಸು, ಮಳೆ, ಕತ್ತಲು, ಭಯಗಳ ಉದ್ವೇಗ ಮನಸ್ಸಿನಲ್ಲಿ ಪ್ರಬಲವಾದ ಅಧಿಕಾರ ಹೂಡಿತ್ತು. ಅದೇ

ಾರಿಯಲ್ಲಿ ಎರಡು ಮೂರು ಗಂಟೆಗಳಿಗೆ ಹಿಂದೆ ತಾನೇ ಅನೇಕ ಸೌಂದರ್ಯಗಳನ್ನು ನೋಡಿಕೊಂಡು ್ಲಾಘಿಸುತ್ತ, ಆನಂದ ಪಡುತ್ತ ಹೋಗಿದ್ದೆವು. ಐತಿಹಾಸಿಕ ಸಂಗತಿಗಳನ್ನು ನೆನಪಿಗೆ ತಂದುಕೊಳ್ಳುತ್ತ, ಅನೇಕ ಳೆಯ ಸನ್ನಿವೇಶಗಳನ್ನು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುತ್ತ, ಹೆಜ್ಜೆ ಹೆಜ್ಜೆಗೂ ಹೊಸ ನೋಟಗಳನ್ನು ನೋಡುತ್ತ, ್ಯಾಖ್ಯಾನ ಮಾಡುತ್ತ ಹೋದವರ ಸುತ್ತಲೂ ಹೊರಗೂ ಒಳಗೂ ಈಗ ಭಯ ಅಂಧಕಾರ ಇವು ಾತ್ರವೇ ತುಂಬಿಕೊಂಡು ಇತರ ಭಾವನೆ ಕಲ್ಪನೆಗಳೆಲ್ಲ ಎಲ್ಲಿಯೊ ಮಾಯವಾಗಿದ್ದವು. ಚೆನ್ನಯ್ಯನು ಎಷ್ಟು ೈರ್ಯ ಹೇಳಿದರೆ ತಾನೆ ಏನು? ಕಣ್ಣು ಕಾಣದ ದೇಶ; ಕಣ್ಣು, ಮನಸ್ಸು ಓಡದ ಸಮಯ; ಕಳ್ಳ ಕಾಕರ ೀತಿ, ಸ್ವಲ್ಪ ಆಚೆ ಈಚೆ ಸುಳಿದರೆ ಎಡವಿಬೀಳುವ, ಮೈತರಚಿ ಹೋಗುವ, ಕೈಕಾಲು ಮುರಿಯುವ ಂಭವ ಮಿಂಚಿನ ಬೆಳಕು ಬೆಳಗಿದರೆ ಮಾತ್ರ ದಿಕ್ಕು ದೆಸೆ ಕಾಣವುವು. ಆ ಬೆಳಕೋ ಎಷ್ಟು ಭಯಂಕರ!'

4) ಸಾವಿರರೂ ವರ್ಷಗಳ ಸಂಸ್ಕೃತಿಯನ್ನು, ಆಡಳಿತವನ್ನು ಪರರಿಗೆ ಬಿಟ್ಟುಕೊಟ್ಟು ಅಧೀನರಾಗಿದ್ದೇವೆ. ್ವಾತಂತ್ರ್ಯ ಹೋರಾಟವನ್ನು ಪಡೆಯುವ ಆತುರವಿದೆ, ಪಡೆಯುತ್ತೇವೆ ಎಂಬ ವಿಶ್ವಾಸವಿದೆ. ೋರಾಟವನ್ನು ಕೈಗೊಂಡಿರುವ ಮಾರ್ಗದ ಹೆದರಿಕೆಯೂ ಇದೆ. ಒಂದು ಅಹಿಂಸಾ ಪಂಗಡ ುತ್ತೊಂದು ಹಿಂಸೆಯ ಪಂಗಡ ಇವುಗಳ ನಡುವೆ ಮನಸ್ಸಿನಲ್ಲಿ ಆತಂಕ ಭಯ ಇಡೀ ದೇಶ ಕತ್ತಲೆಯಲ್ಲಿ ುಳುಗಿದೆ. ಸರಿಯಾಗಿ ದಾರಿ ಕಾಣುತ್ತಿಲ್ಲ, ಇನ್ನೂರು–ಮುನ್ನೂರು ವರುಷಗಳ ಹಿಂದೆ ಸಾಂಸ್ಕೃತಿಕವಾಗಿ ಾಮಾಜಿಕವಾಗಿ, ಧಾರ್ಮಿಕವಾಗಿ ಕಂಗೊಳಿಸುತ್ತಿದ್ದ ಸಾಮ್ರಾಜ್ಯಗಳು ಈಗ ಚರಿತ್ರೆಯ ಪುಟ ಸೇರಿವೆ. ಾರತ ದೇಶದ ಗತವನ್ನು ನೆನಪಿಸಿಕೊಳ್ಳುವುದೇ ಒಂದು ಸಂತೋಷ ಮತ್ತು ಮನಸ್ಸಿಗೆ ಆನಂದವನ್ನು ೀಡುತ್ತದೆ. ಅಂದಿನ ಕಾಲದ ದೇವಾಲಯಗಳು, ದೇವಾಲಯಗಳ ಕೆತ್ತನೆ, ವಾಸ್ತುಶಿಲ್ಪ ಇವುಗಳೆಲ್ಲವನ್ನು ೋಡುತ್ತಿದ್ದರೆ ನಮ್ಮವರ ಅಂದಿನ ಆಡಳಿತ ಮತ್ತು ಕಲೆಯಲ್ಲಿ ಇದ್ದಂತಹ ನಿಪುಣತೆ ಯಾವ ೇಶದವರಿಗೂ ಸಾಧ್ಯವಿಲ್ಲವೇನು? ಎನ್ನವಂತಿದೆ. ಅದು ಚೈತ್ರದ ಹಚ್ಚ ಹಸುರಿನ ರೀತಿಯಲ್ಲಿ ಂಗೊಳಿಸುತ್ತಿದ್ದ ಭಾರತದ ಸಾಮ್ರಾಜ್ಯಗಳು ಮುಳುಗಿದೆ. ಬೀರುಗಾಳಿಯಲ್ಲಿ ಅಲ್ಲೋಲ ಕಲ್ಲೋಲವಾಗಿದೆ. ಡೀ ದೇಶ ಅಂಧಕಾರದಲ್ಲಿ ಮುಳುಗಿದ್ದು ಮನಸ್ಸಿನಲ್ಲಿ ಯಾವುದೇ ಆಲೋಚನೆಗಳು ಭಾರದೇ ಮನಸ್ಸು ಾಡ ತಟಸ್ಥವಾಗಿ ಬಿಟ್ಟಿದೆ. ಚೆನ್ನಯ್ಯನಂತ ದೇಸಿಯ ವ್ಯಕ್ತಿಗಳ ಅಥವಾ ನಾಯಕರ ಧೈರ್ಯದ ನುಡಿಗಳು ಹ ಧೈರ್ಯಕೂಡಲು ಆಗುತ್ತಿಲ್ಲ. ತನ್ನ ದೇಶದಲ್ಲೆ ಪರಕೀಯನಾಗಿ ಬಾಳಬೇಕಾದ ಪರಿಸ್ಥಿತಿಯಲ್ಲಿ ೀಯರು ಬದುಕುವಂತಾಗಿದೆ. ಅಂದು ಮತ್ತು ಇಂದು ಇಡೀ ದೇಶವೇ ಅಶಾಂತಿಯಿಂದ, ನಸಾಮಾನ್ಯರಿಗೆ ರಕ್ಷಣೆಯಿಲ್ಲದ ಪರಿಸ್ಥಿತಿ ಉಂಟಾಗಿದೆ, ಸ್ವಲ್ಪ ಪ್ರಜ್ಞೆ ತಪ್ಪಿದರೇ ಸಾಕು ಅಪಾಯ ಕಟ್ಟಿಟ್ಟ ುತ್ತಿ ಇಂತಹ ಪರಿಸ್ಥಿತಿ ಭಾರತ ದೇಶದ್ದು ಆಗಿದೆ. ಅಂದಿನ ಸಂದರ್ಭದಲ್ಲಿ ಭಾರತ ದೇಶವನ್ನು

ತಂತ್ರ್ಯಗೊಳಿಸಲು ಮಿಂಚಿನ ರೀತಿಯ ಬೆಳಕು ಬೇಕಾಗಿತ್ತು ಇಂದು ಕೂಡ ಪಾಶ್ಚಾತ್ಯ ಸಂಸ್ಕೃತಿಯಿಂದ ೂರಬರಲು, ದೇಶದಲ್ಲಿನ ಕೋಮುಗಲಭೆ, ಅಶಾಂತಿ, ಜಾತಿಕಲಹಗಳು ಮತ್ತು ಭ್ರಷ್ಟಚಾರದಿಂದ ೂರಬರಲು ಮಿಂಚಿನ ರೀತಿಯ ಪ್ರಕಾಶಮಾನವಾದ ಅರಿವು, ಹೋರಾಟ ಎಲ್ಲವೂ ಬೇಕಾಗಿದೆ.

ನಮ್ಮನ್ನು ಆಳಿಕೊಂಡು ಧರ್ಮವನ್ನು, ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಂತಹ ಂಸ್ಥಾನಗಳು ಇತಿಹಾಸ ಸೇರಿವೆ. ಈ ಇತಿಹಾಸದ ಸೇರಿದ ಸಂಸ್ಥಾನಗಳನ್ನು ನೆನಸಿಕೊಂಡರೆ ನಸುಗಳಾಗಿ ನಮ್ಮ ಮುಂದೆ ನಿಲ್ಲುತ್ತವೆ. ಅಂದಿನ ಚರಿತ್ರೆ ಸೇರಿದ ವೈಭವವನ್ನು ನೆನಸಿಕೊಂಡೆ ಸಂತೋಷ, ಮ್ಮೆ ಪಡುತ್ತಿದ್ದೇವೆ. ಆದರೆ ಇಂದಿನ ಪರಿಸ್ಥಿತಿಯನ್ನು ಮರೆತು ಬಿಟ್ಟಿದ್ದೇವೆ. ಅಂದು ಯಾವ ರೀತಿ ಾರತದ ಸಂಸ್ಥಾನಗಳು ಒಂದೊಂದೇ ಸ್ವಾತಂತ್ರ್ಯವನ್ನು ಕಳೆದುಕೊಂಡು ಪರಾಧೀನವಾದವು ಇಂದು ೂಡ ಅದೇ ರೀತಿಯ ವಾತವರಣ ಭಾರತದಲ್ಲಿ ನಿರ್ಮಾಣವಾಗುತ್ತಿದೆ. ಭಾರತ ದೇಶ ುಂದುವರೆಯುತ್ತಿರುವ ದೇಶ ಎಂಬ ಹೆಮ್ಮೆಯಲ್ಲಿ ದೇಶದ ನಿಜ ಸ್ಥಿತಿಯನ್ನು ಮರೆತು ಹೋಗುತ್ತಿದೇವೆ. ವಲ ಹೊಸ–ಹೊಸ ರಾಕೇಟ್‌ಗಳ ಉಡಾವಣೆ, ಅಂತರಿಕ್ಷಕ್ಕೆ ಭಾರತೀಯರ ಪ್ರಯಾಣ, ಹೊಸ ಕ್ಷಿಪಣಿ, ೂರದೇಶಗಳಿಂದ ಸಾಲ ಪಡೆದು ಕಾರ್ಖನೆಗಳ ಸ್ಥಾಪನೆ, ಇವುಗಳೇ ಭಾರತವನ್ನು ುಂದುವರೆಯುತ್ತಿರುವ ದೇಶ ಎಂಬ ಬಿರುದು ಕೊಡುತ್ತಿರುವುದು; ದೇಶದಲ್ಲಿ ಆರ್ಥಿಕ ಸ್ಥಿತಿ ಾಡಯಿಸುತ್ತಿದೆ, ರೂಪಾಯಿ ಮೌಲ್ಯ ಕುಸಿದಿದೆ, ವಿದೇಶಿಯರು ಚಿಲ್ಲರೆ ವ್ಯಾಪರದ ಮೂಲಕವೂ ಾರತಕ್ಕೆ ನುಸುಳಲು ತಯಾರಿ ನಡೆಸಿಕೊಂಡಿದ್ದಾರೆ. ಅವರಿಗೆ ಅನುಕೂಲ ಮಾಡಿಕೊಡಲು ದಲ್ಲಾಳಿಗಳ ಡೆಯೂ ಸಜ್ಜಾಗಿದೆ, ದೇಶಿಯ ಉದ್ಯಮಿಗಳು ಭಾರತ ಸರ್ಕಾರವನ್ನೇ ಕೊಂಡು ಕೊಳ್ಳುವಷ್ಟು ಬಲರಾಗಿದ್ದು, ಸರ್ಕಾರವನ್ನು ನಡೆಸುವವರು ಮತ್ತು ಉದ್ಯಮದಾರರ ಲಾಭ ಗಳಿಕೆಯ ವತಿಯಿಂದ ಾರತದ ಪ್ರಜೆ ಹಣದುಬ್ಬರದಿಂದ ನಲುಗುತ್ತಿದ್ದಾರೆ. ಇದನ್ನೇ ನಾವು ಭಾರತವನ್ನು ದಿವಾಳಿಯಲ್ಲಿ ುಂದುವರೆಯುತ್ತಿರುವ ದೇಶ ಎನ್ನಬಹುದು. ಅಂದು ಸಹ ವಿಜೃಂಭಣೆಯಿಂದ ಮೆರೆಯುತ್ತಿದ ಮ್ರಾಜ್ಯಗಳು ದಿವಾಳಿಯಾಗಲು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳಲು ಪಾಶ್ಚಾತ್ಯರ ಜೊತೆಗಿನ ್ಯಪಾರದ ಸಂಬಂಧಗಳು ಮತ್ತು ವೈಭೋಗದ ಜೀವನ ಪದ್ಧತಿ ಕಾರಣಾವಾಗಿತ್ತು. "ದೇವಾಸ್ಥಾನದಿಂದ ೂರಟ ರಾಜ ರಾಣಿಯರ ಸವಾರಿ ಊರಿನೊಳಕ್ಕೆ, ಅರಮನೆಯೊಳಕ್ಕೆ ಹೋಗುವುದು. ಈ ಕನಸುಗಳಿಗೆ ಗತ, ಸಂಬದ್ಧತೆಗಳ ಚಿಂತೆಯೇ ಇಲ್ಲ; ಕಾಲದೇಶಗಳ ನಿಯಮ ಇಲ್ಲ ಹಗಳು ನಾಲ್ಕು ಗಂಟೆಯ ುಯ, ಈಗ ರಾಣಿಯರ ಅಂತಃಪುರದ ಚಿತ್ರಗಳು ಅಲ್ಲಿ ಅವರ ವಿಹಾರ ವಿಲಾಸ, ದರ್ಪ ಅಹಂಕಾರ, ೂಯೆ ಕೃತ್ರಿಮವಾದ ವಿವಾದ, ಅವಹೇಳನ ತಿರಸ್ಕಾರ ಇಲ್ಲವಾದರೆ ಪಗಡೆ, ಅಥವಾ ಚದುರಂಗದ

ಟ ಅದೂ ಇಲ್ಲದೆ, ಜಂತದ ಬೊಂಬೆಗಳೊಡನೆ ಗೃಹಜೀವನದಾಟ ವೀಣೆ, ರುದ್ರವೀಣೆ, ಸಾರಂಗಿ, ೊಳಲು ನುಡಿಸುತ್ತಿರುವ ಸತಿಯರು ಎಲ್ಲರೂ ರಾಜೋದ್ಯಾನ ಕುಸುಮಗಳ-ಅಪ್ಸರೆಯರು; ಪ್ರತಿಯೊಬ್ಬಳೂ ಬ್ಬ ಚಕ್ರವರ್ತಿಯನ್ನು ಓಲಿಸಿ ಆಳಬಲ್ಲ ರಾಣಿ." (5) ಎಷ್ಟು ಸುಂದರವಾಗಿ ನಮ್ಮ ನಾಡಿನ ಸ್ತ್ರೀ ಎಂಬ ರ್ಣನೆಗೆ ಏನೂ ಕಡಿಮೆಯಿಲ್ಲ ಇಲ್ಲಿನ ಸ್ತ್ರೀಯರು ಪ್ರತಿಯೊಬ್ಬ ಸ್ವರ್ಗದ ಅಪ್ಸರೆಯರು ಎನ್ನುವ ಊರ್ವಶಿ, ಮೇನಕೆ, ರಂಬೆ, ಇಂತಹ ರಾಣಿಯರೊಡನೆ ಸವಾರಿಯಲ್ಲಿ ಹೊರಟಿದಂತಹ ರಾಜ ಂತಃಪುರಕ್ಕೆ ಹೆಚ್ಚಿನ ಸಮಯವನ್ನು ಮೀಸಲಿರಿಸಿದ. ರಾಜ-ರಾಣಿಯರ ವಿಹಾರ ವಿಲಾಸ ಜೀವನ ಧರ್ಪ, ಹಂಕಾರಗಳು ಪ್ರತಿಷ್ಟೆಗಳು ಜೂಜಿನ ರೀತಿಯಲ್ಲಿಯೇ ಎಲ್ಲವೂ ಮುಳಿಗಿ ಹೋಯಿತು. ಪ್ರತಿಯೊಬ್ಬ ಹಿಳೆಯೆ ಚೆಲುವು ಕೂಡ ಪುರುಷನನ್ನು ದಾರಿತಪ್ಪಿಸಿ, ತನ್ನ ಅಧೀನತೆಯಲ್ಲಿ ಬಂಧಿ ಮಾಡುವಂತಹ ೌಂದರ್ಯ ಇಂತಹ ಸೌಂದರ್ಯದ ಸ್ತ್ರೀಯ ಸಂಬಂಧಗಳ ಜೊತೆಯಲ್ಲಿ ತಾನು ಕಷ್ಟಪಟ್ಟು ವಿಸ್ತಿರಿಸಿದ ಾಮ್ರಾಜ್ಯಗಳನ್ನು ತನ್ನ ತಪ್ಪುಗಳಿಂದಲೇ ಕಳೆದುಕೊಳ್ಳಬೇಕಾದಂತ ಪರಿಸ್ಥಿತಿ ಎದುರಾಯಿತು. ಂದಿಮಾಗಧರ ಬಿರುದಾವಳಿಗಳ ಹೊಗಳಿಕೆಯ ಶಬ್ಧ, ವಾದ್ಯಗಳ ಘೋಷ, ವೇದಗಳ ಘೋಷಗಳು, ೇವಸ್ಥಾನದ ಘಂಟೆಗಳ ಧ್ವನಿ, ಗಾಯಕರ ಗಾಯನ ಈ ಶಬ್ಧಗಳಲ್ಲಿ ಪಾಶ್ಚಾತ್ಯರ ಖರಪುಟದ ಶಬ್ಧ ಾಮ್ರಾಟನ ಕಿವಿಗೆ ಬೀಳದೆ ಹಾಗೂ ಹೂ, ಹಣ್ಣು, ನೈವೇದ್ಯ, ಸಾಂಬ್ರಾಣಿಗಳ ವಾಸನೆಯಿಂದ ಪ್ರಜ್ಞೆಯನ್ನು ಳೆದುಕೊಂಡುಬಿಟ್ಟರು. ಬೆಳದಿಂಗಳ ಬೆಳಕಿನ ಚಂದ್ರನ ಕಾಂತಿಯನ್ನು ರಾಣಿ ಮತ್ತು ಸಖಿಯರ ಜೊತೆ ನುಭವಿಸುತ್ತ, ಅವರ ಕಾಲಿನ ಕಾಲುಂಗುರಗಳ, ಗೆಜ್ಜೆಗಳ ಶಬ್ಧನಾದದಲ್ಲಿ ತಾನು ಕೂಡ ನೃತ್ಯ ಮಾಡುತ್ತ ಜ ಶ್ರೀಕೃಷ್ಣದೇವಾರಾಯ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವಂತಹ ಸ್ಥಿತಿಗೆ ತಲುಪಿದ. "ಅವರ ಲುಂಗುರುಗಳು ಘಲ್ ಘಲ್ ಎಂದು ಶಬ್ಧಮಾಡುತ್ತಿವೆ; ಅದರ ತಾನಕ್ಕೆ ಸರಿಯಾಗಿ ಹಾಡುತ್ತ ಅವರು ೋಪಾನದ ಮೆಟ್ಟಿಲನ್ನು ಇಳಿಯುತ್ತಾ, ಸುತ್ತಲೂ ನೋಡಿಕೊಂಡು ಸೆರಗು ಸರಿಮಾಡಿಕೊಳ್ಳುತ್ತ ುರುಬಿಂದ ಜಾರಿಬೀಳುತ್ತಿರುವ ಹೂಗಳ ಸರವನ್ನು ಸರಿಯಾಗಿ ಮುಡಿದು ಕೊಳ್ಳುತ್ತಾ, ಒಬ್ಬರ ಕಡೆ ಬ್ಬರು ನೋಡಿ ವಿನೋದದಿಂದ ನಗುತ್ತ, ಹಾಡಿನ ಪಲ್ಲವಿಗಳಿಗೆ ತಮ್ಮ ಮನಸ್ಸಿಗೆ ತೋರಿದ ಪದಗಳನ್ನು ೇರಿಸಿ ಹಾಡುತ್ತಾ, ಒಬ್ಬರ ಮುಖಕ್ಕೆ ಇನ್ನೊಬ್ಬರು ಆರತಿ ಬೆಳಗಿ ಅಕ್ಷತೆ ಚೆಲ್ಲುವಂತೆ ನಟಿಸುತ್ತ ಹೋಗಿ ೇರಿನೆಡೆಯಲ್ಲಿ ಕಾಲು ಚಾಚಿಕೊಂಡು ಕುಳಿತುಕೊಳ್ಳುತ್ತಿದ್ದಾರೆ. ಏನು ಚಿತ್ರಗಳು! ಪ್ರಪಂಚದ ಅನುಭವವೆಲ್ಲ ೀ ರಮಣಿಯರಿಗೆ ಈ ತೆರೆನಾದ ಭೋಗಭಾಗ್ಯವಿಲಾಸಗಳಲ್ಲಿಯೆ ಅಡಕವಾಗಿರುವಂತಿದೆ. ಶಾಶ್ವತವಾಗಿ ಾವು ಹೀಗೆ ಇರುವೆವೆಂದು ಎಲ್ಲವೂ ತಮಗೆ ಹೀಗೆ ನಡೆದು ಬರುವುದೆಂದು ಅವರ ಭಾವನೆ, ಪಾಪ!") ತಮ್ಮ ಶೃಂಗಾರ ಜೀವನದ ಸಿಂಗಾರ ಮಾಡಿಕೊಳ್ಳುತ್ತಾ ರಾಜನ ಮನಸ್ಸನ್ನು ಆಕ್ರಮಿಸಿಕೊಳ್ಳುವ ರಾಣಿ

ಮತ್ತು ಸಖಿಯರು ತಮ್ಮ ವಿನೋದ ಆಟಗಳಲ್ಲಿ ತಲ್ಲೀನರಾಗಿದ್ದು ಹಾಡು ಮತ್ತು ನೃತ್ಯದ ಮನೋರಂಜನೆಯನ್ನು ಮಹಾರಾಜನಿಗೆ ನೀಡುತ್ತಿದ್ದಾರೆ. ತಾವೂ ತಾವೇ ಒಬ್ಬರ ಮುಖಕ್ಕೆ ಇನ್ನೊಬ್ಬರು ಆರತಿ ಬೆಳಗಿಸಿಕೊಳ್ಳುತ್ತಾ ತುಂಗಭದ್ರ ನದಿಯ ಹೊಳೆಯಲ್ಲಿ ತಮ್ಮ ಭೋಗಭಾಗ್ಯದ ಜೀವನಕ್ಕಾಗಿ ವಿಜಯನಗರವನ್ನು ಕನ್ನಡದ ಸಂಸ್ಕೃತಿಯನ್ನು ಹರಿಯಲು ಬಿಟ್ಟರು. ಭೋಗ ವಿಲಾಸದಲ್ಲಿ ತೊಡಗಿರುವ ಅಂತಃಪುರದ ಕುಟುಂಬಕ್ಕೆ ತಮ್ಮ ಸುಖ ಶಾಶ್ವತವಾದ ಸುಖ ಎಂಬ ಭ್ರಮೆಯು ಅವರನ್ನು ಆವರಿಸಿಕೊಂಡು ತುಂಗಭದ್ರೆಯ ಹೊಳೆಯ ಸುಳಿಯಲ್ಲಿ ಮುಳುಗಿಸಿ ಬಿಟ್ಟಿತ್ತು. ವಿಜಯನಗರದ ಮೇಲಿನ ಮುಸ್ಲಿಮ್ಮರ ದಾಳಿ, ಸ್ಥಳೀಯ ರಾಜರೊಡನೆಯ ಅಸೂಯೆ, ರಾಜನ ಗಾಂಭೀರ್ಯ, ಅಧಿಕಾರದ ದರ್ಪ, ರತ್ನ ಸಿಂಹಾಸನದ ಸುಖ, ಲಕ್ಷಾಂತರ ನಗರ ಜಯಘೋಷ ಮತ್ತು ಹೊಗಳು ಭಟ್ಟರ ಬಿರುದಾವಳಿ ಪ್ರಶಂಸೆಗಳು, ವೈದಿಕ ಮಂತ್ರಘೋಷಗಳು ಎಲ್ಲವನ್ನು ಕೂಡ ಕ್ಷಣಾರ್ಧದಲ್ಲಿಯೇ ನಿರ್ನಾಮ ಮಾಡಿಬಿಟ್ಟವು. "ಪಂಪಾಯಾತ್ರೆ ಮುಗಿಯಿತಪ್ಪ ಎಂದರು ರಾಯರು"(7) ಎರಡು ದಿನದ ಪ್ರವಾಸದಲ್ಲಿ ಕೇವಲ ಹಂಪೆಯ ಪ್ರವಾಸವನ್ನು ಮಾತ್ರ ಮಾಡಲಿಲ್ಲ, ಪ್ರವಾಸದ ಜೊತೆಯಲ್ಲಿ ವಿಜಯನಗರದ ಐನ್ನೂರೈವತ್ತು ವರ್ಷಗಳ ಹಿಂದಿನ ಸ್ಥಿತಿ-ಗತಿಯನ್ನು, ಸಂಸ್ಕೃತಿಯನ್ನು ಕೂಡ ಅಧ್ಯಯನ ಮಾಡಿದ್ದಾರೆ. ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ ಹರಿಹರ ಮತ್ತು ಬುಕ್ಕರಾಯರಿಂದ ಪ್ರತಿಷ್ಠಪಾನೆಯಾದ ಸಾಮ್ರಾಜ್ಯ ದ್ವೇಷಾಸೂಯೆಗಳ, ಧರ್ಮಗಳ ಸೆಣಸಾಟದಲ್ಲಿ, ಹೊಗಳು ಭಟ್ಟರ ಪ್ರಶಂಸೆಯಲ್ಲಿ, ಅಂತಃಪುರದ ಸಾಂಬ್ರಾಣಿಯ ಸುವಾಸನೆಯಲ್ಲಿ, ಗೆಜ್ಜೆಯ ನಾದದಲ್ಲಿ, ಕೃಷ್ಣ ಲೀಲಾ ವಿಲಾಸದಲ್ಲಿ, ಅಭಿಷೇಕದಲ್ಲಿ ಎಲ್ಲವೂ ಕೂಡ ಬೀರುಗಾಳಿಯ ರಭಸಕ್ಕೆ ಛಿದ್ರ ಛಿದ್ರವಾಗಿ ಹಾಳಾಗಿಹೋಗಿದೆ. ಪಂಪಾಯಾತ್ರೆಯ ಜೊತೆಗೆ ಗತ ವೈಭವವು, ಒಂದು ಸಂಸ್ಕೃತಿಯೂ ಕೂಡ ಮುಗಿದು ಹೋಯಿತು. ಪ್ರಪಂಚದಲ್ಲಿಯೇ ಅತ್ಯಂತ ಬಲಿಷ್ಠವಾಗಿದ್ದ ಸಾಮ್ರಾಜ್ಯ, ವಿದ್ಯಾರಣ್ಯರ ಆದರ್ಶದ ಜೊತೆ ಸಾಂಸ್ಕೃತಿಕವಾದ ಸಾಮ್ರಾಜ್ಯವು ಮುಗಿದು ಹೋಯಿತು. ಪಂಪಾಯಾತ್ರೆಯು ಮುಗಿದು ಹೋಯಿತು, ಜೊತೆಯಲ್ಲಿ ಸಾಂಸ್ಕೃತಿಕ ನಾಡು ಕೂಡ ಮುಳುಗಿ ಹೋಗಿದೆ. ಆದರೆ ಪುರಾತನ ಭಾರತೀಯ ಸಂಸ್ಕೃತಿಯ ಬೇರುಗಳು ಅಲ್ಲಲ್ಲಿ ಕಾಣುತ್ತಿವೆ. ಅಂದು ಯಾವ ರೀತಿಯ ಪಾಪ ಕೃತ್ಯಗಳು ಮತ್ತು ಭೋಗ ವಿಲಾಸದ ಜೀವನಕ್ಕೆ ಸೋತು ತಮ್ಮ ಸಾಮ್ರಾಜ್ಯವನ್ನು, ಸಂಸ್ಕೃತಿಯನ್ನು ಕಳೆದುಕೊಳ್ಳಬೇಕಾಯಿತು. ಅಂತಹದೇ ತಪ್ಪನ್ನು ನಾವು ಕೂಡ ಮಾಡಿದರೆ ಮತ್ತೇ ಸಂಸ್ಕೃತಿ ಕಳೆದುಕೊಂಡು, ಸ್ವಾತಂತ್ರ್ಯವನ್ನು ಕಳೆದುಕೊಳ್ಳಬೇಕಾದ ಅನಿವಾರ್ಯತೆ ಒದಗುತ್ತದೆ. 'ಪಂಪಾಯಾತ್ರೆಯಂತೆಯೆ' ಸ್ವಾತಂತ್ರೋತ್ತರ ಭಾರತದ ಯಾತ್ರೆ ಮುಗಿಯುವುದು ಬೇಡ. ಅದಕ್ಕಾಗಿ

ಲ್ಲರೂ ಕೂಡ ದೇಶಾಭಿಮಾನವನ್ನು ಬೆಳಸಿಕೊಂಡು ಭಾರತೀಯ ಸಂಸ್ಕೃತಿಯನ್ನು, ಪ್ರಾದೇಶಿಕ ಾಷೆಗಳನ್ನು, ಸಂಪನ್ಮೂಲವನ್ನು ಉಳಿಸಿ ದೇಶವನ್ನು ಕಟ್ಟಬೇಕಾಗಿದೆ.

ಕಾರಂತರು ತಮ್ಮ ಸಂತೋಷಕ್ಕಾಗಿ, ಪರಸ್ಥಳಗಳನ್ನು ನೋಡುವ ಸಲುವಾಗಿ ಅನೇಕ ್ರವಾಸಗಳನ್ನು ಮಾಡಿದ್ದರು. ಕಾರಂತರು ತಮ್ಮ ಕಾದಂಬರಿಗಳಲ್ಲಿಯೂ ಪ್ರವಾಸದ ಅಭಿರುಚಿ ಮತ್ತು ್ರಾಮುಖ್ಯಾತೆಯನ್ನು ವಿಶ್ಲೇಷಿಸಿದ್ದಾರೆ. ಕಾರಂತರು ಸಾಹಿತ್ಯ ಮತ್ತು ಕಲೆ ಇತ್ಯಾದಿ ಪ್ರಕಾರಗಳಲ್ಲಿ ಳಗಿದವರು. ಒಂದು ರೀತಿಯಲ್ಲಿ 'ಆಡು ಮುಟ್ಟದ ಸೊಪ್ಪಿಲ್ಲ ಎನ್ನುವ' ಹಾಗೆ ಕಾರಂತರು ಪ್ರವೇಶ ಾಡದಿರುವ ಸಾಹಿತ್ಯ ಮತ್ತು ಕಲೆಯೂ ಇಲ್ಲ. ಎಲ್ಲ ಪ್ರಕಾರಗಳಲ್ಲಾ ಸೈ ಎನಿಸಿಕೊಂಡವರು 'ಅರಸಿಕರಲ್ಲ' ್ರವಾಸ ಕಥನವೂ ಮುಖ್ಯವಾಗಿ ಕಲೆ, ನೃತ್ಯ ಮತ್ತು ರಂಗಭೂಮಿಗೆ ಸಂಬಂಧಿಸಿದ್ದು. ಕಲೆ, ನೃತ್ಯ ಮತ್ತು ಂಗಭೂಮಿಯಲ್ಲಿ ರಷ್ಯಾ, ಜರ್ಮನಿಗೆ ಭಾರತವನ್ನು ಹೋಲಿಸಿ ಕೊಂಡರೆ ಭಾರತವು ತುಂಬಾ ಲಿಯಬೇಕು ಎನ್ನುತ್ತಾರೆ. ಸಂಪ್ರದಾಯದಿಂದ ದೊರೆತಿರುವ ಪರಂಪರೆಯನ್ನು ನಾವು ಕೆಡಸುವ, ಥಿಲಗೊಳಿಸುವ ಮೊದಲು ಯಾವ ರೀತಿಯಲ್ಲಿ ಸುಧಾರಿಸಿಕೊಳ್ಳಬೇಕು ಎಂಬುದನ್ನು ತಿಳಿಸಿಕೊಡುತ್ತಾರೆ. ಮತ್ಕಾರ, ತಂತ್ರಶಾಸ್ತ್ರಗಳಿಂದ ಏನೇನೂ ಸಾದಿಸಲು ಸಾಧ್ಯವಿಲ್ಲ. ಆದ್ದರಿಂದ ನಾವು ಮಾಡಲು ಹೊರಟ ಲಸದಲ್ಲಿ ಸಾಮರ್ಥವನ್ನು ಸಾಧಿಸಿಕೊಂಡಾಗ ಮಾತ್ರ ಸಮರ್ಥವಾಗುತ್ತದೆ. ಕಾರಂತರು ರಷ್ಯಾ ಮತ್ತು ರ್ಮನಿ ದೇಶಕ್ಕೆ ಸಾಂಸ್ಕೃತಿಕ ರಾಯಭಾರಿಯಾಗಿ ಹೊರಟ ಸಂದರ್ಭದಲ್ಲಿ ಭೌತವಾದಿ, ಭಾವನೆಗಳು ಲ್ಲದ ಜನ ಎಂಬ ಭಾವನೆ ಹುಸಿಯಾಗಿ 'ಅರಸಿಕರಲ್ಲ' ಎಂಬ ಶೀರ್ಷಿಕೆಯನ್ನು ಪ್ರವಾಸ ಕಥನಕ್ಕೆ ೀಡಿದ್ದಾರೆ.

ಯಾವುದೇ ದೇಶವಾಗಲಿ ತನ್ನ ಭಾಷೆಯನ್ನು ಕಾಪಾಡಿಕೊಂಡು ಹೋದಾಗಲೇ ತನ್ನ ಂಸ್ಕೃತಿಯನ್ನು ಕೂಡ ಕಾಪಾಡಿಕೊಳ್ಳಲು ಸಾಧ್ಯ. ಭಾಷೆಯ ಮೇಲಿನ ಅಭಿಮಾನ ಕಳೆದುಕೊಂಡಾಗ ತನ್ನ ೀಶಾಭಿಮಾನ ಮತ್ತು ಸಂಸ್ಕೃತಿಯನ್ನು ಕಳೆದುಕೊಳ್ಳುತ್ತಾನೆ. ಆದ್ದರಿಂದ ಭಾಷೆ ತನ್ನ ತನವನ್ನು ಾಪಾಡಿಕೊಳ್ಳಲು ಬಹಳ ಪ್ರಮುಖವಾದದ್ದು. ಭಾರತೀಯ ಸಂದರ್ಭದಲ್ಲಿ ಇಂಗ್ಲೀಷ್ ಭಾಷೆಯ ್ಯಾಮೋಹದಿಂದ ತನ್ನ ಮಾತೃ ಭಾಷೆಯನ್ನು ಕೀಳಾಗಿ ಕಾಣುತ್ತಿರುವ ಜನ ಸಮುದಾಯಗಳು ಣಿಸುತ್ತಿವೆ. ದೇಶಿಯ ಹಬ್ಬಗಳನ್ನು, ಕಲೆಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಪಾಶ್ಚಾತ್ಯ ಅಭಿರುಚಿಯನ್ನು ಳಸಿಕೊಂಡು ತನ್ನ ದೇಶದಲ್ಲೆ ಪರಕೀಯ ಜೀವನವನ್ನು ನಡೆಸುತ್ತಿದ್ದಾರೆ. ಪೂರ್ವ ಜರ್ಮನಿಯಲ್ಲಿ ತಮ್ಮ ೆ, ಸಾಹಿತ್ಯ, ಸಂಸ್ಕೃತಿಯನ್ನು ಉಳಿಸಿಕೊಂಡಿದ್ದಾರೆ ಏಕೆಂದರೆ ಅವರಿಗೆ ತಮ್ಮ ಸಂಸ್ಕೃತಿಯ ಮೇಲಿನ

ಭಾಷೆಯ ಮೇಲಿನ ಅಭಿಮಾನ ಇಂಗ್ಲೀಷ್ ಮತ್ತು ಫ್ರೆಂಚ್ ಭಾಷೆಗಳನ್ನು ಕಲಿತ್ತಿದ್ದಾರೆ, ಆದರೆ ಯಾವತ್ತು ಕೂಡ ತಮ್ಮ ಜರ್ಮನ್ ಭಾಷೆಯನ್ನು ಕೀಳಾಗಿ ಕಾಣಲಿಲ್ಲ ಮತ್ತು ಇಂಗ್ಲೀಷ್ ಭಾಷೆಗೆ ಶ್ರೇಷ್ಠತೆಯ ಸ್ಥಾನವನ್ನು ನೀಡಲಿಲ್ಲ. ಕ್ರಿಪೂ ಸಾವಿರ ವರ್ಷಗಳಷ್ಟು ಹಿಂದಿನ ಅತಿ ಪುರಾತನ ಸಂಸ್ಕೃತಿಯನ್ನು ಇಂದು ಕೂಡ ಸಂರಕ್ಷಸಿಕೊಂಡು ಬರುತ್ತಿದೆ. ಭಾರತೀಯ ಜೀವನ ಪದ್ಧತಿಯಲ್ಲಿ ಹಲವಾರು ಬದಲಾವಣೆಗಳು ಕಾಣುತ್ತಿದ್ದೆವೆ. ಇಲ್ಲಿನ ಬದುಕು ಇಂದು ಯಾಂತ್ರಿಕವಾಗಿದೆ. ನಗರ ಪ್ರದೇಶದಲ್ಲಿನ ಜನರ ಜೀವನ ಕೆಲಸ, ಕಾರ್ಯಾಗಳ ಒತ್ತಡದಲ್ಲಿ ಸಾಗುತ್ತಿದೆ. ವಾರದ ಕೊನೆಯ ಎರಡು ದಿನಗಳು ಪಿಕನಿಕ್ ಮತ್ತು ಪ್ರವಾಸಕ್ಕೆ ಮೀಸಲಿರಿಸುವುದರ ಜೊತೆಗೆ ಹಬ್ಬ ಹರಿದಿನಗಳು ಸಹ ಪ್ರವಾಸದಲ್ಲಿ ಕಳೆದು ಹೋಗುತ್ತಿವೆ. ಹಬ್ಬಗಳನ್ನು ಬಿಟ್ಟುಕೊಡುವುದರ ಜೊತೆಗೆ ತನ್ನ ಸಂಸ್ಕೃತಿಯನ್ನು ಬಿಟ್ಟುಕೊಡುತ್ತಿದ್ದಾನೆ. ರಷ್ಯಾ ಮತ್ತು ಜರ್ಮನಿಗಳ ಜನ ಕಮ್ಯುನಿಸ್ಟ್‌ನ ಪ್ರಭಾವಕ್ಕೆ ಒಳಗಾಗಿದ್ದಂತಹವರು ಅವರಲ್ಲಿ ಕಲೆ, ಸಂಸ್ಕೃತಿಯ ಅಭಿರುಚಿ ಇರಲು ಸಾಧ್ಯವಿಲ್ಲ ಎಂಬ ಆಲೋಚನೆಯ ಕಾರಂತರ ಮನಸ್ಸು ಖುದ್ದಾಗಿ ಆ ದೇಶಕ್ಕೆ ಪ್ರವಾಸ ಹೋದಾಗ ಇವರಲ್ಲಿಯ ಕಲೆ, ಸಾಹಿತ್ಯ, ನೃತ್ಯ ಕಂಡು ಇಲ್ಲಿನ ಜನ 'ಅರಸಿಕರಲ್ಲ' ಎಂಬ ಭಾವನೆ ಬರುತ್ತದೆ. ಜರ್ಮನಿ ಮಾತು ರಷ್ಯಾ ದೇಶದವರೊಡನೆ ಭಾರತೀಯರನ್ನು ಹೋಲಿಸಿಕೊಂಡಾಗ ನಾವು 'ಅರಸಿಕರು' "ಭಾರತದಲ್ಲಿ ಸಿಗುವ ಸೇಬು, ಹೆಚ್ಚಾಗಿ ನಮ್ಮಷ್ಟೇ ಸಪ್ಪೆಯಾದರೆ, ಇಲ್ಲಿನ ಸೇಬು ಅಹಂಕಾರಭರಿತೆ"(8) ಭಾರತದಲ್ಲಿ ಸಿಗುವ ಸಪ್ಪೆ ಸೇಬಿನಂತೆ ಭಾರತೀಯ ಜನರು ಕೂಡ ಸಪ್ಪೆ. ಸಾವಿರಾರು ವರುಷಗಳ ಇತಿಹಾಸ ಇರುವ ಭಾರತೀಯರು ತಮ್ಮ ಸಂಸ್ಕೃತಿಯನ್ನು ಬಿಂಬಿಸುವಂತಹದ್ದನ್ನು ಕಾಪಾಡಿಕೊಂಡು ಬರಲಿಲ್ಲ. ಇದಕ್ಕೆ ಕಾರಣ ರಸಿಕತೆ ಇಲ್ಲದಿರುವುದು. ಇಡೀ ಜೀವನವನ್ನು ಸಪ್ಪೆಯಾಗಿ ಕಳೆಯುವಂತಹ ಅಭಿರುಚಿಯನ್ನು ನಾವು ಬೆಳೆಸಿಕೊಂಡಿದ್ದೆವೆ. ಯಾವುದೇ ಕಲೆಯನ್ನಾಗಲಿ, ಕ್ರೀಡೆಯನ್ನಾಗಲಿ ಬೆಳೆಸುವಂತಹ, ಪ್ರೋತ್ಸಾಹ ನೀಡುವಂತಹ ಜನ ನಮ್ಮಲ್ಲಿ ಬಹಳ ಕಡಿಮೆ.

ಕ್ರಿ.ಪೂ. ಮೂರನೆ ಶತಮಾನದಲ್ಲಿ ಪ್ರಸಿದ್ಧಿಯನ್ನು ಪಡೆದಂತಹ ನಗರವನ್ನು ಬರ್ಲಿನ್ ನಗದವರೆಗೂ ಸಾವಿರಾರು ಕೀ.ಮಿ.ಗಳು ಸಾಗಿಸಿಕೊಂಡು ಕಾಪಾಡಿಕೊಂಡು ಬಂದಂತಹ ನಗರವನ್ನು 'ಪೆರ್ಗಮಮ್' ಮ್ಯಾಸಿಯಂನಲ್ಲಿ ಕಾಣಬಹುದಾಗಿದೆ. ಭಾರತ ದೇಶದಲ್ಲಿ ಕೂಡ ಅನೇಕ ರಾಜ–ಮಹಾರಾಜರ ಕೋಟೆಗಳು, ಸ್ಮಾರಕಗಳು ಇವೆ. ಆದರೆ ಕಾಪಾಡಿಕೊಂಡು ಬಂದಂತಹ ಸ್ಮಾರಗಳು ವಿರಳವಾಗಿವೆ. ಪುರಾತನ–ಸಂರಕ್ಷಣೆಯ ಹೊಣೆ ಹೊತ್ತ ಸಂಸ್ಥೆಗಳು ಉಸ್ತುವಾರಿ ವಹಿಸಿಕೊಂಡಿದ್ದರು ರಕ್ಷಣೆ ಮಾಡಲು ಸಾಧ್ಯವಾಗುತ್ತಿಲ್ಲ. ಪುರಾತನ ಸ್ಮಾರಕಗಳ ಮೇಲೆ ನವಪ್ರೇಮಿಗಳ ಹಸ್ತಾಕ್ಷರಗಳು, ಕೆತ್ತನೆ ಕೆಲಸಗಳು ಹೀಗೆ ಹಾನಿ ಮಾಡುವಂತಹ ಮನಸ್ಸುಗಳೇ ಹೆಚ್ಚು. ತಮ್ಮ ಸಾಂಸ್ಕೃತಿಕ ಸಂಪತ್ತು ಎಂಬ

ಅರಿವು ಕೂಡ ಇಲ್ಲದ ಅವಿವೇಕಿ ಜನಗಳ ಮಧ್ಯೆ ಭಾರತೀಯ ಪುರಾತತ್ವ ಇಲಾಖೆ ಕಾರ್ಯನಿರ್ವಹಿಸುತ್ತಿದೆ. ಕ್ರಿಪೂ.ದ ನಗರವನ್ನು ಸಾವಿರಾರು ಮೈಲಿಗಳವರೆಗೆ ಸಾಗಿಸಿಕೊಂಡು ಬಂದಂತಹ ಜರ್ಮಿನ್ನರು ಯಾವುದೇ ಬದಲಾವಣೆ ಇಲ್ಲದೆ ನಿರ್ಮಿಸಿರುವುದರಿಂದ ಅಧ್ಯಯನಕ್ಕೆ ಯೋಗ್ಯವಾದುದ್ದಾಗಿದೆ. "ವಾಸ್ತುವಿನ ಆಚೀಚೆ ಕಾಣಿಸುವುದು ಮ್ಯೂಸಿಯಮಿನ ಗೋಡೆಗಳೆ ಅವುಗಳ ಮುಂಗಡೆ ಪ್ರೇಕ್ಷಕರು ನಿಂತು ನೋಡಬಹುದಾದ ವಿಶಾಲ ಅಂಗಣವಿದೆ. ಇನ್ನು ಇತರ ಕೋಣೆಗಳಲ್ಲಿ -- ಹೊಕ್ಕೂಡನೆಯೇ ನಮ್ಮ ಕಣ್ಮುಂದೆ 20-30 ಅಡಿ ಉದ್ದದ ನಾಲ್ಕೈದು ಅಡಿ ವ್ಯಾಸದ ಹಲವಾರು ಸ್ತಂಭಗಳಿಂದ ಮೆರೆಯುವ ಗ್ರೀಕ್ ಮಾದರಿಯ ಮಂಟಪಗಳಿವೆ".(9) ಪ್ರವಾಸಿಗರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಪೆರ್ಗಮಮ್ ಮ್ಯೂಸಿಯಮ್ ನಿರ್ಮಾಣ ಮಾಡಿದ್ದಾರೆ. ಕ್ರಿಪೂ. ಜನರ ನಾಗರೀಕತೆ ಮತ್ತು ಅವರ ತಂತ್ರಜ್ಞಾನದ ಕನ್ನಡಿಯಾಗಿ ಈ ಮ್ಯೂಸಿಯಮ್ ಇದೆ. ಇಂತಹ ಪುರಾತನ ನಗರಗಳು ದೇವಾಲಯಗಳು ಆಧುನಿಕ ವಾಸ್ತುರಚನೆಗೆ, ನಗರಗಳ ನಿರ್ಮಾಣಕ್ಕೂ ಮಾರ್ಗದರ್ಶನ ಆಗುವಂತಹದು.

ರಂಗಭೂಮಿಗೆ ಹಲವಾರು ಶತಮಾನಗಳ ಇತಿಹಾಸವಿದೆ. ಶತಮಾನಗಳ ಚರಿತ್ರೆಯಿರುವ ರಂಗಭೂಮಿ ಸಿನಿಮಾಗಳ ಪ್ರಭಾವದಿಂದ ತನ್ನ ಪ್ರಖರತೆಯನ್ನು ಕಳೆದುಕೊಂಡಿತು. ಭಾರತೀಯ ಸಂದರ್ಭದಲ್ಲಿ ನಾಟ್ಯಕ್ಕಿರುವ ಸ್ಥಾನವನ್ನು ಮತ್ತು ಪ್ರಾಚೀನತೆಯನ್ನು ವೇದಕ್ಕೆ ಹೋಲಿಸಲಾಗಿದೆ. "ಇಂದ್ರನು ಇತರ ದೇವತೆಗಳೊಡಗೂಡಿ ಬ್ರಹ್ಮನಲ್ಲಿ ಧರ್ಮ ನಷ್ಟವಾಯಿತು ಶುದ್ಧವಾದ ಜನಜೀವನ ಕೇವಲ ಭೋಗ ಲಾಲಸೆಯಲ್ಲಿ ಆಸ್ತರವಾಗಿದೆ. ಆದ್ದರಿಂದ ಸಕಲ ಜನರ ಜೀವನವನ್ನು ಉತ್ತಮಗೊಳಿಸುವ ವೇದವನ್ನು ಸೃಜಿಸು ಎಂದು ಬೇಡಿದರು. ಬ್ರಹ್ಮನು ಅವರ ಪ್ರಾರ್ಥನೆಯಂತೆ ನಾಲ್ಕು ವೇದಗಳ ಸಾರವನ್ನು ಸಂಗ್ರಹಿಸಿ ಪಂಚಮ ವೇದವನ್ನು ನಿರ್ಮಿಸಿದನು ಈ ವೇದ (ನಾಟ್ಯವೇದ) ಧರ್ಮಾರ್ಥ ಪ್ರಬೋಧಕವಾದ ನಾಟ್ಯವೇದವಾಗಿರುತ್ತದೆ". (10) ಇಂದ್ರ ಮತ್ತು ಇತರ ದೇವತೆಗಳು ಬ್ರಹ್ಮನಿಂದ ವರ ಪಡೆದಿದ್ದು ನಿಜವೂ ಅಥವಾ ಸುಳ್ಳ ಒಟ್ಟಿನಲ್ಲಿ ನಾಟಕದ ಹುಟ್ಟು ಸಮಾಜದಲ್ಲಿನ ಧರ್ಮವನ್ನು ಕಾಪಾಡುವುದಾಕ್ಕಾಗಿ ಸ್ಥಾಪಿಸಲ್ಪಟ್ಟಿರುವುದನ್ನು ಒಪ್ಪಬಹುದು. ಮನುಷ್ಯನ ಮನಸ್ಸು ಚಂಚಲವಾದದ್ದಾಗಿದೆ. ಈ ಚಂಚಲವಾದ ಮನಸ್ಸನ್ನು ಹತೋಟಿಯಲ್ಲಿಡುವುದು ಬಹಳ ಮುಖ್ಯವಾದದ್ದು ಆದ್ದರಿಂದ ಮೊದಲು ಅಂದರೆ ಪ್ರಾರಂಭದ ನಾಟಕಗಳು ದೇವರು ಮತ್ತು ಭಕ್ತರ ನಡುವುನ ಸಂಬಂಧಗಳು ಸನ್ಮಾರ್ಗದಲ್ಲಿ ನಡೆಯುವವರನ್ನು ಒಳ್ಳೆಯ ಸ್ಥಾನಮಾನವನ್ನು ನೀಡಿ ತನ್ನ ಜೊತೆಯಲ್ಲಿ ಸ್ವರ್ಗಕ್ಕೆ ಕರೆದುಕೊಂಡು ಹೋಗುವುದು. ಹೀಗೆ ಅನೇಕ ನಾಟಕಗಳು ಕಾವ್ಯಗಳು ಎಲ್ಲವನ್ನು ಕಾಣುತ್ತೇವೆ. ಒಟ್ಟಿನಲ್ಲಿ ಪ್ರಾಚೀನ ಕಾಲದಿಂದ ಆಧುನಿಕ ಯುಗದವರೆಗೂ

ನಾಟಕಗಳು ಸಾಮಾಜಿಕವಾಗಿ ಒಳ್ಳೆಯ ಸ್ವಾಸ್ಥ್ಯವನ್ನು ಕಾಪಾಡಿಕೊಂಡು ಹೋಗುವ ಉದ್ದೇಶವನ್ನು ಇಟ್ಟುಕೊಂಡಿವುದಾಗಿದೆ. ಹಾಗೂ ಭೂಮಿಯ ಮೇಲಿನ ಧರ್ಮ ಭ್ರಷ್ಟತೆ ಕಾಮ ಕ್ರೋಧಗಳೂ, ದ್ವೇಷೇಗಳನ್ನು ಹೋಗಲಾಡಿಸುವುದು ಕೂದ ನಾಟಕಗಳ ಮುಖೇನೆ ಸಂದೇಶಗಳನ್ನು ನೀಡಲಾಗುತ್ತಿದೆ. 'ಬಟೋರ್ಲ್ಫ್ ಬ್ರೆಕ್ಟ್' ನಾಟಕಕಾರನ ಹೆಸರನ್ನು ಬರ್ಲಿನ್ ರಂಗಭೂಮಿಗೆ ನಾಮಕರಣ ಮಾಡಿದ್ದು ಪ್ರತಿದಿನ ಬ್ರೆಕ್ಟ್‌ನ ನಾಟಕಗಳನ್ನು ಪ್ರದರ್ಶಿಸಲಾಗುತ್ತದೆ. ಯುರೋಪಿನಲ್ಲಿ ಶೇಕ್ಸಪಿಯರನ ಹೆಸರಿನಲ್ಲಿ ರಂಗಭೂಮಿಯಿದ್ದು, ಪ್ರತಿದಿನ ಶೇಕ್ಸಪಿಯರನ ನಾಟಕ ಪ್ರದರ್ಶನಗಳು ನಡೆಯುತ್ತಿವೆ. ಭಾರತದಲ್ಲಿ ಆ ರೀತಿಯ ಯಾವುದೇ ನಾಟಕ ರಂಗಮಂದಿರಗಳು ಇಲ್ಲ. ಇರುವಂತಹ ಒಂದೂ ಅಥವಾ ಎರಡೂ ರಂಗಭೂಮಿಗಳು ಕೂಡ ಪ್ರೇಕ್ಷರರ ಅಭಾವದಿಂದ ಮುಚ್ಚಲ್ಪಟ್ಟಿದೆ. ಸರ್ಕಾರ ನಡೆಸುವ ರಂಗಭೂಮಿಗಳು ಸಹ ಉಚಿತ ಪ್ರದರ್ಶನ ನೀಡಿದರೂ ಸಹ ಕೆಲವೇ ಕ್ಷೇತ್ರದ ಜನ ಪ್ರೇಕ್ಷಕರಾಗಿರುತ್ತಾರೆ. ಭಾರತೀಯ ಸಮಾಜವು ಸಿನಿಮಾಗಳ ಪ್ರಭಾವದಿಂದ ರಂಗಭೂಮಿಯನ್ನು ಕಳೆದುಕೊಳ್ಳುತ್ತಿದೆ. ಜಾನಪದ ರಂಗಭೂಮಿಯು ಇಲ್ಲ, ಆಧುನಿಕ ರಂಗಭೂಮಿಯು ಕೂಡ ಭಾರತದಲ್ಲಿ ನಶಿಸಿಹೋಗುತ್ತಿದೆ. ಜರ್ಮನಿ, ರಷ್ಯಾ ದೇಶಗಳಲ್ಲಿ ರಂಗಭೂಮಿಯ ಕಲಾವಿದರಿಗೆ ಸರ್ಕಾರದ ನೇಮಕ ಆಗಿರುತ್ತದೆ. ಭಾರತದಲ್ಲಿ ಈ ರೀತಿಯ ನೇಮಕಾತಿ ಇಲ್ಲದೇ ಇರುವುದರಿಂದ ಜೀವನೋಪಯ ಭಯ, ಭವಿಷ್ಯದ ಭಯದಿಂದ ಕಲಾವಿದರು ಬೇರೆ-ಬೇರೆ ಕೆಲಸ-ಕಾರ್ಯಗಳಲ್ಲಿ ತೊಡಗಿಕೊಳ್ಳುತ್ತಿದ್ದಾರೆ. ಭಾರತೀಯ ಸಮಾಜವು ಸಿನಿಮಾಗಳ ಮನೋರಂಜನೆ ಹಾಗೂ ಹಾಸ್ಯದಲ್ಲಿ ಮುಳುಗಿ ಹೋಗಿದೆ. ಸಿನಿಮಾಗಳ ಪ್ರಭಾವದಿಂದ ಯುವಸಮುದಾಯ ಕೆಟ್ಟ ದಾರಿ ಹಿಡಿಯುತ್ತಿದ್ದಾರೆ. ಸಿನಿಮಾಗಳಲ್ಲಿ ಪ್ರದರ್ಶನವಾಗುತ್ತಿರುವ ಮಚ್ಚು, ಲಾಂಗ್‌ಗಳು ಸಮಾಜದಲ್ಲಿ ಝುಳಪಿಸುತ್ತಿವೆ. ಜರ್ಮನಿ ಮತ್ತು ರಷ್ಯಾದಲ್ಲಿ ರಂಗಭೂಮಿಯು ಸಮಾಜ ಮುಖಿಯಾದ ಸಂದೇಶಗಳನ್ನು, ಮಾರ್ಗದರ್ಶನಗಳನ್ನು ನೀಡುತ್ತಿದೆ.

ಭಾರತೀಯ ಪ್ರದರ್ಶನ ಕಲೆಗಳಲ್ಲಿ ಗೊಂಬೆ ಆಟವು ಒಂದು. ಆದರೆ ಇಂದು ಗೊಂಬೆಯನ್ನು ಆಟವಾಡಿಸುವ ವೃತ್ತಿಯವರು ಬಹಳ ವಿರಳ ಎನ್ನಬಹುದು, ಯಾವುದೇ ದೇಶವಾಗಲಿ, ರಾಜ್ಯವಾಗಲಿ ಸಾಂಸ್ಕೃತಿಕವಾಗಿ ಬೆಳವಣಿಗೆ ಅಥವಾ ಅಭಿವೃದ್ಧಿ ಆಗಬೇಕಾದರೆ ಸರ್ಕಾರ ಮತ್ತು ಸರ್ಕಾರದ ಅಧೀನ ಸಂಸ್ಥೆಗಳು ಬಹಳ ಮುಖ್ಯ. ಯುರೋಪು ದೇಸಗಳಲ್ಲಿಯೂ ಕೂಡ ಗೊಂಬೆ ಆಟಗಳನ್ನು ಕಾಪಾಡಿಕೊಂಡು ಬರುತ್ತಿದ್ದು ಜೊತೆಗೆ ಪ್ರದರ್ಶನ ಕಲೆಯಾಗಿ ಕೂಡ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಯುರೋಪು ಮತ್ತು ಏಷ್ಯಾ ರಾಷ್ಟ್ರವಾದ ಭಾರತಕ್ಕೆ ಹೋಲಿಸಿಕೊಂಡರ ಜರ್ಮನಿ ಮತ್ತು ರಷ್ಯಾದೇಶಗಳಲ್ಲಿ ನಾಟಕ ರಂಗಭೂಮಿಯಷ್ಟೆ ಮಹತ್ವ ಗೊಂಬೆಯಾಟದ ಪ್ರದರ್ಶನಕ್ಕೆ ಅಲ್ಲಿನ ಸರ್ಕಾದ

ನೀಡುತ್ತಿದೆ. ಜೊತೆಗೆ ಕೆಲವು ಸರ್ಕಾರಿ ಥಿಯೇಟರ್‌ಗಳು ಇದ್ದು ಅಲ್ಲಿ ಸರ್ಕಾರ ಅತಿ ಕಡಿಮೆ ಬೆಲೆಯಲ್ಲಿ ಸಾರ್ವಜನಿಕರಿಗೆ ಪ್ರದರ್ಶನವನ್ನು ಏರ್ಪಡಿಸುತ್ತದೆ. "ಮಕ್ಕಳಿಗಂತು ಈ ಗೊಂಬೆ ಆಟಗಳು, ಈ ಮೊದಲು ವರ್ಣಿಸಿದ ಮಕ್ಕಳ ನಾಟಕಗಳಷ್ಟೇ ಪ್ರಿಯವಾಗಿವೆ. ಅವನ್ನು ನೋಡಲು ಮಕ್ಕಳು ಕಿಕ್ಕಿರಿದು ಸೇರುತ್ತಾರೆ. ತಮ್ಮ ಮಕ್ಕಳನ್ನು ಕರೆದುಕೊಂಡು ಹಿರಿಯರು ಆ ನಾಟಕಗಳಿಗೆ ಬಂದೇ ಬರಬೇಕು" (11). ಭಾರತ ದೇಶದಲ್ಲಿ ಮಕ್ಕಳಿಗೆ ಆಧುನಿಕ ಆಟಗಳಾದ ಕ್ರಿಕೆಟ್, ಟೆನ್ನಿಸ್ ಈ ರೀತಿಯಾ ಅತಿ ಆದಾಯ ತರುವಂತಹ ಕ್ರೀಡೆಗಳನ್ನು ಕಲಿಸಲು ಇಲ್ಲಿನ ಪೋಷಕರು ಒತ್ತಾಯ ಹೇರುತ್ತಾರೆ. ಮಕ್ಕಳು ಸಹ ತಮ್ಮ ಜೀವನ ಪೂರ್ತಿ ಕ್ರಿಕೆಟನ ಹುಚ್ಚಿನಲ್ಲಿ ಜೀವನ ಸವೆಸುತ್ತಿದ್ದಾರೆ. ಆದರೆ ನಿಜವಾದ ಕಲೆ, ಸಂತೋಷವನ್ನು ಉಂಟುಮಾಡುವಂತಹದು ನಾವು ಮಕ್ಕಳಿಗೆ ಕಲಿಸಿಕೊಡುತ್ತಿಲ್ಲ. ಯಾವಾಗಲು ಮಕ್ಕಳಿಗೆ ದೂರದರ್ಶನ ಖಾಸಗಿ ಚಾನೆಲ್‌ಗಳಲ್ಲಿ ಪ್ರಸಾರವಾಗುವ ಕಾರ್ಟೂನ್ ಮತ್ತಿತರ ಪಾಶ್ಚಾತ್ಯ ಸಂಸ್ಕೃತಿಯನ್ನು ಬಿತ್ತರಿಸುವ ಕಾರ್ಯಕ್ರಮಗಳಿಗೆ ಗಂಟು ಹಾಕಿದ್ದೇವೆ. ದೇಸಿಕಲೆಗಳಿಂದ, ದೇಸಿ ಸಂಸ್ಕೃತಿಯಿಂದ ಮಕ್ಕಳನ್ನೂ ದೂರ ಇಡುವುದರ ಮೂಲಕ ದೇಸಿಯತೆಯ ಅಸ್ತಿತ್ವವನ್ನು ಕಳೆದು ಹಾಕುತ್ತಿದೇವೆ.

ಕಿರಿಯರು, ಹಿರಿಯರು ಎಲ್ಲರೂ ಕೂಡ ಇಷ್ಟಪಡುವ, ಎಲ್ಲ ದೇಶದವರು ಇಷ್ಟಪಡುವಂತಹ ಸರ್ಕಸ್ಸು ಕೂಡ ಜರ್ಮನಿ ದೇಶದಲ್ಲಿ ಸರ್ಕಾರದ ಅಧೀನದಲ್ಲೆ ನಡೆಸಲ್ಪಡುತ್ತದೆ. ಭಾರತ ದೇಶದಲ್ಲಿ ಖಾಸಗಿ ಸರ್ಕಸ್ ಕಂಪನಿಗಳು ಇದ್ದು ಅವುಗಳನ್ನು ನಡೆಸಿಕೊಂಡು ಹೋಗಲು ಆರ್ಥಿಕವಾಗಿ ಪ್ರಬಲ ಪೆಟ್ಟು ತಿಂದು ಹೇಳಲು ಹೆಸರಿಲ್ಲದಂತಾಗುತಿದೆ. ಭಾರತ ದೇಶದಲ್ಲಿ ಅತಿ ಹೆಚ್ಚಿನ ನಿರುದ್ಯೋಗದ ಸಮಸ್ಯೆ ಕಾಡುತ್ತಿದೆ, ಎಂಬ ನೆಪವನ್ನು ಮಾಡಿ ವಿದೇಶದಿಂದ ಸಾಲ, ವಿದೇಶ ಬಂಡವಾಳದಾರರಿಗೆ ಮಾರುಕಟ್ಟೆಯಲ್ಲಿ ಮುಕ್ತವಾದ ಅವಕಾಶ, ದೇಶಿಯ ಕಾರ್ಪೋರೇಟ್‌ಗಳಿಗೆ ಲಾಭದಾಯಕವಾಗುವ ರೀತಿಯ ಬಜೆಟ್‌ಗಳು ಎಲ್ಲವನ್ನೂ ಆಡಳಿತ ನಡೆಸುವ ಸರ್ಕಾರಗಳು ವ್ಯವಸ್ಥಿತವಾಗಿ ಜಾರಿಗೆ ತರುತ್ತಿದೆ. ಇದರಿಂದ ನಿರುದ್ಯೋಗದ ಸಮಸ್ಯೆಗಳಿಗೆ ಪರಿಹಾರ ಅಂತೂ ಸಿಗಲಿಲ್ಲ. ಬದಲಾಗಿ ದೇಶದ ಬೆನ್ನೆಲಬು ಆದ ರೈತ ಭೂಮಿಯನ್ನು ಕಳೆದುಕೊಳ್ಳುವಂತಹದು, ಬೆಳೆದ ಬೆಳೆಗೆ ಮಾರುಕಟ್ಟೆಯಲಿ ಸರಿಯಾದ ದರ ಸಿಗದೆ ಕಂಗಾಲಗಿ ಹತಾಶನಾಗಿದ್ದಾನೆ. ಆದರೆ ಜರ್ಮನಿ ಮತ್ತು ರಷ್ಯಾ ದೇಶಗಳಲ್ಲಿ ಅಲ್ಲಿನ ಮಕ್ಕಳಿಗೆ ಶಿಕ್ಷಣವನ್ನು ಪ್ರಾಯೋಗಿಕವಾಗಿ ನೀಡುವುದರ ಮೂಲಕ ಅಲ್ಲಿನ ಸಂಸ್ಕೃತಿಯನ್ನು ಕಾಪಾಡುತ್ತಾ ನಿರುದ್ಯೋಗ ಸಮಸ್ಯೆಯನ್ನು ವೈಜ್ಞಾನಿಕವಾಗಿ ಹೋಗಲಾಡಿಸಿದ್ದಾರೆ. "ನಾಟಕಗಳ ಸಲುವಾಗಿಯೇ ಆಗಲಿ, ಸರ್ಕಸ್ಸುಗಳು ಸಲುವಾಗಿಯೇ ಆಗಲಿ ಯಾರ್ಯಾರಿಗೆ ಯಾವ್ಯಾವ ಅಭಿರುಚಿ ಇದೆಯೆಂಬುದನ್ನು ಎಳೆಯರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಗಳ ಹಂತದಲ್ಲಿ ಗುರುತಿಸುತ್ತಾರೆ, ಅವರ ಅಭಿರುಚಿ ಮತ್ತು

ಯೋಗ್ಯತೆಗಳನ್ನಳೆದು ಮುಂದೆ ಅವರವರು ಆರಿಸಿದ ಕಸುಬಿನಲ್ಲಿ ಉಚ್ಚ ಶಿಕ್ಷಣ ಕೊಡುತ್ತಾರೆ ನಾವು ಸಂದರ್ಶಿಸಿದ 'ಜಮ್ನೇಸಿಯಮು' ಪೂರ್ವ ಜರ್ಮನಿಯ ಯಾವತ್ತು ಕಸರತ್ತುಗಾರರನ್ನು ತರಬೇತಿ ಮಾಡುವ ಒಂದು ಶಿಕ್ಷಣಾಲಯವಾಗಿತ್ತು". (12) ಈ ರೀತಿಯಾದ ವೈಜ್ಞಾನಿಕವಾದ ಪರಿಹಾರಗಳು ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಿದೆ. ಕೇವಲ ಬಂಡವಾಳ ಶಾಹಿ ಉದ್ಯಮದಾರರನ್ನು ದೇಶದಲ್ಲಿ ಭೂಮಿ ನೀಡಿ ನಮ್ಮ ಸಫಲತೆಯನ್ನು ಬಯಸಿದರೆ ಅದು ಕೇವಲ ಕನಸಾಗಿ ಉಳಿಯುತ್ತದೆ. ಹೂಡಿಕೆ ಮಾಡಿದವನು ಇಲ್ಲಿನ ಸಂಪನ್ಮೂಲಗಳನ್ನು ಬಳಸಿಕೊಂಡು ತನ್ನ ಯಜಮಾನ್ಯವನ್ನು ಸ್ಥಾಪಿಸಿಕೊಳ್ಳುತ್ತಾನೆ. 20ನೇ ಶತಮಾನದ ಐದನೇ ದಶಕದಲ್ಲಿ ಎರಡನೇ ಯುದ್ಧದಿಂದ ತತ್ತರಿಸಿ ಹೋಗಿದ್ದ ರಷ್ಯಾ ಮತ್ತು ಜರ್ಮನಿಯ ದೇಶಗಳು ಮತ್ತೆ ತನ್ನ ದೇಶದ ಸುಧಾರಣೆಗೆ ಒತ್ತು ನೀಡಿದ್ದು, ತನ್ನ ದೇಶಿ ಕಲೆಗಳಿಂದ ಅದಕ್ಕಾಗಿ ಇಲ್ಲಿನ ಸರ್ಕಾರ ತನ್ನ ಸಂಸ್ಕೃತಿಯನ್ನು ಕಾಪಾಡಿಕೊಳ್ಳುವುದರ ಜೊತೆಗೆ ದೇಶದ ಆರ್ಥಿಕ ಸ್ಥಿತಿಯನ್ನು ಕಾಪಾಡಿಕೊಂಡು ಹೋಗುತ್ತಿದೆ.

ಭಾರತ ದೇಶದ ವಸ್ತುಸ್ಥಿತಿ ತೀರ ಭಿನ್ನವಾಗಿದೆ, ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯದ ನಂತರದಲ್ಲಿ ಅಜಗಜಾಂತರ ವ್ಯತ್ಯಾಸಗಳನ್ನು ಕಾಣುತ್ತೇವೆ. ಪ್ರತಿಯೊಂದು ವಿಷಯದಲ್ಲೂ ಅನಾದರ, ಸ್ವಾರ್ಥ, ಭ್ರಷ್ಟಾಚಾರ ಇವುಗಳಿಂದ ಸಂಕುಚಿತ ಸಮಾಜವೆ ಬೆಳೆದು ಬಿಟ್ಟಿದೆ. ಈ ರೀತಿಯ ಬೆಳವಣಿಗೆ ಸಾಹಿತ್ಯ, ಕಲೆ, ಕ್ರೀಡೆ, ಶಿಕ್ಷಣ, ರಾಜಕೀಯ ಹೀಗೆ ಎಲ್ಲ ವಲಯಗಳಲ್ಲೂ ಸ್ವಜನ ಪಕ್ಷಪಾತವನ್ನು ಕಾಣುತ್ತೇವೆ. ಇಂತಹ ಸಮಾಜದಿಂದ ಯಾವತ್ತೂ ಕೂಡ ಮಾದರಿ ದೇಶವನ್ನು ನಿರ್ಮಾಣ ಮಾಡಲು ಸಾಧ್ಯವಿಲ್ಲ. ಭಾರತ ಮತ್ತು ಇತರ ದೇಶಗಳೊಡನೆ ಸಾಂಸ್ಕೃತಿಕವಾಗಿ ಕೂಡುಕೊಳ್ಳುವಿಕೆಯ ಸಂಧರ್ಭದಲ್ಲೂ ಕೂಡ ಸ್ವಜನ ಪಕ್ಷಪಾತದಂತಹ ಹಾಗೂ ಇನ್ನಿತರ ಅಪ್ರಮಾಣಿಕ ವಲಯ ತನಗೆ ಬೇಕಾದ್ದನ್ನು ಸಾಧಿಸಿಕೊಳ್ಳಲು ಬಯಸುತ್ತದೆ ಮತ್ತು ಯಶಸ್ವಿಯು ಆಗುತ್ತದೆ.

ಜ್ಞಾನಪೀಠ ಪ್ರಶಸ್ತಿಯನ್ನು ನೀಡುವ ಸಂದರ್ಭದಲ್ಲು ಕೂಡ ರಾಜಕೀಯ ಇಚ್ಛಾಶಕ್ತಿಗಳು ಕಾರ್ಯಪ್ರವತ್ತರಾಗಿರುತ್ತವೆ. ರೈತರಿಗೆ ತರಬೇತಿ ನೀಡಲು ಸರ್ಕಾರವೇ ಯೋಜನೆಗಳು ರೂಪಿಸಿ ತನ್ನ ಬಂದು ಬಾಂಧವರನ್ನು ವಿದೇಶಿ ಪ್ರವಾಸಕ್ಕೆ ಕಳುಹಿಸಿರುವ ಅನೇಕ ಉದಾಹರಣೆಗಳಿವೆ. ಈ ರೀತಿಯ ಸ್ವಜನ ಪಕ್ಷಪಾತಗಳು ಒಂದು ಕಡೆಯಾದರೆ ಮತ್ತೊಂದು ಕಡೆ ಅನಾದರ ಮತ್ತು ಅನಾಸಕ್ತಿಯನ್ನು ಪ್ರದರ್ಶಿಸುವುದು. ತನ್ನ ದೇಶದ ಸಾಹಿತ್ಯ, ಕಲೆ, ಚಿತ್ರಕಲೆ ಇವುಗಳ ವಸ್ತು ಪ್ರದರ್ಶನ ಅಥವಾ ಇನ್ನಿತರ ಪ್ರದರ್ಶನಗಳಲ್ಲಿ ಮುಖ್ಯವಲ್ಲದೇ ಇರುವುದನ್ನು ಮುಖ್ಯವನ್ನಾಗಿ ಬಿಂಬಿಸುವುದು. ಇವುಗಳನ್ನು ಆಯ್ಕೆ

ಮಾಡುವಂತಹ ಸಮಿತಿಯ ಸದಸ್ಯರು ಸಂಬಂಧ ಪಟ್ಟಂತಹ ವಿಷಯ ಅಥವಾ ಆ ವಲಯಕ್ಕೆ ಸೇರದೆ ಇರುವವರನ್ನು ಸಮಿತಿಯಲ್ಲಿ ನೇಮಕ ಮಾಡುವುದು, ಈ ರೀತಿಯ ಅನಾದರಗಳು ಮತ್ತು ಅನಾಸಕ್ತಿಗಳಿಂದ ಭಾರತ ಕಲೆಯ, ಕಲಾವಿದರ ಪರಿಚಯ ವಿಶ್ವಮಟ್ಟದಲ್ಲಿ ಅಗಲು ಸಾಧ್ಯವಾಗುತ್ತಿಲ್ಲ. "ಅದೇ ಜರ್ಮನಿಯಲ್ಲಿ (ಪ್ರಾಯಶಃ ಡ್ರೆಸ್‌ಡೆನಿನಲ್ಲಿ ಎಂದು ನೆನಪು) ಅಲ್ಲಿನ ಒಂದು ಚಿತ್ರಶಾಲೆಯಲ್ಲಿ ಎರಡು ಕೋಣೆಗಳ ತುಂಬ ಭಾರತಕ್ಕೆ ಬಂದು ಹೋದ ಜರ್ಮನ್ ಚಿತ್ರಕಾರರು, ಭಾರತದ ವಸ್ತುಗಳಿಂದ ಪ್ರೇರಿತರಾಗಿ ಬರೆದ ಅತ್ಯಾಧುನಿಕ ಚಿತ್ರಗಳೂ ಇದ್ದವು. ಅವುಗಳ ಜೊತೆಗೆ ನಾವು ಜರ್ಮನಿಯಲ್ಲಿ ತೋರಿಸಿದ ನಿದರ್ಶನಗಳು ಬೈರ್ಯ ಚೇಷ್ಟೇಯಾಂತೆ ಕಾಣೆಸಬಹುದು." (13) ಭಾರತದ ದೇಶದಿಂದ ಪ್ರದರ್ಶಿತವಾಗುವಂತಹ ಚಿತ್ರಕಲೆ, ಸಿನಿಮಾ ಮತ್ತಿತರ ಕಲಾ ಜಗತ್ತಿನ ಅನಾವರಣವು ಹುಡುಗಾಟಿಕೆಯ ಆಟವಾಗುತ್ತಿದೆ. ಇದರಿಂದ ಭಾರತದ ದೇಶದ ಸಾಂಸ್ಕೃತಿಕ ವಲಯಕ್ಕೆ ದಕ್ಕೆ ಯಾಗುತ್ತಿದೆ. ಇಂತಹ ಅನಾಸಕ್ತಿ, ಅನಾಧರಗಳಿಂದು ನಾವು ಹೊರ ಬರಬೇಕಾದ ಅನಿವಾರ್ಯ ಸಂದರ್ಭವಾಗಿದೆ.

ಟಿಪ್ಪಣಿಗಳು

1. ಆಲೂರು ವೆಂಕಟರಾಯ, 'ಕರ್ನಾಟಕತ್ವದ ವಿಕಾಸ' ಕನ್ನಡ ಸಾಹಿತ್ಯ ಪರಿಷತು 3ನೇ ಮುದ್ರಣ 2009 ಪುಟ 1
2. ವಿ.ಸೀ. 'ಪಂಪಾಯಾತ್ರೆ' ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು 6ನೇ ಮುದ್ರಣಾ 2004 ಪುಟ3
3. ವಿ.ಸೀ. 'ಪಂಪಾಯಾತ್ರೆ' ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು 6ನೇ ಮುದ್ರಣ 2004 ಪುಟ 23
4. ವಿ.ಸೀ. 'ಪಂಪಾಯಾತ್ರೆ' ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು 6ನೇ ಮುದ್ರಣ 2004 ಪುಟ 40
5. ವಿ.ಸೀ. 'ಪಂಪಾಯಾತ್ರೆ' ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು 6ನೇ ಮುದ್ರಣ 2004 ಪುಟ 52
6. ವಿ.ಸೀ. 'ಪಂಪಾಯಾತ್ರೆ' ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು 6ನೇ ಮುದ್ರಣ 2004 ಪುಟ 54
7. ವಿ.ಸೀ. 'ಪಂಪಾಯಾತ್ರೆ' ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು 6ನೇ ಮುದ್ರಣ 2004 ಪುಟ 64
8. ಕೆ.ಶಿವರಾಮ ಕಾರಂತ, 'ಅರಸಿಕರಲ್ಲ' ಸಪ್ನ ಬುಕ್ ಹೌಸ್ ಬೆಂಗಳೂರು ಮರು ಮುದ್ರಣ, ಜುಲೈ 2003 ಪುಟ 17
9. ಕೆ.ಶಿವರಾಮ ಕಾರಂತ 'ಅರಸಿಕರಲ್ಲ' ಸಪ್ನ ಬುಕ್ ಹೌಸ್ ಬೆಂಗಳೂರು ಮರು ಮುದ್ರಣ, ಜುಲೈ 2003 ಮರು ಮುದ್ರಣ ಜುಲೈ 2003 ಪುಟ 38
10. ಎಂ.ಎಸ್. ನರಸಿಂಹಮೂರ್ತಿ, ಭಾರತೀಯ ನಾಟಕ ಪರಂಪರೆ, ಪ್ರಸಾರಂಗ ಬೆಂ.ವಿ.ವಿದ್ಯಾಲಯ ಜ್ಞಾನಭಾರತಿ ಬೆಂಗಳೂರು ಎರಡನೇ ಮುದ್ರಣ 2004 ಪುಟ 6
11. ಕೆ.ಶಿವರಾಮ ಕಾರಂತ 'ಅರಸಿಕರಲ್ಲ' ಸಪ್ನ ಬುಕ್ ಹೌಸ್ ಬೆಂಗಳೂರು ಮರು ಮುದ್ರಣ, ಜುಲೈ 2003 ಪುಟ 61
12. ಕೆ.ಶಿವರಾಮ ಕಾರಂತ 'ಅರಸಿಕರಲ್ಲ' ಸಪ್ನ ಬುಕ್ ಹೌಸ್ ಬೆಂಗಳೂರು ಮರು ಮುದ್ರಣ, ಜುಲೈ 2003 ಪುಟ 65, 66
13. ಕೆ.ಶಿವರಾಮ ಕಾರಂತ 'ಅರಸಿಕರಲ್ಲ' ಸಪ್ನ ಬುಕ್ ಹೌಸ್ ಬೆಂಗಳೂರು ಮರು ಮುದ್ರಣ, ಜುಲೈ 2003 ಪುಟ 42

ಅಧ್ಯಾಯ - 5 ಸಮಾರೂಪ

ಪ್ರಾರಂಭದ ಪ್ರವಾಸ ಕಥನಗಳು ಧಾರ್ಮಿಕ ಕ್ಷೇತ್ರಗಳು ಮತ್ತು ತೀರ್ಥಯಾತ್ರೆಗಳನ್ನು ನೋಡಿಕೊಂಡು ಬಂದಂತಹ ಯಾತ್ರ ಸ್ಥಳಗಳ ಭಕ್ತಿಗಳನ್ನು ಒಳಗೊಂಡ ಪ್ರವಾಸದ ಪರಿಚಯವನ್ನು ಮಾಡಿಸುವ ಪುಸ್ತಕಗಳನ್ನು ಕಾಣುತ್ತೇವೆ, ಇದಕ್ಕೆ ಕಾರಣ ಭಾರತೀಯ ಸಂಸ್ಕೃತಿಯಲ್ಲಿ ತೀರ್ಥಯಾತ್ರೆ ಮತ್ತು ಪುಣ್ಯ ಸಂಪಾದನೆ, ಸ್ವರ್ಗದ ಆಸೆಗಳು ಇವುಗಳ ಮಹತ್ವದಿಂದಲೆ ಅವುಗಳ ಪ್ರಚಾರವನ್ನು ಒಳಗೊಂಡ ಹೊತ್ತಿಗೆಗಳು ಪ್ರಕಟಗೊಳ್ಳುತ್ತಿದ್ದವು. ಬ್ರಿಟಿಷರು ಭಾರತಕ್ಕೆ ಬಂದ ನಚಿತರ ಹಲವು ರೀತಿಯಲ್ಲಿ ಭಾರತ ದೇಶವು ದಿವಾಳಿಯಾದರೂ ಕೂಡ ಅಲ್ಪ–ಸ್ವಲ್ಪ ವೈಚಾರಿಕ ಆಲೋಚನಾಮನೋಭಾವ, ಸಾಮಾಜಿಕತ್ವದ ಅರಿವು, ರಾಷ್ಟ್ರೀಯತ್ವದ ಪರಿಕಲ್ಪನೆ, ಉದಾರತ್ವ ಇನ್ನಿತರ ಕೆಲವು ಸುಧಾರಣೆಗಳನ್ನು ಕಂಡೆವು ಪಾಶ್ಚತ್ಸರು ಭಾರತದಲ್ಲಿ ನಡೆಸಿದ ಜಾನಪದ ಅಧ್ಯಯನವು ಸ್ಥಳೀಯವಾಗಿ, ದೇಸಿಯವಾಗಿ, ಸಾಂಸ್ಕೃತಿಕವಾಗಿ ಅದರ ಮಹತ್ವವೇನು ಎಂಬ ಅರಿವು ಕೂಡ ಭಾರತೀಯರಿಗೆ ಮನದಟ್ಟಾಯಿತು. ಇದೇ ರೀತಿಯಾಗಿ ಪ್ರವಾಸಕ್ಕೆ ಸಂಬಂಧಿಸಿದಂತೆ ಭಾರತ ದೇಶಕ್ಕೆ ಭೇಟಿ ನೀಡಿದ ವಿದೇಶಿ ಯಾತ್ರಿಕರು ಅಥವಾ ಪ್ರವಾಸಿಗರ ಕೃತಿಗಳು ಹಾಗೂ ಅವುಗಳ ಚಾರಿತ್ರಿಕ ಮಹತ್ವದ ಪ್ರಜ್ಞೆಯೂ ನಮ್ಮಲ್ಲಿ ಮೂಡಿತು. ಇದರ ಫಲವಾಗಿ ಕನ್ನಡದಲ್ಲಿ ಪ್ರವಾಸ ಕಥನಗಳನ್ನು ಕಂಡೆವು. ಈಗ ಇನ್ನೂ ಒಂದು ಹೆಜ್ಜೆ ಮುಂದುವರೆದಿದ್ದು ಸೃಜನಶೀಲ ಸಾಹಿತ್ಯದ ಪ್ರಕಾರವಾಗಿ ಪ್ರವಾಸ ಸಾಹಿತ್ಯವು ಅಧ್ಯಯನದ ಮಹತ್ವವನ್ನು ಪಡೆದುಕೊಂಡಿದೆ. ಸಂಶೋಧನೆಯ ಪ್ರವಾಸ, ಸಂತೋಷಕ್ಕಾಗಿ, ಒಂಟಿತನವನ್ನು ಕಳೆಯಲು ಪ್ರವಾಸಕ್ಕೆ ಹೋಗುವವರ ಸಂಖ್ಯೆ ಧಾರ್ಮಿಕ ಪ್ರವಾಸಿಗಳಿಗೆ ಹೋಲಿಸಿ ಕೊಂಡರೆ ಕನಿಷ್ಠ ಮಟ್ಟದಲ್ಲಿದೆ ಎನ್ನಬಹುದು. ಅಧ್ಯಯನ ಮನೋರಂಜನೆ ಸ್ಥಳದ ಕುತೂಹಲವನ್ನು ಕುರಿತು ಇರುವ ಬೆರಳೆಣಿಕೆಯ ಸಂಖ್ಯೆಯ ಪ್ರವಾಸಿಗಳಲ್ಲಿ ಕೆಲವರು ತಮ್ಮ ಪ್ರವಾಸದ ಅನುಭವಗಳನ್ನು ಅಭಿವ್ಯಕ್ತಿಯ ಮೂಲಕ ಓದುಗರೊಡನೆ ಅಥವಾ ಸಮಾಜದೊಡನೆ ಹಂಚಿಕೊಳ್ಳುತಿವ ಮೂಲಕ ಪ್ರವಾಸದ ಸವಿಯನ್ನು ನೀಡುತ್ತಿದ್ದಾರೆ ಕೆಲವರು ಮೌಖಿಕವಾಗಿ ಹಂಚಿಕೊಳ್ಳುತ್ತಿದ್ದಾರೆ, ಕೆಲವರು ಲಿಖಿತರೂಪದಲ್ಲಿ ಹಂಚಿಕೊಳ್ಳುತ್ತಿದ್ದಾರೆ. ವಿಶೇಷತೆ ಏನೆಂದರೆ ಪ್ರವಾಸದ ಅನುಭವಗಳನ್ನು ಮಾತ್ರ ಹಂಚಿಕೊಳ್ಳದೇ ಸಮಕಾಲಿನ ಸಂದರ್ಭಕ್ಕೆ ಸಮಾಜವನ್ನು ವಿಡಂಭಿಸುತ್ತಾ, ವೈಜ್ಞಾನಿಕವಾಗಿ, ವಿಮರ್ಶಾತ್ಮಕವಾಗಿ, ತುಲನಾತ್ಮಕವಾಗಿ ಚರ್ಚಿಸುವ ಮೂಲಕ ನವ ಸಮಾಜದ ನಿರ್ಮಾಣವನ್ನು ಮಾಡಲು ಪ್ರಯತ್ನಿಸಿದ್ದಾರೆ. ಅದರಲ್ಲಿ ವಿಶೇಷವಾಗಿ ಕನ್ನಡದ ಪ್ರವಾಸದ

ಕಥನಗಳು ಬಹುಮುಖಿ ಆಯಾಮಗಳನ್ನು ಹೊಂದಿದ್ದು ಅಧ್ಯಯನಕ್ಕೆ ಮಹತ್ವಪೂರ್ಣವಾದ ಆಕಾರಗಳಾಗಿವೆ ಎನ್ನಬಹುದು.

ನಾಗರೀಕತೆಯನ್ನು ಕುರಿತಾದ ಅಧ್ಯಯನಗಳು ಎಲ್ಲಾ ರಾಷ್ಟ್ರಗಳಲ್ಲೂ ಮುಂದವರೆದಿವೆ ಭಾರತದಲ್ಲಿ ಕೂಡ ಮೆಹಂಜುದಾರು ನಾಗರೀಕತೆಯ ಪ್ರದೇಶದಲ್ಲಿ ಉತ್ಖನನಗಳು ನಡೆಯುತ್ತಲೆ ಇದೆ. ಗ್ರೀಕ್ ನಾಗರೀಕತೆಯನ್ನು ತುಂಬ ಪ್ರಾಚೀನ ನಾಗರೀಕತೆ ಕ್ರಿ.ಪೂರ್ವಾರ್ಧದಲ್ಲಿ ಆಡಳಿತ ವ್ಯವಸ್ಥೆ ನಗರಗಳು, ಕಾನೂನು ಸಾಹಿತ್ಯ ಮತ್ತು ಕಲೆಯಲ್ಲಿ ಉನ್ನತವಾದ ಸ್ಥಾನವನ್ನು ಪಡೆದಿತ್ತು. ಇಂದು ಜಾಗತೀಕರಣದ ಸಂದರ್ಭದಲಿ ಅನೇಕ ಪ್ರಾಚೀನ ನಾಗರೀಕತೆಗಳು ಹೇಳಲು ಹೆಸರಿಲ್ಲದಂತಾಗಿದೆ, ಇದಕ್ಕೆ ಕಾರಣ ಸಾಮ್ರಾಜ್ಯಗಳ ವಿಸ್ತರಣೆ ಹಾಗೂ ದುರಾಸೆಯ, ಸ್ವಾರ್ಥದ ಆಕ್ರಮಣಕಾರಿ ಮನೋಭಾವ ಅನೇಕ ನಾಗರೀಕತೆಗಳನ್ನು ಮೆಟ್ಟಿ ನಿಂತಿದೆ. 'ನೇಮಿಚಂದ್ರ' ಅವರ 'ಪೆರುವಿನ ಪವಿತ್ರ ಕಣಿವೆ' ಪ್ರವಾಸ ಕಥನದಲ್ಲಿ ನಾಗರೀಕತೆಯನ್ನು ಕುರಿತಂತೆ ಮತ್ತು ದಕ್ಷಿಣ ಅಮೆರಿಕದ ಇನ್ಕಾ ಸಾಮ್ರಾಜ್ಯವನ್ನು ಸ್ಪಾನಿಷರು ಆಕ್ರಮಿಸಿಕೊಂಡರು, ಜೊತೆಗೆ ಅವರ ಕೆಚುವಾ ಭಾಷೆಯ ಬದಲಾಗಿ ಸ್ಪಾನಿಷ್ ಭಾಷೆಯು ಇಂದು ಅಲ್ಲಿಯ ಭಾಷೆಯಾಗಿದೆ. ಹೀಗೆ ಹೊರಗಿನಿಂದ ಬಂದಂತಹ ದಾಳಿಕೋರರು ನಾಗರೀಕತೆಯನ್ನು ಅಳಿಸಿ ಹಾಕಿದರು. ಭಾರತವು ವಸಹಾತುಶಾಹಿಗೆ ಒಳಪಟ್ಟ ಸಂದರ್ಭದಲ್ಲಿ ಈ ದೇಶದ ಜನರು ಸುಸಂಸ್ಕೃತರಾಗಿರಲಿಲ್ಲ ಮತ್ತು ಚರಿತ್ರೆಯು ಇರಲಿಲ್ಲ ಅವುಗಳನ್ನು ಕಲಿಸುವುದರ ಮೂಲಕ ನಾಗರೀಕ ಸಮಾಜವನ್ನು ನಾವು ಮಾಡಿದ್ದೇವೆ ಎಂದು ಪಾಶ್ಚತ್ಯರು ತಮ್ಮನ್ನು ತಾವು ಸಮರ್ಥಿಸಿಕೊಂಡರು. ಪ್ರವಾಸ ಕಥನಗಳು ಕೇವಲ ಪ್ರವಾಸದ ಸಂದರ್ಭದಲ್ಲಿ ತಾವು ನೋಡಿದ ಸ್ಥಳಗಳನ್ನು ಪರಿಚಯವನ್ನು ಮಾಡಿಕೊಡದೇ ಸಮಕಾಲೀನ ಸಂದರ್ಭದ ಮತ್ತು ಪೂರ್ವದ ಇತಿಹಾಸದದೊಡನೆ ತುಲನಾತ್ಮಕವಾದ ಚರ್ಚೆಯ ಮೂಲಕ ಇತಿಹಾಸ ನಾಗರೀಕತೆಯ ಸ್ಪರ್ಶವನ್ನು ನೀಡುತ್ತವೆ.

ಸಂಸ್ಕೃತಿಯನ್ನು ಕುರಿತಾದ ವಿಚಾರಗಳು ಶಿಕ್ಷಿತರು, ಅಶಿಕ್ಷತರು ಎಲ್ಲರೂ ಕೂಡ ಚರ್ಚಿಸುವಂತಹದ್ದೇ ಇಂದಿನ ಸಂದರ್ಭವಾಗಿದೆ, ಸಂಸ್ಕೃತಿಯನ್ನು ಅಶಿಕ್ಷಿತರು ಇಂದು ಕೂಡ ಸಂಸ್ಕಾರದ ಹೆಸರಲ್ಲಿ ಗುರುತಿಸುತ್ತಾರೆ. ಮಕ್ಕಳು ತಪ್ಪು ಮಾಡಿದಾಗ, ದೊಡ್ಡವರ ವಿರುದ್ಧವಾಗಿ ಮಾತಾನಾಡಿದಾಗ ಸಂಸ್ಕಾರವನ್ನೇ ಕಲಿತಿಲ್ಲ ಎನ್ನುತಾರೆ. ಶಿಕ್ಷಿತ ವಲಯದಲ್ಲಿ, ಅಕಾಡೆಮಿಕ್ ವಲಯದಲ್ಲಿ ಸಂಸ್ಕೃತಿಯ ಪರಿಕಲ್ಪನೆ ಅಸ್ತಿತ್ವವನ್ನು ಕಾಪಾಡಿಕೊಳ್ಳುವಂತಹದು ತನ್ನ ಜೀವನದ ಶೈಲಿ, ರೀತಿ, ನೀತಿ, ನಂಬಿಕೆ ಆಚಾರ ವಿಚಾರಗಳು ಹೀಗೆ ಜೀವನದ ಸಂಪೂರ್ಣ ಬದುಕನ್ನು ಕಂಡು ಕೊಳ್ಳುವಂತಹದು ಪ್ರತಿಯೊಬ್ಬರಿಗೂ ಕೂಡ ಅವರದೇ ಆದ ಸಂಸ್ಕೃತಿಯನ್ನು ಭಾರತೀಯ ಸಂಸ್ಕೃತಿ ಎಂದು ಬಿಂಬಿಸಲಾಗಿದೆ. ಭಾರತೀಯ

ಸಂಸ್ಕೃತಿಯ ಚರ್ಚೆಗಳು ಏನೇ ಇರಲಿ, ಈಗ ಆ ವಿಷಯಕ್ಕಿಂತ ಇಡೀ ಭಾರತೀಯ ಸಂಸ್ಕೃತಿಗೆ ಎದುರಾಗಿ ನಿಲುವಂತಹ ಸಂಸ್ಕೃತಿ ಭಾರತೀಯ ಸಮಾಜಕ್ಕೆ ಲಗ್ಗೆ ಇಡುತ್ತಿದೆ ನಮ್ಮ ಸಂಸ್ಕೃತಿಯನ್ನು ಕಾಪಾಡಿಕೊಳ್ಳುವಂತಹ ಕೂಗು ಎಲ್ಲೆಲ್ಲೂ ಕೇಳಿಬರುತ್ತಿದೆ. ಆದರೆ ಜನ ಸಾಮಾನ್ಯ ಮತ್ತು ಐ.ಟಿ.ಬಿ.ಟಿ ಉದ್ಯೋಗಿಗಳು ಹೊಸ ಸಂಸ್ಕೃತಿಯ ಅಧೀನಕ್ಕೆ ಒಳಗಾಗಿದ್ದಾರೆ. ಸಂಸ್ಕೃತಿಗಳ ದಾಳಿಯ ಚರ್ಚೆಗಳು ಕೇವಲ ಅಧ್ಯಯನ, ಸಂಶೋಧನೆ, ಉಪನ್ಯಾಸಗಳ ಚರ್ಚೆಗಳಿಗೆ ಸಿಮೀತವಾಗಿದೆ. ಜನ ಸಾಮಾನ್ಯರಿಗೆ ಇದರ ತಿಳುವಳಿಕೆ ಇಲ್ಲವಾಗಿದೆ ಜಿ.ಎನ್. ಮೋಹನರವರು ಕೂನಬಾದ 'ಉನ್‌ಪೆಸ್ಟಿಟಲ್' ಉತ್ಸವದ ಒಂದು ವಿಚಾರ ಸಂಕಿರಣದಲ್ಲಿ ಕಪ್ಪು ಕಾಫಿಗೆ ಹಾಲು ಹಾಕಿಸಿಕೊಂಡಾಗ ಲೇಖಕರ ಮೇಲೆ ಸಿಟ್ಟು ಕರಿದ್ದನ್ನು ದಾಖಲಿಸಿದ್ದಾರೆ. "ಕಾಫಿಗೆ ನಾನು ಹಾಲು ಹಾಕಿಸಿಕೊಂಡದ್ದೇ ತಡ ಇಂಗ್ಲೇಡ್‌ನ ಮೇಲೆ ತನ್ನ ಹೊಟ್ಟೆಯಲ್ಲಿಟ್ಟುಕೊಂಡಿದ್ದ ಸಿಟ್ಟನ್ನೆಲ್ಲಾ ಹೊರಗೆ ಚೆಲ್ಲಿದ್ದ ಆಕೆ ಹೊಸ ಇತಿಹಾಸದ ಪಾಠ ಮಾಡಿದ್ದಳು. ಬ್ರಿಟಿಷರು ಭಾರತದ ಮೇಲೆ ಮಾತ್ರವಲ್ಲ ಅಡಿಗೆ ಮನೆಗೆ ನುಗ್ಗಿ ಕಾಫಿ ಮೇಲೂ ದಾಳಿ ಮಾಡಿದ್ದರು" (1) ಬ್ರಿಟಿಷರು ಕೇವಲ ಭಾಷೆಯಲ್ಲಿ ಅಲ್ಲ ಉಡುಗೆ-ತೂಡುಗೆಯಲ್ಲಿ ರೀತಿ-ನೀತಿಯಲ್ಲಿ ಮತ್ತು ಸಾಂಪ್ರಾದಾಯಿಕವಾಗಿದ್ದ ಊಟದ ವ್ಯವಸ್ಥೆಯ ಮೇಲೆ ಸಹ ಲಗ್ಗೆ ಇಟ್ಟರೂ. ಇಂದು ಟೀ ಮತ್ತು ಕಾಫೀ ಬಳಸದೇ ಇರುವ ಕುಟುಂಬಗಳು ಭಾರತದಲ್ಲಿ ಇಲ್ಲ ಎಂದೇ ಹೇಳಬಹುದು ಅಷ್ಟರ ಮೆಟ್ಟಿಗೆ ಪಾಶ್ಚಾತ್ಯರು ಬದಲಾಯಿಸಿ ನವಸಂಸ್ಕೃತಿಯನ್ನಾಗಿಸಿ ಬಿಟ್ಟಿದ್ದಾರೆ ಎಂಬುದನ್ನು ಕೂಡ ಇಂದಿನ ಸಂದರ್ಭಕ್ಕೆ ಜರುರಾಗಿ ಚರ್ಚಿಸಬೇಕಾದ ವಿಷಯವಾಗಿದೆ.

ಜೀವನದಲ್ಲಿ 'ಶಿಸ್ತು' ಎನ್ನುವುದು ಬಹಳ ಮುಖ್ಯವಾದದು ಶಿಸ್ತು ಇಲ್ಲದ ವ್ಯಕ್ತಿ ಎಷ್ಟೇ ದೊಡ್ಡ ಉನ್ನತವಾದ ಹುದ್ದೆಯಲ್ಲಿ ಇದ್ದರೂ ಅವನಿಗೆ ಗೌರವವನ್ನು ತಂದುಕೂಡದು. ಸಾಮಾನ್ಯ ವ್ಯಕ್ತಿಯ ತನ್ನ ಜೀವನದಲ್ಲಿ ಶಿಸ್ತನ್ನು ಬೆಳಸಿಕೊಂಡರೆ ಸಮಾಜಕ್ಕೆ ಮಾದರಿಯಾಗಬಹುದು. ಯಾವ ದೇಶದ ಪ್ರತಿಯೊಬ್ಬ ಸಾಮಾನ್ಯ ಪ್ರಜೆ ತನ್ನ ಜೀವನದಲ್ಲಿ ಶಿಸ್ತವನ್ನು ಪಾಲಿಸಿಕೊಂಡು ಬರುತ್ತ ಮತ್ತೊಬ್ಬರಿಗೆ ಮಾದರಿಯಾಗುತ್ತಾನೆ. ಯೂ ಅಂತಹ ವ್ಯಕ್ತಿ ತನ್ನ ಜೀವನದಲ್ಲಿ ಸಫಲತೆಯನ್ನು ಪಡೆದುಕೊಳ್ಳುತ್ತಾನೆ. ದೇಶವು ಸಹ ಪ್ರಗತಿ ಹೊಂದಲು ಸಾಧ್ಯವಾಗುತ್ತದೆ. 'ಅಮೆರಿಕದಲ್ಲಿ ಗೊರೂರು' ಪ್ರವಾಸ ಕಥನದಲ್ಲಿ ಅಮೆರಿಕೆಯ ಪ್ರಜೆಗಳ ಶಿಸ್ತು ಮತ್ತು ಕಾರ್ವದಕ್ಷತೆಯಿಂದ ಅಮೆರಿಕ ದೇಶ ಮತ್ತು ಪ್ರಜೆಗಳು ಸುಖವಾಗಿರುವುದನ್ನು ಬಣ್ಣಿಸುತ್ತಾರೆ. ನಗರಗಳ ಸ್ವಚ್ಛತೆ ಯಂತ್ರಗಳ ಬಳಿಕೆ ಇವುಗಳನ್ನು ಕಾಪಾಡಿಕೊಳ್ಳುವ ರೀತಿಯನ್ನು ಗೂರೂರರು ಮೆಚ್ಚಿದ್ದಾರೆ ಪ್ರಶಂಸಿಸುತ್ತಾರೆ. ಭಾರತ ದೇಶದ ನಾಗರೀಕತೆಯು

ಪುರಾತನವಾದದ್ದು, ಸಂಸ್ಕೃತಿಯು ಪುರಾತನವಾದದ್ದು ಇನ್ನೊಂದು ದೇಶಕ್ಕೆ, ಜಗತ್ತಿಗೆ ಮಾದರಿಯಲ್ಲಿ ಇರಬೇಕಾದಂತಹ ಎಲ್ಲ ರೀತಿಯಲ್ಲೂ ಮುಂದುವರೆಂದತಹ ರಾಷ್ಟ್ರ ಎನ್ನುತ್ತಾರೆ.

ಪ್ರವಾಸೋದ್ಯಮ ಇತ್ತಿಚೀನ ದಿನಗಳಲ್ಲಿ ಲಾಭದಾಯಕ ಉದ್ಯಮವಾಗಿದೆ ಪ್ರವಾಸೋದ್ಯಮಕ್ಕೆ ಪ್ರವಾಸ ಕಥನಗಳು ಪರೋಕ್ಷವಾಗಿ, ಪೂರಕವಾಗಿ ನಿಲ್ಲುತಿದೆ. ಹೇಗೆಂದರೆ ಪ್ರವಾಸ ಕಥನಗಳು ಲೇಖಕನ ಅನುಭವಗಳ ಜೊತೆಗೆ ತಾನು ನೋಡಿದ ಪ್ರವಾಸ ಸ್ಥಳದ ಪರಿಚಯ ಮಾಡಿಕೂಡುತ್ತಾ, ಅಲ್ಲಿನ ಸರ್ಕಾರ ಪ್ರವಾಸೋದ್ಯಮವನ್ನು ಹೇಗೆ ನಿರ್ವಹಿಸುತ್ತಿದೆ. ಜನರು ಹೇಗೆ ಅದಕ್ಕೆ ಆಕರ್ಷಿತರಾಗಿದ್ದಾರೆ ಎಂಬುದನ್ನು ತಿಳಿಸುತ್ತದೆ. 'ಅರಿಸಿಕರಲ್ಲ' ಪ್ರವಾಸ ಕಥನದಲ್ಲಿ ಕಾರಂತರು ಬರ್ಲಿನ ನಗರದಲ್ಲಿ ಸಂಚಾರಕ್ಕೆ ಸೌಲಬ್ಯವನ್ನು ಒದಗಿಸುವ ಟ್ರಾಮುಗಳ ಬಗ್ಗೆ ವಿಶಾಲವಾದ ಬೀದಿಗಳ ಬಗ್ಗೆ ವಿಚರಣೆ ನೀಡುತ್ತಾ 'ಮ್ಯೂಸಿಯಂಗಳ' ಮಹತ್ವವನ್ನು ಅವುಗಳನ್ನು ಕಾಪಾಡಿಕೊಂಡು ಬಂದಿರುವಂತಹ ರೀತಿಯನ್ನು ಮೆಚ್ಚುತ್ತಾರೆ. ಅಲ್ಲಿನ ಸೊಗಸು, ಶುಚಿತ್ವದ ಬಗ್ಗೆ ಪರಿಚಯಿಸುತ್ತಾರೆ. ಮ್ಯೂಸಿಯಂ ವೈಭವವನ್ನು ಕುರಿತು ಈ ನಗರದ ಯಾವ ಭಾಗಕ್ಕೆ ನಾವು ವಿಹಾರಕ್ಕೆ ಹೋದರೂ ಅಲ್ಲಿನ ಸೊಗಸು, ಸಂಪತ್ತು ಶುಚಿ ನಮ್ಮನ್ನು ಆಕರ್ಷಿಸುತ್ತದೆ. ವಿರಾಮಗತಿಯಿಂದ ಕುಳಿತೋ ಅಲೆಯೋ ನೋಡಲು ಬೇಕಾದಷ್ಟು ಪ್ಲಾಜಾಗಳಿವೆ. ಅವುಗಳಲ್ಲಿರುವ ಆಧುನಿಕ ಕಾರಂಜಿಗಳು, ಇಂದಿನ ಕಲಾವಿದರ ಚಳಕವನ್ನು ತೋರಿಸಿದರೆ, ಅವುಗಳ ಅಚೀಚಿರುವ ಎಷ್ಟೋ ಪುರಾತನ ವಾಸ್ತುಗಳು ಪುನರಜ್ಜೀವನ ಕಾಲದಿಂದ ಬರೋಕ ಯುಗಕ್ಕೆ ಹೆಮ್ಮೆಯಿಂದ ಹೆಜ್ಜೆ ಇರಿಸಿದ ವಾಸ್ತು ವಿಚಿತ್ರಗಳಾನ್ನೆಲ್ಲ ತೋರಿಸುವ ಸ್ಮಾರಕಗಳೋ, ಮಹಾದ್ವಾರಗಳೋ, ಚಾವಡಿಗಳೋ, ಸೌಧಗಳೋ, ಉದ್ಯಾನಗಳೋ, ಇನ್ನೇನೋ ಇವೆ. ಆ ದೃಷ್ಟಿಯಿಂದ ಡ್ರೆಸ್‌ಡೆನ್ ನಗರ ಮದ್ಯಯುಗೀನ ವೈಭವವನ್ನು ಇನ್ನೂ ಅಚ್ಚಳಿಯದೆ ಸಾರುತ್ತಿರುವ ಆಧುನಿಕ ನಗರ ಎನ್ನಬಹುದು. (2)

ಕಾರಂತರು ಡ್ರೆಸ್‌ಡೆನ್ ನಗರದ ಮದ್ಯಯುಗೀನ ಕಾಲದ ವೈಭವವನ್ನು ಸಾರುತ್ತಿದ್ದಾರೆ ಜೊತೆಗೆ ಇಲ್ಲಿನ ಸರ್ಕಾರ ಈ ನಗರಕ್ಕೆ ಬರುವ ಪ್ರವಾಸಿಗರನ್ನು ಗಮನದಲ್ಲಿ ಇಟ್ಟಿಕೊಂಡು ಮಾಡಿರುವ ಸಂಚಾರದ, ಹೋಟೆಲ್‌ಗಳಾ ವ್ಯವಸ್ಥೆಯನ್ನು ಸಹ ಚಿತ್ರಿಸಿದ್ದಾರೆ. ಮ್ಯೂಸಿಯಂನ ಮಹತ್ವ ಅದನ್ನು ಪ್ರತಿಯೊಬ್ಬರು ಏಕೆ ನೋಡಬೇಕು ಎಂಬುದನ್ನು ಸಹ ವಿಶ್ಲೇಷಿಸಿದ್ದಾರೆ. ಭಾರತದ ಮ್ಯೂಸಿಯಂಗಳು ಅವ್ಯವಸ್ಥೆಯು ಇಂದು ಕೂಡ ಎದ್ದು ಕಾಣುತ್ತಿದೆ. ಸರ್ಕಾರಗಳು ಇವುಗಳ ಬಗ್ಗೆ ಎಚ್ಚೆತ್ತು ಕೊಳ್ಳಬೇಕಾಗಿದೆ. ಭಾರತದ ದೇಶದ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ಸುಲಿಗೆ ಮತ್ತು ಅಪಮಾನಗಳು ನಡೆಯುತ್ತಲೇ ಇವೆ. "ಬೇರೆ ಬೇರೆ ಸ್ಥಳಗಳನ್ನು ನೋಡುತ್ತ ಇತಿಹಾಸವನ್ನು ಮೆಲುಕು ಹಾಕುತ್ತಿರುವಾಗ ಹತ್ತೆಂಟು ಹುಡುಗರು ಬೆನ್ನಟ್ಟಿಕೊಂಡು ಓಡಿಬಂದರು. ಕೆಲವರು ಕೂಯ್ ಹಾಕಿದರು, ಇನ್ನಾರೋ ಕಲ್ಲು ತೂರಿದರು ಯಾರೋ "ದಪ್ಪಕತ್ತೆ"

ಎಂದು ಕೂಗಿದರು. ಪ್ರತಿ ದಿನ ನೂರಾರು ಪ್ರವಾಸಿಕರು ಬಂದು ಹೋಗುವ ಸ್ಥಳಗಳು ಹಾಡು ಇದೆಯೋ ಎಂದು ವಿಸ್ಮಯ ಪಡುತ್ತ ಕ್ರಾಂತಿಕಾರಿ ಬಂಗಾಲಿಗಳ ಹೀನ ಸಂತತಿಗಾಗಿ ಮರುಗುತ್ತ ಸ್ಟೇಶನ್ನಿನತ್ತಸಾಗಿದೆ."(3) ಎಂದು 'ವಂಗದರ್ಶನ' ಪ್ರವಾಸ ಕಥನದಲ್ಲಿ 'ಕೃಷ್ಣಾನಂದ ಕಾಮತ' ಅವರು ಬಂಗಾಳದ ಪ್ರವಾಸದ ಸಂದರ್ಭವನ್ನು ಪರಿಚಯಿಸುತ್ತಾರೆ. ಹಾಗೆಯೇ ಇಲ್ಲಿನ ಸ್ಮಾರಕಗಳನ್ನು ಮ್ಯೂಸಿಯಂಗಳನ್ನು ಯಾಕೆ ರಾಜ್ಯ ಸರ್ಕಾರಗಳು ಹೀಗೆ ಅವ್ಯವಸ್ಥಿತಗೊಳಿಸಿದ್ದಾರೆ ಎಂದು ಮರುಗುತ್ತಾರೆ. ರಷ್ಯಾ ಮತ್ತು ಜರ್ಮನಿ ದೇಶದಲ್ಲಿರುವಂತ ವ್ಯವಸ್ಥೆಗಳು ಅಮೆರಿಕ ಮತ್ತು ಕೆನಡಾ ದೇಶಗಳಲ್ಲಿ ಇದ್ದು ಪ್ರವಾಸಕ್ಕೆ ಸುವ್ಯವಸ್ಥಿತವಾದ ಪ್ರವಾಸೋದ್ಯಮವನ್ನು ಸಜ್ಜುಗೊಳಿಸಿದ್ದಾರೆ ಎಂಬುವದು ಅಮೆರಿಕದಲ್ಲಿ ಗೊರೂರು ಪ್ರವಾಸ ಕಥನದಿಂದ ತಿಳಿಯುತ್ತದೆ. ರಾಕೀಸ್ ಎಂಬ ವಿಶಾಲವಾದ ಪರ್ವತ ಭಾಗದಲ್ಲಿ ಅನೇಕ ರೀತಿಯಲ್ಲಿ ಪ್ರವಾಸಿಗರಿಗೆ ಆಕರ್ಷಿಕವಾಗುತ್ತ ವ್ಯವಸ್ಥೆಯನ್ನು ನಿರ್ಮಿಸಿವೆ. ಅವುಗಳನ್ನು ನೋಡಿಕೊಳ್ಳುವ ಸಂಸ್ಥೆಗಳು ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ಕೂಡ ಸಂಬಂಧಪಟ್ಟ ವಲಯದಲ್ಲಿ ಸ್ನಾತಕೋತ್ತರ ಪದವಿಯನ್ನ್ ಪಡೆವರಿಗೆ ಅದ್ಯತೆಯನ್ನು ನೀಡುತ್ತದೆ. ಭಾರತ ದೇಶದಲ್ಲಿ ಕೂಡ ಪುರಾತನ ಸ್ಮಾರಕಗಳ ರಕ್ಷಣೆಯ ಆಸಕ್ತಿವಹಿಸಿದ್ದು "1904ರಲ್ಲಿ ಪುರಾತನ ಸ್ಮಾರಕಗಳ ಸಂರಕ್ಷಣೆಗಾಗಿ ಪುರಾತನ ಸಂರಕ್ಷಣಾ ಕಾಯಿದೆಯನ್ನು ಜಾರಿಗೆ ತಂದನು."(4) 1904ರಲ್ಲಿ ಲಾರ್ಡ್ ಕರ್ಜನ್ ಸ್ಮಾರಕ ಸಂರಕ್ಷಣಾ ಕಾಯಿದೆಯನ್ನು ತಂದನು. ಪುರಾತನ ಸ್ಮಾರಕಗಳ ಮಹತ್ವದ ಅರಿವು, ಪ್ರಜ್ಞೆ, ಆಸಕ್ತಿ ವಿದೇಶಿಯರು ವಹಿಸಿದಷ್ಟ ಸ್ವದೇಶಿಯರು ವಹಿಸಿದೀರುವುದು ಆಶ್ಚಸ್ವ ಪಡುವಂತಹ ವಿಷಯವಾಗಿದೆ. ಪ್ರವಾಸೋದ್ಯಮದ ಭಾಗವಾಗಿ ಪ್ರವಾಸ ಕಥನಗಳ ಪ್ರರೋಕ್ಷವಾಗಿ ಬೆಂಬಲಿಸುತ್ತಿವೆ. ಪ್ರವಾಸ ಕಥನವನ್ನು ಓದುವವಂತಹ ಓದುಗನ ಆಕರ್ಷಿತನಾಗುತ್ತಾನೆ. ಆಕರ್ಷಿತವಾದ ಸ್ಥಳಾವನ್ನು ಪ್ರವಾಸ ಮಾಡಲು ಬಯಸುತ್ತಾನೆ. ಆಕರ್ಷಿತವಾದ ವಿಷಯವನ್ನು ಮತ್ತೋಬ್ಬರ ಬಳಿ ಹಂಚಿಕೊಳ್ಳುವ ಮೂಲಕ ಪ್ರವಾಸಕ್ಕೆ ಪರೋಕ್ಷವಾಗಿ ಬೆಂಬಲಿಸುತ್ತಾನೆ.

ಪ್ರವಾಸ ಕಥನವು ಓದುಗನನ್ನು ಯಾವುದೇ ಖರ್ಚುವೆಚ್ಚವಿಲ್ಲದೆ ಪ್ರವಾಸವನ್ನು ಮಾಡಿಸಿಬಿಡಿತ್ತದೆ. ಮೌಲ್ಯವುಳ್ಳಾ ಪ್ರವಾಸ ಕಥನ ಪ್ರವಾಸಿಗನ ಅಭಿರುಚಿ ಜ್ಞಾನದ ದಾಹ, ಓದಿನ ಆಳ, ಅನುಭವ ಇವುಗಳೆಲ್ಲಾವುಗಳ ಮಿಲನದ ಪ್ರತಿಫಲವಾರಿರುತ್ತದೆ. ಕಾರಂತರ ಕಥನಗಳು ಕಲೆಯನ್ನು ಕುರಿತು ಅಭಿವ್ಯಕ್ತಿ ಪಡಿಸುವಾಗ ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಾ ಭಾರತೀಯ ಸಮಾಜದಲ್ಲಿ ಕಲೆಗೆ ಇರುವ ಮಹತ್ವ ಮತ್ತು ಪಾಶ್ಚತ್ಯರು ನೀಡುವ ಮಹತ್ವವನ್ನು ತೌಲನಿಕವಾಗಿ ಚರ್ಚಿಸುತ್ತಾರೆ. ಗೊರೂರು ಅವರು ಸಹ ಅಮೆರಿಕದ ಸಾಮಾನ್ಯ ಜನರ ಶಿಸ್ತು, ಸರ್ಕಾರದ ಜನಪರ ಕಾಳಜಿಗಳು, ಸರ್ವರಿಗಾಗಿ ಹಾಗೂ ಕ್ಷೇತ್ರದ

ಆದ್ಯತೆಯ ಮೇರೆಗೆ ನೀಡುವ ಶಿಕ್ಷಣದ ಮುಕ್ತವಾದ ಅವಕಾಶವನ್ನು ಕುರಿತು ಮಾತಾನಾಡುತ್ತಾ ಇಲ್ಲಿನ ಜನರು ಯಾತ್ರಗಳನ್ನು ಬಳಸುವ ರೀತಿಯನ್ನು ತಿಳುವಳಿಕೆಯನ್ನು ಶ್ಲಾಘಿಸುತ್ತಾರೆ. ನೇಮಿಚಂದ್ರರವರ ಪೆರುವಿನ ಪವಿತ್ರ ಕಣಿವೆಯಲ್ಲಿ ಮತ್ತು ಜಿ.ಎನ್. ಮೋಹನರಮ್ 'ನನ್ನೊಳಗಿನ ಹಾಡು ಕ್ಯೂಬಾ' ಈ ಎರಡು ಪ್ರವಾಸ ಕಥನಗಳು ಶ್ರೀಮಂತ ಹಾಗೂ ಆಧುನಿಕವಾಗಿ ಶಸ್ತ್ರಾಸ್ತ್ರಗಳನ್ನು ಹೊಂದಿರುವ ರಾಷ್ಟ್ರಗಳು ಬಡ ರಾಷ್ಟ್ರಗಳ ಧರ್ಮ, ನಾಗರೀಕತೆ ಮತ್ತು ಸಂಸ್ಕೃತಿಯನ್ನು ನಾಶಮಾಡಿ ತಮ್ಮ ಸಂಸ್ಕೃತಿಯನ್ನು ಹೇರುತ್ತದೆ. ಮೂಲ ನಿವಾಸಿಗಳನ್ನು ಗುಲಾಮರನ್ನಾಗಿ ಮಾಡಿಕೊಂಡಿವೆ ಎಂಬುವುದನ್ನು ಅಭಿವ್ಯಕ್ತಿ ಪಡಿಸುತ್ತಾವೆ. ವಿ.ಸೀ ಅವರ 'ಪಂಪಾಯಾತ್ರೆ' ದೇಸಿಯ ಸಂಸ್ಥಾನದ ಗತ ವೈಭವದ ಮೆರಗನ್ನು ತಿಳಿಸುತ್ತಾ, ನಮ್ಮಲ್ಲಿಯ ಅತಿಯಾದ ಲೋಭ, ಸ್ತ್ರೀವ್ಯಾಮೋಗ, ಸ್ವಜನ ಪಕ್ಷಪಾತಗಳಿಂದ ಸಾಮ್ರಾಜ್ಯಾ ನಾಶ ಎಂಬುದನ್ನು ತಿಳಿಯ ಪಡಿಸುತ್ತಾರೆ. ತೀರ್ಥಯಾತ್ರೆಯ ಪರಿಚಯ ಮಾಡಿಕೊಡಿತ್ತೊದ್ದಂತಹ ಪ್ರವಾಸ ಕಥನಗಳು ನಾಗರೀಕತೆ ಸಂಸ್ಕೃತಿ, ಐತಿಹಾಸಿಕ ಮಹತ್ವ, ಶಿಕ್ಷಣ ಪದ್ಧತಿ (ಪ್ರಾದೇಶಿಕ ಭಾಷಾ ಮಾಧ್ಯಮ) ಜನಪರ ಮಹತ್ವ, ಸ್ತ್ರೀವಾರಿ ನೆಲೆಗಳು, ಸ್ವಾತಂತ್ರೋತ್ತರ ಭಾರತದ ದುಸ್ಥಿತಿ ಎಲ್ಲವನ್ನು ತಿಳಿಸುವ ಚರ್ಚಿಸುವಂತಹ, ವಿಡಂಬಿಸುವಂತಹ ಕಾರ್ಯಗಳನ್ನು ಕೈಗೊಂಡಿವೆ. "ಒಂದು ಪ್ರವಾಸ ಕಥನದಲ್ಲಿ ಬಹಳ ಮುಖ್ಯವಾದದ್ದು ತೌಲನಿಕ ವಿವೇಚನೆ. ಇದು ಇಲ್ಲದ ಪ್ರವಾಸ ಕಥನ ಏನೂ ಪ್ರಯೋಜನಕ್ಕೆ ಬರುವುದಿಲ್ಲ. ನಾವು ಬೇರೆ ದೇಶಗಳಲ್ಲಿ ನೋಡಿದಾಗ, ಈ ಒಂದು ದೇಶದವರು ನಾವು ಪರದೇಶಕ್ಕೆ ಹೋದಾಗ ನಮ್ಮ, ಅವರ ಜೀವನ ಕ್ರಮಗಳನ್ನು ಹೋಲಿಸಿ ನೋಡುವುದರ ಮೂಲಕ ನಮಗೆ ಬರುವಂತ ಆರೋಗ್ಯಕರವಾದ ನಾಚಿಕೆ ಇದೆಯಲ್ಲಿ ಬಹಳ ಮುಖ್ಯವಾದದ್ದು. ಅದು ಇಂಡಿಯಾ ದೇಶದವರಿಗೆ ಆಗಬೇಕಾದದ್ದು. ಯಾವ ಸ್ಥಿತೀಲಿದೀವಿ ನಾವು ಬೇರೆ ದೇಶದವರನ್ನು ನಾವು ನೋಡಿದಾಗ ಅವರು ಎಷ್ಟು ಮುಂದುವರೆದಿದ್ದಾರೆ".(5) ಸ್ವಾತಂತ್ರ್ಯ ಪೂರ್ವಕ್ಕೂ, ಸ್ವಾತಂತ್ರೋತ್ತರಕ್ಕೂ ಪ್ರವಾಸ ಕಥನಗಳ ಆಶಯ ಒದೇಗಿದೆ. ಇಂದು ಜನಾಂಗೀಕವಾಗಿ ಸಾಂಸ್ಕೃತಿವಾಗಿ, ಭಾಷೆ, ನಾಗರೀಕತೆ, ಕಲೆ, ಸಾಹಿತ್ಯ, ರಂಗಭೂಮಿ ಎಲ್ಲ ವಲಯಗಳಿಂದಲೂ ಅಧ್ಯಯನಕ್ಕೆ ಅನುಕೂಲವಾಗುವಂತಹ, ಪ್ರೇರಿಪಿಸುವಂತಹ ಬಹುಮುಖಿ ವಿನ್ಯಾಸಗಳೊಂದಿಗೆ ಕನ್ನಡದ ಪ್ರವಾಸ ಕಥನಗಳ ಬೆಳೆವಣಿಗೆ ಆಗಿದೆ. ಕನ್ನಡದ ಪ್ರವಾಸ ಕಥನಗಳು ಸಂಶೋಧನೆಯ ಆಕಾರವಾಗಿ ಇಂದು ಕನ್ನಡ ಸಾಹಿತ್ಯದಲ್ಲಿ ಗುರುತಿಸಿಕೊಳ್ಳುತ್ತಿವೆ.

ಟಿಪ್ಪಣಿಗಳು :

1. ಜಿ.ಎನ್.ಮೋಹನ್ 'ನನ್ನೊಳಗಿನ ಹಾಡು ಕ್ಯಾಬಾ' ಲೋಡಿಯಾ ಪ್ರಕಾಶಾನ, ಬಳ್ಳಾರಿ ಮೂರನೆ ಮುದ್ರಣ 2009, ಪುಟ 21.
2. ಕೆ.ಶಿವರಾಮ ಕಾರಂತ 'ಅರಸಿಕರಲ್ಲಿ' ಸಪ್ನ ಬುಕ್ ಹೌಸ್, ಜುಲೈ 2003 ಪುಟ 79.
3. ಕೃಷ್ಣಾನಂದ ಕಾಮತ ' ವಂಗದರ್ಶನ' ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು 2006, ಪುಟ 84.
4. ಪ್ರೋ. ವಿ.ಎಂ. ಲಿಂಗಮೂರ್ತಿ 'ಪ್ರವಾಸೋದ್ಯಮ ಚರಿತ್ರೆ' ಪ್ರತ್ಯೂಷ ಪ್ರಕಾಶನ ಮಾಲೂರು, ಕೋಲಾರ ಜಿಲ್ಲೆ 2007 ಪುಟ 132.
5. ಸಂ.ಮಲ್ಲೆಪುರಂ ಜಿ.ವೆಂಕಟೇಶ್ ಪ್ರವಾಸ ಸಾಹಿತ್ಯ ಒಂದು ಅಧ್ಯಯಾನ ಹೊನ್ನ ಪ್ರಕಾಶನ, ಬೆಂಗಳೂರು 1992 ಪುಟ 14.

ಪರಾಮರ್ಶನ ಗ್ರಂಥಗಳು

ಪ್ರಾಥಮಿಕ ಆಕರಗಳು :

1. ಗೊರೂರು ರಾಮಸ್ವಾಮಿ ಅಯ್ಯಂಗಾರ್, 'ಅಮೆರಿಕಾದಲ್ಲಿ ಗೊರೂರು' ಐ.ಬಿ.ಎಚ್ ಪ್ರಕಾಶನ ಬೆಂಗಳೂರು, ಆರನೇ ಮುದ್ರಣ 2001.
2. ನೇಮಿಚಂದ್ರ, 'ಪೆರುವಿನ ಪವಿತ್ರ ಕಣಿವೆಯಲ್ಲಿ' ನವ ಕರ್ನಾಟಕ ಪ್ರಕಾಶನ ಬೆಂಗಳೂರು, ನಾಲ್ಕನೇ ಮುದ್ರಣಾ 2010.
3. ಜಿ.ಎನ್.ಮೋಹನ್, 'ನನ್ನೊಳಗಿನ ಹಾಡು ಕ್ಯೂಬಾ' ಲೋಹಿಯಾ ಪ್ರಕಾಶನ ಬಳ್ಳಾರಿ ಮೂರನೇ ಮುದ್ರಣಾ 2009.
4. ವಿ.ಸೀ. 'ಪಂಪಾಯಾತ್ರೆ' ಅಂಕಿತ ಪುಸ್ತಕ ಬೆಂಗಳೂರು ಆರನೇ ಮುದ್ರಣ 2004.
5. ಕೆ.ಶಿವರಾಮ ಕಾರಂತ 'ಅರಸಿಕರಲ್ಲ' ಸಪ್ನ ಬುಕ್ ಹೌಸ್ ಬೆಂಗಳೂರು ಮರುಮುದ್ರಣ ಜುಲೈ 2003.

ಪೂರಕ ಆಕರಗಳು

1. ಆಲೂರು ವೆಂಕಟರಾಯ, 'ಕರ್ನಾಟಕತ್ವದ ವಿಕಾಸ' ಕನ್ನಡ ಸಾಹಿತ್ಯ ಪರಿಷತು 3ನೇ ಮುದ್ರಣ 2009 ಪುಟ 1
2. ಕೃಷ್ಣಾನಂದ ಕಾಮತ, 'ವಂಗದರ್ಶನ' ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು 2006.
3. ಪ್ರಧಾನ ಸಂಪಾದಕರು ಡಾ.ಬಸವರಾಜ ಕಲ್ಗುಡಿ, ಬಹುಮುಖಿ–8, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 2010.
4. ಸಂಪಾದಕರು, ಮಲ್ಲೇಪುರಂ ಜಿ.ವೆಂಕಟೇಶ್, ಪ್ರವಾಸ ಸಾಹಿತ್ಯ ಒಂದು ಅಧ್ಯಯನ, ಹೊನ್ನ ಪ್ರಕಾಶನ ಬೆಂಗಳೂರು 1992.
5. ರಹಮತ್ ತರೀಕೆರೆ, 'ಪ್ರತಿ ಸಂಸ್ಕೃತಿ' ಅಭಿನವ ಪ್ರಕಾಶನ ಬೆಂಗಳೂರು ಎರಡನೇ ಮುದ್ರಣ 2009.

6. ಪ್ರೊ.ವಿ.ಎಂ. ಲಿಂಗಮೂರ್ತಿ 'ಪ್ರವಾಸೋಧ್ಯಮದ ಚರಿತ್ರೆ' ಪ್ರತ್ಯೂಷ ಪ್ರಕಾಶನ ಮಾಲೂರು ಕೋಲಾರ ಜಿಲ್ಲೆ 2007.
7. ಡಾ.ಎಸ್. ವಿದ್ಯಾಶಂಕರ, 'ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು 2006.

ಖನಗಳು :

1. ಡೇವಿಡ್ ಡಿ ಕಿರ್ಕ್ ಪ್ಯಾಟ್ರಿಕ್ / ಮೆಯೀ ಎಲ್ ಶೇಖ್, (ದಿ ನ್ಯೂಯಾರ್ಕ್ ಟೈಮ್ಸ್) ಪ್ರಜಾವಾಣಿ 'ವಿದ್ಯಾಮಾನ' ಭಾನುವಾರ 14 ಜುಲೈ 2013.